Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–24 | ಜೂನ್ 10–16, 2024 | ಪುಟ 16 | ರೂ.10/–
Volume-18 | Issue-24 | June 10-16, 2024 | Pages:16 | Price: 10/-



ಚುನಾವಣೆ ತೀರ್ಪು ಒಂದು ಮುನ್ನಡೆ:

ಹೋರಾಟ ಮುಂದುವರಿಯಲಿದೆ




ಕರ್ನಾಟಕ ಲೋಕಸಭಾ ಚುನಾವಣೆ:

ಕುಸಿತ ಕಂಡರೂ ಮುಂದುವರಿದ ಅಪಾಯಕಾರಿ ಬಿಜೆಪಿ ಪ್ರಾಬಲ್ಯ

ಹಿಂದಿ ರಾಜ್ಯಗಳಲ್ಲಿ ಬಿಜೆಪಿಗೆ ಭಾರೀ ಹಿನ್ನಡೆ

ಸಂಪತ್ತು ತೆರಿಗೆಗೆ ವಿರೋಧ - ವರ್ಗ ಅಜೆಂಡಾ ಮರೆಮಾಚುವ ಬಿಜೆಪಿ

ಎಕ್ಸಿಟ್ ಪೋಲ್' ಹಗರಣ : ಷೇರು ಮಾರುಕಟ್ಟೆಯಲ್ಲಿ ಸಣ್ಣ ಹೂಡಿಕೆಗಾರರಿಗೆ 30 ಲಕ್ಷ ಕೋಟಿ ನಷ್ಟ



ಪ್ಯಾಲೆಸ್ತೈನ್ ದೇಶವನ್ನೇ ಇಸ್ರೇಲ್ ನುಂಗುತ್ತಾ ಹೋಗುತ್ತಿರುವುದು.


ರಫ್ಹಾದ ನಿರಾಶ್ರಿತರ ಶಿಬಿರದ ಮೇಲಿನ ಮೇ, 26 ರ ದಾಳಿ.

ಪ್ಯಾಲೆಸ್ತೈನಿಯನ್ನರ ನರಮೇಧಕ್ಕೆ ನಿಂತಿರುವ ಇಸ್ರೇಲ್ ಆಕ್ರಮಣ ಖಂಡಿಸಿ ದೇಶವ್ಯಾಪಿ ಪ್ರತಿಭಟನೆ

ಶತಶತಮಾನಗಳಿಂದ ಬಾಳಿ ಬದುಕಿದ ತಾಯ್ನೆಲದ ಬಹುತೇಕ ಭಾಗವನ್ನು ಕಳೆದುಕೊಂಡು ಪರಿತಪಿಸುತ್ತಿರುವ, ಈಗಲೂ ದಿನ ದಿನವೂ ಅಳಿದುಳಿದ ಭಾಗವನ್ನು ಕಳೆದುಕೊಳ್ಳುತ್ತಲೇ ಇರುವ ಪ್ಯಾಲೆಸ್ತೈನಿಯನ್ನರ ಸಂಕಟಗಳು ಪದಗಳಲ್ಲಿ ಹೇಳಿ ಮುಗಿಯಲಾರದ್ದು. ಆಕ್ರಮಣಕೋರ ಇಸ್ರೇಲ್ ಎಂಬ 'ದೇಶ'ದಿಂದ ದಿನ ದಿನವೂ ಬಾಂಬುಗಳ ಸುರಿಮಳೆ. ಶಾಲೆಗಳು, ಮನೆಗಳು, ಕಚೇರಿಗಳು, ಆಸ್ಪತ್ರೆಗಳು, ನಿರಾಶ್ರಿತ ಶಿಬಿರಗಳು ಎಂಬ ಬೇಧವಿಲ್ಲ. ಹೆಂಗಸರು, ಮಕ್ಕಳು, ರೋಗಿಗಳು, ಮುದುಕರು ಎಂಬ ಪರಿಗಣನೆಯೂ ಇಲ್ಲ. ಎಲ್ಲರ ಮೇಲೆ ಆಕ್ರಮಣ. ಎಲ್ಲದರ ಮೇಲೆ ಆಕ್ರಮಣ. ಅನಾಗರಿಕ, ಅಮಾನವೀಯ ಬಾಂಬ್ ದಾಳಿಗಳು, ಜನರು ದಿಕ್ಕೆಟ್ಟು ಓಡುವಂತೆ ಮಾಡುವ ಕ್ರೂರ ಅಕ್ರಮ ಒತ್ತುವರಿಗಳು. ಇದಕ್ಕೆ ಅಮೆರಿಕ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಪ್ರತ್ಯಕ್ಷ–ಪರೋಕ್ಷ ಬೆಂಬಲ, ಕುಮ್ಮಕ್ಕುಗಳು. ಮನುಕುಲವೇ ತಲೆ ತಗ್ಗಿಸಬೇಕಾದ ಹೀನಾತಿಹೀನ ದೌರ್ಜನ್ಯಗಳು, ನಿರ್ದಯ ನರಮೇಧ. ಇದು ಸುಮಾರು ಏಳೆಂಟು ದಶಕಗಳಿಂದಲೂ ತಮ್ಮ ತಾಯ್ನೆಲವನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿರುವ ಪ್ಯಾಲಿಸ್ತೀನಿಯನ್ನರ ಇಂದಿನ ಪರಿಸ್ಥಿತಿ.

ಎರಡನೇ ಮಹಾಯುದ್ಧದ ಸಂತ್ರಸ್ತರಾದ ಯೆಹೂದಿಗಳಿಗೆ, ಅದರಲ್ಲಿಯೂ ಯೂರೋಪ್ ಖಂಡದ ನಾನಾ ದೇಶಗಳಲ್ಲಿ ಹರಡಿದ್ದ ಯೆಹೂದಿಗಳಿಗೆ 'ಅವರದ್ದೇ ಆದ ಒಂದು ದೇಶ ಬೇಕು' ಎಂಬ ಕಾರಣದ ಆಧಾರದಲ್ಲಿ ಇಂಗ್ಲೆಂಡ್ ದೇಶದ ಸೈನ್ಯದ ಬಲದೊಂದಿಗೆ, ಅಮೆರಿಕ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಕುಮ್ಮಕ್ಕಿನೊಂದಿಗೆ, ಅದಕ್ಕೂ ಹಿಂದೆ ಇಲ್ಲದಿದ್ದ 'ಇಸ್ರೇಲ್' ಎಂಬ ಹೊಸ ದೇಶವನ್ನು ಪಶ್ಚಿಮ ಏಷ್ಯಾದ ಭಾಗದಲ್ಲಿ ಸ್ಥಾಪಿಸಲು ನಡೆಸಿದ ಸಂಚಿನ ಫಲವೇ ಈಗಿನ ಘೋರ ಪರಿಸ್ಥಿತಿಗೆ ಕಾರಣ. 'ಪ್ಯಾಲೆಸ್ತೈನ್' ಎಂಬ ಪಶ್ಚಿಮ ಏಷ್ಯಾದ ಒಂದು ಇಡೀ ದೇಶವನ್ನೇ ನುಂಗಿ ನೊಣೆಯಲು ನಡೆಸಲಾದ ಹೊಂಚಿನ ಪರಿಣಾಮವೇ ಪ್ಯಾಲೆಸ್ತೈನ್‌ನ ನೆಲದಲ್ಲಿ ರಕ್ತದ ಕಾಲುವೆಯೇ ಹರಿಯಲು ಕಾರಣವಾಗಿರುವ ಈ ಸಂಘರ್ಷದ ಹಿಂದಿನ ಹೂರಣ. 'ಇಸ್ರೇಲ್' ಎಂಬ ದೇಶದ ಈ ಪೈಶಾಚಿಕ ದಾಳಿಗಳ ವಿರುದ್ಧ ಜಗತ್ತಿನಾದ್ಯಂತ ಇಂದು ಪ್ರತಿಭಟನೆಗಳು ನಡೆಯುತ್ತಿವೆ. ಈ ಸೌಹಾರ್ದ ಚಳುವಳಿಯ ಭಾಗವಾಗಿ ಭಾರತದಲ್ಲಿಯೂ ಇತ್ತೀಚೆಗೆ ದೆಹಲಿಯಲ್ಲಿ ಮತ್ತು ದೇಶದ ನಾನಾ ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ದೆಹಲಿ ಜಂತರ್ ಮಂತರ್‌ನಲ್ಲಿ ಧಿಕ್ಕಾರ ಕೂಗಿ ನಿಂತರು

ಜೂನ್ 1, 2024 ರಂದು 'ಪ್ಯಾಲೆಸ್ತೈನ್ ಸೌಹಾರ್ದ ಸಮಿತಿ'ಯ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಾನಾ ಸಾಮಾಜಿಕ ಸಂಘಟನೆ, ಚಳುವಳಿಗಳ ನೂರಾರು ಕಾರ್ಯಕರ್ತರು, ಮುಖಂಡರು ಸೇರಿ ಪ್ರದರ್ಶನ ನಡೆಸಲಾಯಿತು. ಅತಿ ಕಡಿಮೆ ಸಮಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದು ವಿಶೇಷವಾಗಿತ್ತು. ಚುನಾವಣೆಯ ಕೆಲಸಗಳ ಒತ್ತಡದ ನಡುವೆಯೂ ಹಲವು ರಾಜಕೀಯ ಮುಖಂಡರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಸಾಹಿತಿ–ಚಿಂತಕರು, ಶಿಕ್ಷಕರು, ಎಡಪಂಥೀಯರು ಈ ಪ್ರದರ್ಶನದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯ(ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್)ನ ನಿರ್ದೇಶನವನ್ನು ಉಲ್ಲಂಘಿಸಿ ಪ್ಯಾಲೆಸ್ತೈನ್‌ನ ರಫ್ಹಾದ ಮೇಲೆ ಇಸ್ರೇಲ್ ನಡೆಸಿದ ಆಕ್ರಮಣವನ್ನು ತೀವ್ರವಾಗಿ ಖಂಡಿಸಲಾಯಿತು.

ರಫ್ಹಾದ ಮೇಲಿನ ಈ ದಾಳಿಯ ಮೂಲಕ ಇಸ್ರೇಲ್ ದಕ್ಷಿಣ ಗಾಜಾದ ಮೇಲಿನ ತನ್ನ ಆಕ್ರಮಣವನ್ನು ಇನ್ನಷ್ಟು ವಿಸ್ತರಿಸಿದೆ ಮತ್ತು ಈಜಿಪ್ಟ್ ದೇಶದೊಂದಿಗಿನ ಈ ಗಾಜಾ ಭಾಗದ ಮೇಲೆ ತನ್ನ ಹಿಡಿತ ಸಾಧಿಸಿದೆ. ರಫ್ಹಾದ ಮೇಲೆ ನಡೆಯುತ್ತಿರುವ ಈ ದಾಳಿಯಿಂದ, ಮೊದಲೇ ನಿರಾಶ್ರಿತರಾಗಿದ್ದ ಸುಮಾರು ಹತ್ತು ಲಕ್ಷ ಪ್ಯಾಲೆಸ್ತೈನಿಯನ್ನರು ಇದ್ದುದ್ದೆಲ್ಲವನ್ನೂ ಕಳೆದುಕೊಂಡು ಮತ್ತೊಂದು ಕಡೆಗೆ ವಲಸೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಹೀಗೆ ನಿರಾಶ್ರಿತರಾದ ಜನರಿಗೆ ಕುಡಿಯುವ ನೀರು, ಆಹಾರ, ಔಷಧ–ಚಿಕಿತ್ಸೆ, ಮನೆ ಯಾವ ಮೂಲ ಸೌಲಭ್ಯಗಳೂ ಇಲ್ಲದ ದಾರುಣ ಸ್ಥಿತಿ ನಿರ್ಮಾಣವಾಗಿದೆ. ವಿಶ್ವ ಸಂಸ್ಥೆಯು ಪದೇ ಪದೇ ವಿನಂತಿ ಮಾಡಿದರೂ ಈ ಎಲ್ಲ ಮನವಿಯನ್ನೂ ತಿರಸ್ಕರಿಸಿ ಇಸ್ರೇಲ್ ಈ ಘೋರ ದಾಳಿ ನಡೆಸುತ್ತಿದೆ. ಕಳೆದ ಎಂಟು ತಿಂಗಳಿಂದ ನಡೆಯುತ್ತಿರುವ ಇಂತಹ ಆಕ್ರಮಣಗಳಿಂದ ಈಗಾಗಲೇ ಸುಮಾರು 36,000 ಜನ ಪ್ಯಾಲೆಸ್ತೈನಿಯನ್ನರು ಸಾವನ್ನಪ್ಪಿದ್ದಾರೆ. ಸತ್ತವರಲ್ಲಿ ಅರ್ಧದಷ್ಟು ಸಾವುಗಳು ಮಹಿಳೆಯರು ಮತ್ತು ಮಕ್ಕಳದ್ದು. ಇದು ಪರಿಸ್ಥಿತಿಯು ಎಷ್ಟು ಭೀಕರ ಎಂದು ತೋರಿಸುತ್ತದೆ.

ಪ್ಯಾಲೆಸ್ತೈನ್ ಜನತೆಗೆ ಸೌಹಾರ್ದ ಬೆಂಬಲ ಉಡುಪಿಯಲ್ಲಿ ಇಸ್ರೇಲ್ ಆಕ್ರಮಣ ವಿರೋಧಿಸಿ ಪ್ರತಿಭಟನೆ

ಅಮೆರಿಕಾ–ಇಸ್ರೇಲ್ ಕೂಟದ ಯುದ್ಧಕೋರ ನೀತಿ ವಿರೋಧಿಸಿ, ಪ್ಯಾಲೆಸ್ತೈನ್ ಜನತೆಗೆ ಸೌಹಾರ್ದ ಬೆಂಬಲ ನೀಡಲು ಸೌಹಾರ್ದ ಕರ್ನಾಟಕ ಮತ್ತು ಉಡುಪಿಯ ಸಮಾನ ಮನಸ್ಕ ಸಂಘಟನೆಗಳು, ಉಡುಪಿ ಜಿಲ್ಲಾ ಮುಸ್ಲಿಂ ಒಕ್ಕೂಟ, ಇದ್ರಿಸ್ ಹೂಡೆ ಮುಸ್ಲಿಂ ಒಕ್ಕೂಟ, ಕ್ಯಾಥೋಲಿಕ್ ಸಭಾ ಉಡುಪಿ ಜಿಲ್ಲೆ, ದಲಿತ ಸಂಘರ್ಷ ಸಮಿತಿ ಉಡುಪಿ ಜಿಲ್ಲೆ, ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ ಮುಂತಾದ ಸಂಘಟನೆಗಳು ಸೇರಿ ಜಂಟಿಯಾಗಿ ಜೂನ್ 7, 2024 ರಂದು ಶುಕ್ರವಾರ ಸಂಜೆ ಉಡುಪಿಯ ಅಜ್ಜರ ಕಾಡುವಿನ ಹುತಾತ್ಮ ಚೌಕದ ಬಳಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು.

ಪ್ರತಿಭಟನೆಯಲ್ಲಿ ಮುಖ್ಯ ಭಾಷಣವನ್ನು ಪ್ರೊ. ಕೆ. ಫಣಿರಾಜ್ ಅವರು ಮಾಡಿದರು. ಪ್ಯಾಲೆಸ್ತೈನ್ ಮೇಲಿನ ಯುದ್ದಕ್ಕೆ ವಿರಾಮ ಘೋಷಿಸಬೇಕೆಂದು ವಿಶ್ವಸಂಸ್ಥೆ ಒತ್ತಾಯಿಸಿದ್ದರೂ, ಅಂತರಾಷ್ಟ್ರೀಯ ನ್ಯಾಯಾಲಯವು ರಫಾ ಮತ್ತಿತರ ಪ್ರದೇಶಗಳ ಮೇಲೆ ಮಿಲಿಟರಿ ಧಾಳಿ ನಿಲ್ಲಿಸಬೇಕು ಹಾಗೂ ಆಹಾರ ಪದಾರ್ಥಗಳನ್ನು ಕಳಿಸಲು ಅವಕಾಶ ನೀಡಬೇಕೆಂದು ತನ್ನ ತೀರ್ಪಿನಲ್ಲಿ ಇಸ್ರೇಲ್‌ಗೆ ಆದೇಶಿಸಿದ್ದರೂ ಸಹ ಇಸ್ರೇಲ್ ಈ ವಿವೇಚನಾಯುತ ಮಾತುಗಳನ್ನು ಮಾನ್ಯ ಮಾಡದೇ ವಿಶ್ವಸಂಸ್ಥೆಯ ಪರಿಹಾರ ಶಿಬಿರಗಳ ಮೇಲೂ ಧಾಳಿಗಳನ್ನು ನಡೆಸುತ್ತಿದೆ ಎಂದು ಫಣಿರಾಜ್ ಅವರು ಖಂಡಿಸಿದರು. ಭಾರತದಂತಹ ದೇಶಗಳ ಪ್ರಚಾರ ಮಾಧ್ಯಮಗಳು "ರಣ ರಂಗ"ದಲ್ಲೇ ನಿಂತು ಯುದ್ಧ ವರದಿಯಲ್ಲಿ ತಾನೇ ಮೊದಲು ಎಂಬ ಪ್ರಚಾರಕ್ಕಿರುವಂತೆ ವರ್ತಿಸುತ್ತಿವೆ. ಅಲ್ಲಿನ ವಸ್ತು ಸ್ಥಿತಿ ಏನು, ಪ್ಯಾಲೆಸ್ತೈನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷಕ್ಕೆ ಕಾರಣಗಳೇನು, ಗಾಜಾ ಪಟ್ಟಿಯ ಸೃಷ್ಟಿ ಹೇಗಾಯಿತು ಇತ್ಯಾದಿಗಳ ಬಗ್ಗೆ ಜಾಣ ಮೌನವನ್ನು ತಳೆಯುತ್ತಾ ಅಮೇರಿಕನ್ ದೃಷ್ಟಿಕೋನವನ್ನು ನಮಗೆ ಉಣಬಡಿಸುತ್ತಿವೆ ಎಂದು ಖಂಡಿಸಿದ ಫಣಿರಾಜ್‌ರವರು ಪ್ಯಾಲೆಸ್ತೈನ್ ವಿಮೋಚನಾ ರಂಗದ ಸ್ಥಾಪಕರಾಗಿದ್ದ ಯಾಸೆರ್ ಅರಾಫತ್‌ರವರು ಭಾರತದ ಆತ್ಮೀಯ ಮಿತ್ರರಾಗಿದ್ದರು. ಆದರೆ ಇಂದು ಬಿಜೆಪಿ ನೇತೃತ್ವದ ಸರಕಾರ ಬಲಪಂಥೀಯ ಸರಕಾರ ಇಸ್ರೇಲ್‌ಗೆ ಬೆಂಬಲ ನೀಡುತ್ತಿದೆ. ಇತ್ತೀಚಿನ ಅತಿ ಕೆಟ್ಟ ಉದಾಹರಣೆ ಎಂದರೆ, ಪ್ಯಾಲೆಸ್ತೈನಿನ ಕಟ್ಟಡ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿ ಭಾರತದಿಂದ 1 ಲಕ್ಷ ಕಟ್ಟಡ ಕಾರ್ಮಿಕರನ್ನು ಇಸ್ರೇಲಿಗೆ ಕಳಿಸುವ ಒಪ್ಪಂದಕ್ಕೆ ಸಹಿ ಹಾಕಿದ್ದು ಹರ್ಯಾಣದಿಂದ ಸುಮಾರು 10,000 ಕಾರ್ಮಿಕರನ್ನು ಈಗಾಗಲೆ ಕಳಿಸಿದ್ದಾರೆ ಎಂಬ ವರದಿ ಇದೆ. ಜಾಗೃತ ನಾಗರಿಕರು ಸರಕಾರದ ಈ ನೀತಿಯನ್ನು ವಿರೋಧಿಸಬೇಕು ಹೇಳಿದರು.

ಸೌಹಾರ್ದ ಕರ್ನಾಟಕದ ಸಂಚಾಲಕರಾದ ಚಂದ್ರಶೇಖರ್ ಆರಂಭದಲ್ಲಿ ಸ್ವಾಗತಿಸಿ ಪ್ರಸ್ತಾವನೆಯ ಮಾತುಗಳನ್ನಾಡಿದರು. ಡಿ.ಎಸ್. ಎಸ್.ನ ಸುಂದರ್ ಮಾಸ್ಟರ್ ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಬಾಲಕೃಷ್ಣ ಶೆಟ್ಟಿ ನಡೆಸಿಕೊಟ್ಟರು. ಕಾರ್ಯಕ್ರಮದ ಮಧ್ಯದಲ್ಲಿ ವಸಂತ ಬನ್ನಾಡಿಯವರ ಕೆಲವು ಯುದ್ಧ ವಿರೋಧಿ ಕವಿತೆಗಳನ್ನು ಸಮೀರ್ ಓದಿ ಹೇಳಿದರು. ಕಾರ್ಯಕ್ರಮದಲ್ಲಿ ಇದ್ರಿಸ್ ಹೂಡೆ, ಸಂತೋಷ್ ಕರ್ನೆಲಿಯೊ, ಅಬ್ದುಲ್ ಅಜೀಜ್, ಸುರೇಶ್ ಕಲ್ಲಗರ್, ಎಚ್. ನರಸಿಂಹ, ಕೆ. ಶಂಕರ್, ಮುಂತಾದವರು ಉಪಸ್ಥಿತರಿದ್ದರು.





ಪ್ಯಾಲೆಸ್ಟೈನ್ ಮೇಲಿನ ಆಕ್ರಮಣ ಖಂಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯ ಪಾರ್ಶ್ವ ನೋಟ

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಪ್ಯಾಲೆಸ್ಟೈನ್‌ನಲ್ಲಿ ನಡೆಯುತ್ತಿರುವುದು ಯುದ್ಧವಲ್ಲ. ಯುದ್ಧವೆಂದರೆ ಎರಡೂ ಕಡೆ ಶಸ್ತ್ರಾಸ್ತ್ರಗಳಿರುತ್ತವೆ. ಇಲ್ಲಿ ನಿಶಸ್ತ್ರರಾದ ಜನರ ಮೇಲೆ ಕ್ರೂರಾತಿಕ್ರೂರ ಯುದ್ಧ ಸಾರಲಾಗಿದೆ. ಇದು ಭೀಕರ ಜನಾಂಗೀಯ ಹತ್ಯೆ. ನರಮೇಧ. ಇದು ಕೂಡಲೇ ನಿಲ್ಲಬೇಕು ಎಂದು ಆಗ್ರಹಿಸಿದರು. ಈ ಬಿಕ್ಕಟ್ಟು ಸುಮಾರು ನೂರು ವರ್ಷಗಳಿಗೂ ಹಿಂದಿನ ಸಾಮ್ರಾಜ್ಯಶಾಹಿ ದೇಶಗಳ ಪಿತೂರಿಯ ಫಲ. 1948 ರ 'ನಕ್ಬಾ'–ಅಂದರೆ ಬಾಲ್ಫೋರ್ ಘೋಷಣೆ ಆಧಾರದಲ್ಲಿ ಪ್ಯಾಲೆಸ್ಟೈನ್ ದೇಶದ ಮೇಲೆ ಆಕ್ರಮಣ ನಡೆಸಿ, ಆ ದೇಶದ ಮೂರನೇ ಎರಡರಷ್ಟು ಜನರನ್ನು ತಮ್ಮ ಪ್ರದೇಶದಿಂದ ಹೊರದಬ್ಬಲಾಯಿತು ಎಂದ ಯೆಚೂರಿಯವರು ತಮ್ಮ ವಿದ್ಯಾರ್ಥಿ ಚಳುವಳಿಯ ಕಾಲದಲ್ಲಿ ನೀಡಲಾಗುತ್ತಿದ್ದ ಪಾಸ್ ಪೋರ್ಟ್‌ಗಳ ಮೇಲೆ, ಇದು (ಆಕ್ರಮಣಕೋರ) ಇಸ್ರೇಲ್ ಮತ್ತು (ವರ್ಣಬೇಧ ನೀತಿ ಅನುಸರಿಸುವ) ದಕ್ಷಿಣ ಆಫ್ರಿಕಾಗಳಿಗೆ ಅನ್ವಯಿಸುವುದಿಲ್ಲ ಎಂದು ಬರೆದಿರುತ್ತಿತ್ತು. ಆದರೆ ನರೇಂದ್ರ ಮೋದಿಯವರ ನೇತೃತ್ವದ ಸರಕಾರ ಭಾರತದ ಇಂತಹ ವಿದೇಶಾಂಗ ನೀತಿಯನ್ನು ಹಳಿತಪ್ಪಿಸಿದೆ ಎಂದು ಕಟುವಾಗಿ ಟೀಕಿಸಿದರು ಮತ್ತು ಭಾರತವು ಇಸ್ರೇಲ್ ದೇಶದೊಂದಿಗಿನ ಎಲ್ಲ ವ್ಯಾಪಾರ ಸಂಬಂಧಗಳನ್ನು ಕಡಿದುಕೊಳ್ಳಬೇಕು ಎಂದು ಆಗ್ರಹಿಸಿದರು. ಇಡೀ ಜಗತ್ತು ಈ ನರಮೇಧವನ್ನು ಖಂಡಿಸಬೇಕು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರನ್ನು ಅಂತರ ರಾಷ್ಟ್ರೀಯ ನ್ಯಾಯಲಯ ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸಬೇಕು ಎಂದೂ ಯೆಚೂರಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರತ್ ಅವರು ಮಾತನಾಡಿ ಭಾರತದ ಹೈದರಾಬಾದ್‌ನಲ್ಲಿ ಅದಾನಿ ಕಂಪನಿಯ ಸಹಯೋಗದೊಂದಿಗೆ ತಯಾರಾಗುತ್ತಿರುವ ಡ್ರೋಣ್‌ಗಳನ್ನು ಪ್ಯಾಲೆಸ್ಟೈನ್ ಜನರ ಮೇಲೆ ದಾಳಿ ಮಾಡಲು ಬಳಸುವ ಉದ್ದೇಶವು ಬಯಲಾಗಿದೆ. ಈ ಸಾಧನಗಳನ್ನು ಸಾಗಿಸುವ ಮಾರ್ಗದಲ್ಲಿ ಸ್ಪೈನ್ ದೇಶದಲ್ಲಿ ಸಾಗಣೆಗೆ ತಡೆಯಾಗಿ ಈ ರಹಸ್ಯವು ಸ್ಪೈನ್ ಮೂಲದಿಂದಲೇ ಬಯಲಾಗಿದೆ. ಇಸ್ರೇಲ್ ದೇಶಕ್ಕೆ ಶಸ್ತ್ರಾಸ್ತ್ರ ಪೂರೈಸುತ್ತಿರುವ ಭಾರತ ಸರಕಾರದ ಈ ಕ್ರಮ ನಾಚಿಕೆಗೇಡಿನದು ಎಂದು ಖಂಡಿಸಿ ಈ ಕೂಡಲೇ ಯುದ್ಧ ನಿಲುಗಡೆ ಘೋಷಣೆಯಾಗಬೇಕು ಎಂದು ಆಗ್ರಹಿಸಿದರು. ಇಸ್ರೆಲ್ ದೇಶದೊಂದಿಗೆ ಎಲ್ಲ ಮಿಲಿಟರಿ ಒಪ್ಪಂದಗಳನ್ನು ರದ್ದುಪಡಿಸಿ ಭಾರತವು ಪ್ಯಾಲೆಸ್ಟೈನ್ ಜನತೆಯೊಂದಿಗೆ ನಿಲ್ಲಬೇಕು ಎಂದೂ ಬೃಂದಾ ಒತ್ತಾಯಿಸಿದರು. ಚಿಂತಕ ಅವಿನಾಶ್ ವನ್ಯೆಕ್ ಮಾತನಾಡಿ ಈಗಾಗಲೇ ಪ್ಯಾಲೆಸ್ಟೈನ್ ಜನರಲ್ಲಿ ಶೇ. 5 ರಷ್ಟು ಜನರನ್ನು ಕೊಲ್ಲಲಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯು ಇಸ್ರೇಲ್‌ನ ಬೆಂಬಲಕ್ಕೆ ನಿಂತಿರುವುದರಿಂದಲೇ ಈ ಪರಿಯ ಕ್ರೌರ್ಯ ನಡೆಸುವ ಧೈರ್ಯ ಇಸ್ರೇಲ್‌ಗೆ ಬಂದಿದೆ ಎಂದು ಹೇಳಿದರು. ಎಎಪಿ ಪಕ್ಷದ ಮುಖಂಡರು, ದೆಹಲಿಯ ಉಪ ಮೇಯರ್ ಆದ ಆಲ್ಲೆ ಮೊಹಮದ್ ಇಕ್ಬಾಲ್ ಅವರು ಈ ಸಂದರ್ಭದಲ್ಲಿ ಮಾತನಾಡಿ ಚಳುವಳಿಗೆ ಸೌಹಾರ್ದ ಬೆಂಬಲ ಘೋಷಿಸಿದರು. ಪ್ರಗತಿಶೀಲ್ ಮಹಿಳಾ ಸಂಘಟನ್, ಜನವಾದಿ ಮಹಿಳಾ ಸಮಿತಿ, ಎಸ್.ಎಫ್.ಐ., ಡಿ.ವೈ.ಎಫ್.ಐ., ಎ.ಐ.ಡಿ.ಎಸ್.ಓ., ಕೆ.ವೈ. ಎಸ್., ಎ.ಐ.ಎಸ್.ಎ., ಸಿಪಿಐ(ಎಂ.ಎಲ್.)ನ್ಯೂ ಡೆಮಾಕ್ರೆಸಿ, ಸಿಐಟಿಯು, ದಿಶಾ ಅಂಡ್ ಕಲೆಕ್ಟೀವ್ ಮುಂತಾದ ನಾನಾ ಸಂಘಟನೆಗಳ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲೊಂಡಿದ್ದರು.

ಪ್ರತಿಭಟನಾ ಸಭೆಯು ಪ್ಯಾಲೆಸ್ಟೈನ್ ಅನ್ನು ಆಕ್ರಮಣ ಮುಕ್ತಗೊಳಿಸಬೇಕು, ಪೂರ್ವ ಜೆರುಸಲೇಮ್ ರಾಜಧಾನಿಯಾಗಿರುವಂತೆ, 1967 ಕ್ಕೂ ಮುಂಚಿನ ಗಡಿ ಪರಿಸ್ಥಿತಿಯಂತೆ ಸ್ವತಂತ್ರ ಪ್ಯಾಲೆಸ್ಟೈನ್ ದೇಶವು ರೂಪುಗೊಳ್ಳಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಿತು.

ಸಿಐಟಿಯು ದೆಹಲಿ ರಾಜ್ಯ ಸಮಿತಿಯ ಅನುರಾಗ್ ಸಕ್ಸೇನಾ ಅವರು ಪ್ರತಿಭಟನಾ ಸಭೆಯನ್ನು ನಿರ್ವಹಿಸಿದರು. ವಿದ್ಯಾರ್ಥಿ ಯುವಜನರು ತಮ್ಮ ಕೈಗಳಿಂದಲೇ ಬರೆದ ಆಕರ್ಷಕ ಫಲಕಗಳನ್ನು ಹಿಡಿದುಕೊಂಡಿದ್ದರು. ಮತ್ತೊಂದು ದೇಶವನ್ನು ಆಕ್ರಮಿಸಿ ಆಳುವ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಧೋರಣೆಗಳ ವಿರುದ್ಧ, ಪ್ಯಾಲಿಸ್ಟೈನ್ ಜನರ ಹೋರಾಟವನ್ನು ಬೆಂಬಲಿಸಿ, ಸ್ವತಂತ್ರ ಪ್ಯಾಲೆಸ್ಟೈನ್ ದೇಶದ ಪರ ಘೋಷಣೆಗಳು ಮೊಳಗಿದವು. ಸ್ಫೂರ್ತಿಯುತ ಹೋರಾಟದ ಹಾಡುಗಳನ್ನು ಹಾಡಲಾಯಿತು.

ಜೈಪುರದಲ್ಲಿ ಪ್ರತಿಭಟನೆ:

ದೆಹಲಿ ಅಲ್ಲದೇ, ಜೂನ್ 3, 2024 ರಂದು, ರಾಜಾಸ್ಥಾನದ ರಾಜಧಾನಿ ಜೈಪುರದಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ. ಎಡ, ಜಾತ್ಯತೀತ, ಪ್ರಜಾಸತಾತ್ಮಕ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳ ನೇತೃತ್ವದಲ್ಲಿ ಈ ಪ್ರತಿಭಟನೆಯು ನಡೆದಿದೆ. ಸಿಪಿಐ(ಎಂ) ಪಕ್ಷದ ಮಾಜಿ ಕೇಂದ್ರ ಸಮಿತಿಯ ಸದಸ್ಯರಾದ ವಾಸುದೇವ ಶರ್ಮ, ಸಿಪಿಐ ಪಕ್ಷದ ಹಿರಿಯ ಮುಖಂಡರಾದ ತಾರಾಸಿಂಗ್ ಸಿಧು, ಸಿಪಿಐ(ಎಂ.ಎಲ್.), ಮುಖಂಡರಾದ ಮಂಜುಲತ, ಜಮಾತ್–ಇ–ಇಸ್ಲಾಮಿ ಹಿಂದ್‌ನ ರಾಜ್ಯ ಅಧ್ಯಕ್ಷರಾದ ಮೊಹಮದ್ ನಜಿಮುದ್ದೀನ್, ರಾಜಾಸ್ಥಾನ್ ಸಮಗ್ರ ಸೇವಾ ಸಂಘದ ರಾಜ್ಯ ಅಧ್ಯಕ್ಷರಾದ ಸ್ವಾತಿ ಸಿಂಗ್, ಮುಂತಾದವರು ಪ್ರತಿಭಟನೆಯಲ್ಲಿ ಮಾತನಾಡಿ ಮೇ 26, 2024 ರಂದು ರಫ್ಹಾದ ನಿರಾಶ್ರಿತರ ಪರಿಹಾರ ಶಿಬಿರದ ಮೇಲೆ ಬಾಂಬ್ ದಾಳಿ ನಡೆಸಿ 45 ಜನರನ್ನು ಕೊಂದಿರುವುದನ್ನು ತೀವ್ರವಾಗಿ ಖಂಡಿಸಿದರು. ಅಮೆರಿಕಾ ದೇಶ, ನ್ಯಾಟೋ ಕೂಟದ ದೇಶಗಳು ಇಸ್ರೇಲ್ ಈ ದಾಳಿಗೆ ಬೆಂಬಲವಾಗಿ ನಿಂತಿದ್ದರೂ ಸಹ ಈ ದೇಶಗಳ ಯುವಜನತೆ ಇಸ್ರೇಲಿನ ಆಕ್ರಮಣಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆಂಬುದನ್ನು ಪ್ರತಿಭಟನಕಾರರು ಈ ಸಂದರ್ಭದಲ್ಲಿ ನೆನಪಿಸಿಕೊಂಡರು. ಸಭೆಯಲ್ಲಿ ಮೃತ ಪ್ಯಾಲೆಸ್ಟೈನಿಯನ್ನರಿಗಾಗಿ ಎರಡು ನಿಮಿಷಗಳ ಮೌನವನ್ನು ಆಚರಿಸಲಾಯಿತು. ಇಸ್ರೇಲ್‌ನ ಯುದ್ಧಕೋರತನಕ್ಕೆ ಸಹಾಯಕವಾಗಿ ನಿಂತಿರುವ ಕಂಪನಿಯ ಯಾವುದೆ ಉತ್ಪನ್ನವನ್ನು ಖರೀದಿಸಬಾರದು ಎಂದು ಸಭೆಯು ತೀರ್ಮಾನವನ್ನು ಕೈಗೊಂಡಿತು.

ಆಂಧ್ರ ಪ್ರದೇಶದಲ್ಲಿ ಎಡಪಕ್ಷಗಳ ಸಮಾವೇಶ

ಜೂನ್ 3, 2024 ರಂದು ಆಂಧ್ರ ಪ್ರದೇಶದ ಎಡಪಕ್ಷಗಳು ಪ್ಯಾಲೆಸ್ಟೈನ್ ಜನತೆಯ ಪರವಾಗಿ ಸೌಹಾರ್ದ ಸಮಾವೇಶವನ್ನು ವಿಜಯವಾಡ ನಗರದಲ್ಲಿ ಸಂಘಟಿಸಿದ್ದವು. ಸಿಪಿಐ(ಎಂ) ಆಂಧ್ರಪ್ರದೇಶ ಸಮಿತಿ ಕಾರ್ಯದರ್ಶಿ ವಿ. ಶ್ರೀನಿವಾಸ ರಾವ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಭಾರತವು ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಅನುಸರಿಸುತ್ತಾ ಬಂದ, ಸಾಮಾಜ್ಯಶಾಹಿ ಶಕ್ತಿಗಳೊಂದಿಗೆ ಕೈಜೋಡಿಸದ ಅಲಿಪ್ತ ನೀತಿಯ ಮಹತ್ವವನ್ನು ವಿವರಿಸುವುದು ಸೇರಿದಂತೆ, ಪ್ಯಾಲೆಸ್ಟೈನ್ ಜನರ ಹೋರಾಟವನ್ನು ಬೆಂಬಲಿಸುವ ನಿರ್ಣಯವನ್ನು ಸಮಾವೇಶವು ಸರ್ವಾನುಮತದಿಂದ ಅಂಗೀಕರಿಸಿತು. ಸಿಪಿಐ ರಾಜ್ಯ ಕಾರ್ಯದರ್ಶಿ ಕೆ.ರಾಮಕೃಷ್ಣನ್ ಪ್ಯಾಲೆಸ್ಟೈನಿಯನ್ನರು ನಡೆಸುತ್ತಿರುವುದು ಒಂದು ರಾಷ್ಟ್ರೀಯ ಹೋರಾಟ ಎಂದರು. ಸಿಪಿಐ(ಎಂಎಲ್) ನ್ಯೂ ಡೆಮಾಕ್ರೆಸಿ ಪಕ್ಷದ ಪಿ. ಪ್ರಸಾದ್ ಪ್ಯಾಲೆಸ್ಟೈನಿಯನ್ನರ ಹೋರಾಟವು, ಅಮೆರಿಕನ್ ಆಕ್ರಮಣದ ವಿರುದ್ಧದ ವಿಯೆಟ್ನಾಮ್ ಜನರ ಹೋರಾಟವನ್ನು ನೆನಪಿಸುತ್ತದೆ ಎಂದರು. ಸಿಪಿಐ(ಎಂ.ಎಲ್.) ಲಿಬರೇಷನ್ ಪಕ್ಷದ ಎನ್. ಮೂರ್ತಿ, ಎಸ್.ಯು.ಸಿ.ಐ.(ಕಮ್ಯೂನಿಸ್ಟ್) ಪಕ್ಷದ ಸುಧೀರ್ ಮುಂತಾದವರು ಮಾತನಾಡಿದರು. ಸಿಪಿಐ(ಎಂ.ಎಲ್.), ಎಂಸಿಪಿಐ(ಯು) ಪಕ್ಷಗಳೂ ಸಮಾವೇಶವನ್ನು ಬೆಂಬಲಿಸಿದ್ದವು.



ಇದಲ್ಲದೇ ತೆಲಂಗಾಣ ರಾಜಧಾನಿ ಹೈದರಾಬಾದ್, ದಕ್ಷಿಣದ ತಮಿಳು ನಾಡು, ಈಶಾನ್ಯ ರಾಜ್ಯವಾದ ತ್ರಿಪುರ ಅಲ್ಲದೆ ಒರಿಸ್ಸಾ ಮುಂತಾದ ನಾನಾ ರಾಜ್ಯಗಳಲ್ಲಿಯೂ, ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯಲ್ಲಿಯೂ ಸೌಹಾರ್ದ ಪ್ರದರ್ಶನಗಳು ಹಾಗೂ ಪ್ರತಿಭಟನೆಗಳು ನಡೆದ ವರದಿಗಳು ಬರುತ್ತಿವೆ.

('ಪೀಪಲ್ಸ್ ಡೆಮಾಕ್ರೆಸಿ' ಪತ್ರಿಕೆಯ ವರದಿಗಳ ಸಾರಸಂಗ್ರಹ ಮತ್ತು ಬರಹದ ವಿಸ್ತರಣೆ: ಆರ್. ರಾಮಕೃಷ್ಣ)

ಕರ್ನಾಟಕ ಲೋಕಸಭಾ ಚುನಾವಣೆ:
ಕುಸಿತ ಕಂಡರೂ ಮುಂದುವರಿದ ಅಪಾಯಕಾರಿ ಬಿಜೆಪಿ ಪ್ರಾಬಲ್ಯ



ದಲಿತರು, ಹಿಂದುಳಿದವರು ಮುಂತಾದ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ತತ್ವದ ಆಧಾರದಲ್ಲಿ ಸಾಮಾಜಿಕ ನ್ಯಾಯವನ್ನು ನೀಡಿ ಅವರ ವಿಶ್ವಾಸ ಗಳಿಸಬೇಕು, ರೈತರು–ಕಾರ್ಮಿಕರು, ಕೂಲಿಕಾರರು ಮುಂತಾದ ದುಡಿಯುವ ಜನರ ಪರವಾದ ಆರ್ಥಿಕ ಕಾರ್ಯಕ್ರಮಗಳು ಹಾಗೂ ಸಮಾಜದ ಸಮಗ್ರ ಅಭಿವೃದ್ಧಿಯ ಆಧಾರದಲ್ಲಿ ಎಲ್ಲ ಸಮುದಾಯಗಳ ಬೆಂಬಲವನ್ನು ಗಳಿಸಿ ಚುನಾವಣೆ ಗೆಲ್ಲಲು ಪ್ರಯತ್ನಿಸಬೇಕು ಎಂಬ ಧೋರಣೆಗೆ ಬಂಡವಾಳಶಾಹಿ ಪಕ್ಷಗಳಲ್ಲಿ ಜಾಗವಿಲ್ಲ.

ಕೋಮುವಾದಿ ಶಕ್ತಿಗಳು ಮತೀಯ ಧೃವೀಕರಣದ ವಿಭಜಕಾರಿ ವಿಚಾರಗಳ ಆಧಾರದಲ್ಲಿ ಮತ ಗಳಿಸಲು, ಚುನಾವಣೆ ಗೆಲ್ಲಲು ಪಯತ್ನಿಸಿದರೆ, ಅದನ್ನು ಎದುರಿಸುತ್ತೇವೆ ಎನ್ನುವ ಬಂಡವಾಳಶಾಹಿ ಪಕ್ಷಗಳು ಪ್ರಧಾನವಾಗಿ ಜಾತಿ, ಜಾತಿಯಿಯಿಯಿಗಳನ್ನು ಒಂದರ ವಿರುದ್ಧ ಒಂದು ಎಂಬಂತೆ ಎತ್ತಿಕಟ್ಟುವ ಜಾತಿ ಸಮೀಕರಣಕ್ಕೆ ಶರಣಾಗುವುದೇ ಜಾಸ್ತಿ. ಕರ್ನಾಟಕ ರಾಜ್ಯದ ರಾಜಕಾರಣವು ಇದಕ್ಕಿಂತ ಬಹಳವೇನೂ ಭಿನ್ನವಲ್ಲ. ಈ ಹಿನ್ನೆಲೆಯಲ್ಲಿ ನಾವು ಇತ್ತೀಚಿನ ಕರ್ನಾಟಕದ ಲೋಕಸಭಾ ಚುನಾವಣೆಗಳ ಫಲಿತಾಂಶವನ್ನು ನೋಡಬೇಕಿದೆ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ಕೊಡುಗೆಯಂತಹ ಗ್ಯಾರಂಟಿಗಳೇ ತಮ್ಮನ್ನು ಅಧಿಕಾರದಲ್ಲಿ ಬಹಳ ಕಾಲ ಉಳಿಸಲು ಆಧಾರವಾಗಲಾರವು. ಕೋಮುವಾದಿ ಶಕ್ತಿಗಳನ್ನು ದಿಟ್ಟವಾಗಿ ಎದುರಿಸುವ ಗಟ್ಟಿತನ ಬೇಕು ಹಾಗೂ ಸರ್ವ ಶೋಷಿತ ಜಾತಿ–ವರ್ಗಗಳ ಜನರ ಬದುಕನ್ನೂ ಉತ್ತಮ ಪಡಿಸುವ ಸಮಗ್ರ ಆರ್ಥಿಕ ಕಾರ್ಯಕ್ರಮಗಳು ಬೇಕು ಎಂಬುದು ಈ ಚುನಾವಣಾ ಫಲಿತಾಂಶದಿಂದ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಕಲಿಯಬೇಕಾದ ಪಾಠ.

ಫಲಿತಾಂಶದ ವಿವರ

18ನೇ ಲೋಕಸಭಾ ಚುನಾವಣೆಯಲ್ಲಿ, ಕಳೆದ 2019ರ ಲೋಕಸಭಾ ಚುನಾವಣೆಗಿಂತ ಕಾಂಗ್ರೆಸ್ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ ಮತ್ತು ತನ್ನ ಮತಪ್ರಮಾಣವನ್ನು ಹೆಚ್ಚಿಸಿಕೊಂಡಿದೆ. ಆದರೆ, 2023ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ, ಕಾಂಗ್ರೆಸ್ ಗಳಿಸಿದ ಮತಪ್ರಮಾಣ ಶೇ. 2.55 ರಷ್ಟು ಕುಸಿತ ಕಂಡಿದೆ. ಕಾಂಗ್ರೆಸ್ ತಾನು ನಿರೀಕ್ಷಿಸಿದ ಸ್ಥಾನಗಳು ಬರಲಿಲ್ಲ. ಕಾಂಗ್ರೆಸ್ 20 ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸವನ್ನು ವ್ಯಕ್ತಪಡಿಸಿತ್ತು. ಕರ್ನಾಟಕದಲ್ಲಿ 18ನೇ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ 19 ಸ್ಥಾನಗಳನ್ನು ಗೆದ್ದಿದೆ. ಅದರಲ್ಲಿ 17 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದು, ಅದರ ಮಿತ್ರಪಕ್ಷವಾದ ಜೆಡಿಎಸ್ 2 ಸ್ಥಾನಗಳಲ್ಲಿ ಗೆದ್ದಿದೆ. ಇದೇ ವೇಳೆ ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕೇವಲ 1 ಸ್ಥಾನವನ್ನಷ್ಟೇ ಗೆಲ್ಲಲು ಸಫಲವಾಗಿದ್ದ ಕಾಂಗ್ರೆಸ್ ಈ ಬಾರಿ 9 ಸ್ಥಾನಗಳನ್ನು ಗೆದ್ದು ಒಂದಷ್ಟು ಚೇತರಿಕೆ ಕಂಡಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶೇ. 31.88 ಮತಗಳನ್ನು ಪಡೆದಿತ್ತು. 2024ರ ಚುನಾವಣೆಯಲ್ಲಿ ಶೇ.45.43 ಮತಗಳನ್ನು ಪಡೆಯುವ ಮೂಲಕ ತನ್ನ ಮತ ಪ್ರಮಾಣವನ್ನು ಶೇ.13.55 ಹೆಚ್ಚಿಸಿಕೊಂಡಿದೆ. ಜೊತೆಗೆ ಅದು ಹಿಂದಿಗಿಂತ 8 ಸ್ಥಾನಗಳನ್ನು ಹೆಚ್ಚಾಗಿ ಪಡೆದಿದೆ. ಬಿಜೆಪಿ 2019 ರಲ್ಲಿ ಪಡೆದಿದ್ದ ಮತ ಪ್ರಮಾಣ ಶೇ. 51.38. ಈಗ 2024ರ ಚುನಾವಣೆಯಲ್ಲಿ ಅದು ಶೇ. 46.06 ಕ್ಕೆ ಇಳಿಕೆಯಾಗಿದೆ. 5.32 ರಷ್ಟು ಕಡಿಮೆಯಾಗಿದೆ. ಜೆಡಿ(ಎಸ್) ಜೊತೆ ಮೈತ್ರಿ ಮಾಡಿಕೊಂಡರೂ ಬಿಜೆಪಿ ಮತಗಳು ಕುಸಿದಿರುವುದನ್ನು ಕಾಣಬಹುದಾಗಿದೆ.

2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶೇ. 42.88 ರಷ್ಟು ಮತಗಳನ್ನು ಪಡೆದಿತ್ತು. ಇದಕ್ಕೆ ಹೋಲಿಸಿದರೆ, ಇಂದಿನ ಲೋಕಸಭಾ ಚುನಾವಣೆಯಲ್ಲಿ ಅದರ ಮತಪ್ರಮಾಣ ಶೇ.2.55 ರಷ್ಟು ಹೆಚ್ಚಾಗಿದೆ. ಬಿಜೆಪಿ ಮತಪ್ರಮಾಣ ಶೇ.10.6 ರಷ್ಟು ಹೆಚ್ಚಳವಾಗಿದೆ. ಜೆಡಿ(ಎಸ್) ಜೊತೆಗಿನ ಮೈತ್ರಿಯೂ ಈ ಹೆಚ್ಚಳಕ್ಕೆ ಕಾರಣ. ಜೆಡಿ(ಎಸ್) ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಶೇ. 5.60 ರಷ್ಟು ಮತಗಳನ್ನು ಪಡೆದಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿ(ಎಸ್) ಶೇ. 13.29 ಮತಗಳನ್ನು ಪಡೆದಿತ್ತು.

ಸುಳ್ಳಾದ ಮತಗಟ್ಟೆ ಸಮೀಕ್ಷೆ

ಮತಗಟ್ಟೆ ಸಮೀಕ್ಷೆಗಳು ಬಿಜೆಪಿಗೆ 23 ರಿಂದ 25 ಸ್ಥಾನ, ಕಾಂಗ್ರೆಸ್ ಗೆ 3 ರಿಂದ 5 ಸ್ಥಾನಗಳ ಭವಿಷ್ಯ ನುಡಿದಿದ್ದವು. ಜೆಡಿ(ಎಸ್) 2 ಸ್ಥಾನ ಗೆಲ್ಲುವ ಸಾಧ್ಯತೆ ಇದೆ ಎಂದು ಹೇಳಿದ್ದವು. ಈ ಸಮೀಕ್ಷೆ ಹುಸಿಯಾಗಿ ಕಾಂಗ್ರೆಸ್ 9 ಸ್ಥಾನಗಳನ್ನು ಗಳಿಸಿದೆ.

2019 ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಪುಲ್ವಾಮ ದಾಳಿಯ ವಿಷಯದಲ್ಲಿ ತನ್ನ ವೈಫಲ್ಯವನ್ನು ಮರೆಮಾಚಿ, ಜನರ ಮನಸ್ಸಿನಲ್ಲಿ ದೇಶಪ್ರೇಮದ ಹೆಸರಿನಲ್ಲಿ ಭಾವೋದ್ರೇಕವನ್ನು ಹುಟ್ಟು ಹಾಕಿ ಮತಗಳಿಸಲು ಬಿಜೆಪಿ ಯತ್ನಿಸಿದ್ದು ಎಲ್ಲರಿಗೂ ಗೊತ್ತು. ದೇಶದ ಹಲವಾರು ರಾಜ್ಯಗಳಲ್ಲಿ ಈ ಪ್ರಯತ್ನ ಯಶಸ್ವಿಯಾದಂತೆ ಕರ್ನಾಟಕದಲ್ಲಿಯೂ ಅದು ಸಾಕಷ್ಟು ಫಲ ನೀಡಿತ್ತು.

ಕಲ್ಯಾಣ ಕರ್ನಾಟಕದಲ್ಲಿ ಬಿಜೆಪಿಗೆ ಹಿನ್ನಡೆ

ಕಲ್ಯಾಣ ಕರ್ನಾಟಕದ 5 ಕ್ಷೇತ್ರಗಳಲ್ಲಿ ಬಿಜೆಪಿ ಹೀನಾಯವಾಗಿ ಸೋಲುಂಡಿದೆ. ಕಳೆದ ಬಾರಿ ಇಲ್ಲಿ ಕಾಂಗ್ರೆಸ್ ಎಲ್ಲ ಸ್ಥಾನಗಳಲ್ಲೂ ಸೋತಿತ್ತು. ಆದರೆ ಬಿಜೆಪಿ ಒಂದೆರೆಡು ಸ್ಥಾನ ಗೆಲ್ಲಬಹುದು ಎಂದು ಅಂದಾಜಿಸಲಾಗಿತ್ತು. ಕಲ್ಯಾಣ ಕರ್ನಾಟಕದಲ್ಲಿ, ಬಿಜೆಪಿ ನಾಯಕರ "ಸಂವಿಧಾನವನ್ನು ಬದಲಾಯಿಸುವ" ಹೇಳಿಕೆಗಳ ಮೇಲೆ ಪಕ್ಷದ ಪರವಾಗಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಮುಸ್ಲಿಂ ಮತಗಳನ್ನು ಮತ್ತಷ್ಟು ಕ್ರೋಢೀಕರಿಸಿರುವುದು ಕಾಂಗ್ರೆಸ್‌ನ ಒಟ್ಟು ಪ್ರಾಬಲ್ಯಕ್ಕೆ ಕಾರಣವಾಗಿದೆ.

ಬೀದರ್‌ನಲ್ಲಿ ಸಚಿವ ಈಶ್ವರ್ ಖಂಡ್ರೆಯವರ ಪುತ್ರ ಸಾಗರ್ ಖಂಡ್ರೆಯವರು ಗೆದ್ದಿದ್ದಾರೆ. ಕೇವಲ 25 ವರ್ಷದ ಸಾಗರ್ ಖಂಡ್ರೆ ಅವರು ಗೆದ್ದಿರುವುದು ಕೇಂದ್ರ ಸಚಿವ ಭಗವಂತ ಖೂಬಾ ವಿರುದ್ಧ. 2019ರ ಲೋಕಸಭಾ ಚುನಾವಣೆಯಲ್ಲಿ ಖೂಬಾ ಎದುರು ನಿಂತಿದ್ದ ಈಶ್ವರ್ ಖಂಡ್ರೆ ಸೋಲು ಕಂಡಿದ್ದರು.

ಬಿಜೆಪಿಯ ಭದ್ರಕೋಟೆ ಕೊಪ್ಪಳದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜಶೇಖರ ಹಿಟ್ನಾಳ್ ಗೆಲುವು ಸಾಧಿಸಿದ್ದು ಅಚ್ಚರಿ ಎನ್ನಲಾಗುತ್ತಿದೆ. ಲಿಂಗಾಯತ ಮತಗಳ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರು ಗೆಲುವು ಸಾಧಿಸಿದ್ದು ಕಡಿಮೆಯೆ. 18 ಲೋಕಸಭಾ ಚುನಾವಣೆಯಲ್ಲಿ 15 ಬಾರಿ ಲಿಂಗಾಯತರು ಗೆಲುವು ಸಾಧಿಸಿದರೆ, ಮೂರು ಬಾರಿ ಮಾತ್ರ ಹಿಂದುಳಿದ ವರ್ಗಕ್ಕೆ ಗೆಲುವು ದಕ್ಕಿದೆ. ರಾಜಶೇಖರ್ ಹಿಟ್ನಾಳ್ ಕಳೆದ ಎರಡು ಚುನಾವಣೆಯಲ್ಲಿ ಅಲ್ಪಮತಗಳಿಂದ ಸೋಲುಂಡಿದ್ದರು, ಹಾಗಾಗಿ ಈ ಬಾರಿ ಅನುಕಂಪ ಅವರನ್ನು ಕೈ ಹಿಡಿದಿದೆ. ಹಿಟ್ನಾಳ್ ಅವರು, ತಮ್ಮ ಸಮೀಪದ ಪ್ರತಿಸ್ಪರ್ಧಿಯಾಗಿದ್ದ ಬಿಜೆಪಿಯ ಡಾ. ಬಸವರಾಜ ವಿರುದ್ಧ 46,357 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ.

ರಾಯಚೂರಿನಲ್ಲಿ ನಿವೃತ್ತ ಐಎಎಸ್ ಅಧಿಕಾರಿಯಾಗಿ ಜಿ. ಕುಮಾರ್ ನಾಯ್ಕ್ ಅವರು ಹಾಲಿ ಸಂಸದ ಹಾಗೂ ಬಿಜೆಪಿ ಅಭ್ಯರ್ಥಿ ರಾಜಾ ಅಮೇಶ್ವರ ನಾಯಕ್ ಅವರ ವಿರುದ್ಧ 79,781 ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಈ ಕ್ಷೇತ್ರವೂ ಕೂಡ ಬಿಜೆಪಿಯ ಭದ್ರಕೋಟೆಯಾಗಿತ್ತು. ಆದರೆ ಸಂಸದರು ಸರಿಯಾಗಿ ಕೆಲಸ ಮಾಡದಿರುವುದು, ಜನರೊಟ್ಟಿಗೆ ಬೆರೆಯದಿರುವುದು ಅವರ ಸೋಲಿಗೆ ಕಾರಣವಾಯಿತು. ಜಿ.ಕುಮಾರ್ ನಾಯ್ಕ್ ಅಧಿಕಾರಿಯಾಗಿದ್ದಾಗ ಉತ್ತಮ ಕೆಲಸ ಮಾಡಿದ್ದರೆಂಬ ಭಾವನೆ ಅವರ ಪರವಾಗಿ ಕೆಲಸ ಮಾಡಿದೆ ಎಂಬ ವಿಶ್ಲೇಷಣೆಗಳಿವೆ. ರಾಯಚೂರು ಕ್ಷೇತ್ರ ಸುಧಾರಿಸಬಹುದು, ಅಪೌಷ್ಟಿಕತೆ, ಶಿಕ್ಷಣ ಅಸಮಾನತೆ ನಿವಾರಿಸಬಹುದು ಎಂದು ಜನ ಮತ ನೀಡಿದ್ದಾರೆ. ಕಾಂಗ್ರೆಸ್ ಗ್ಯಾರಂಟಿಗಳೂ ಇಲ್ಲಿನ ಮತದಾರರ ಮೇಲೆ ಪ್ರಭಾವ ಬೀರಿವೆ.

ಕಲಬುರ್ಗಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಕಣಕ್ಕಿಳಿದಿದ್ದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಅಳಿಯ ರಾಧಾಕೃಷ್ಣ ದೊಡ್ಡಮನಿ. ಕಳೆದ ಬಾರಿ ಬಿಜೆಪಿಯನ್ನು ಗೆಲ್ಲಿಸಿದ್ದ ಇಲ್ಲಿನ ಮತದಾರರು ಈ ಬಾರಿ ರಾಧಾಕೃಷ್ಣ ಅವರನ್ನು ಗೆಲ್ಲಿಸಿದ್ದಾರೆ. ರಾಧಾಕೃಷ್ಣ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಹಾಗೂ ಹಾಲಿ ಸಂಸದರಾಗಿದ್ದ ಉಮೇಶ್ ಜಾಧವ್ ವಿರುದ್ಧ ಜಯ ಗಳಿಸಿದ್ದಾರೆ. ಉಮೇಶ್ ಜಾಧವ್ ಅವರಿಗೆ 70,313 ಮತಗಳು ಬಂದಿದ್ದರೆ, ರಾಧಾಕೃಷ್ಣ ಅವರು 1,22,042 ಮತಗಳನ್ನು ಪಡೆಯುವ ಮೂಲಕ, 51,729 ಮತಗಳ ಅಂತರದಲ್ಲಿ ಜಯ ಗಳಿಸಿದ್ದಾರೆ. ಈ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳಿದ್ದು, ಅವುಗಳಲ್ಲಿ ಒಂದು ಜೆಡಿ(ಎಸ್), ಮತ್ತೊಂದರಲ್ಲಿ ಬಿಜೆಪಿ ಶಾಸಕರಿದ್ದಾರೆ. ಉಳಿದ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರೇ ಇದ್ದಾರೆ. ಖರ್ಗೆಯವರ ಭಾವನಾತ್ಮಕ ಭಾಷಣಕ್ಕೆ ಇಲ್ಲಿನ ಮತದಾರ ಸೋತಂತೆ ಕಾಣುತ್ತದೆ. ಮತ ಕೊಡಿ ಇಲ್ಲವೆ ಒಂದು ಹಿಡಿ ಮಣ್ಣು ಕೊಡಿ ಎಂದು ಖರ್ಗೆ ಭಾಷಣ ಮಾಡಿದ್ದರು. ಕಾಂಗ್ರೆಸ್ ಗ್ಯಾರಂಟಿ, ಇಬ್ಬರು ಸಚಿವರು, ಮಲ್ಲಿಕಾರ್ಜುನ ಖರ್ಗೆಯವರ ಪ್ರಭಾವ ಇಲ್ಲಿ ವರ್ಕೌಟ್ ಆಗಿದೆ. ಆದಾಗ್ಯೂ ದೊಡ್ಡ ಅಂತರದ ಗೆಲುವಿನ ನಿರೀಕ್ಷೆ ಈಡೇರಿಲ್ಲ ಎಂಬುದು ಗಮನಾರ್ಹ.

ಬಳ್ಳಾರಿಯೆಂದರೆ ಅದು 'ಗಣಿ ಧಣಿ'ಗಳ ನಾಡು ಎಂದೇ ಕುಖ್ಯಾತಿ ಪಡೆದಿದೆ. ಅಲ್ಲಿ ಈ ಬಾರಿ ಬಿಜೆಪಿಯಿಂದ ಮಾಜಿ ಸಚಿವ ಬಿ. ಶ್ರೀರಾಮುಲು ಚುನಾವಣೆಗೆ ನಿಂತಿದ್ದರು. ಅವರ ವಿರುದ್ಧ ಸಂಡೂರಿನ ಶಾಸಕ ಇ.ತುಕಾರಾಂ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು. ಆದರೆ, ಅಲ್ಲಿ ತುಕಾರಾಂ ಅವರ ಹೆಸರು ಅಷ್ಟಾಗಿ ಚಾಲ್ತಿಯಲ್ಲಿರಲಿಲ್ಲ. ಆದರೆ, ಅಲ್ಲಿನ ಮತದಾರರು ಲೋಕಲ್ ನಾಯಕರಾದ ಶ್ರೀರಾಮುಲು ಅವರನ್ನು ಸೋಲಿಸಿ, ತುಕಾರಾಂ ಅವರಿಗೆ ಮಣೆ ಹಾಕಿದ್ದಾರೆ. ತುಕಾರಾಂ 7,30,845 ಮತಗಳನ್ನು, ಶ್ರೀರಾಮುಲು 6,31,853 ಮತಗಳನ್ನು ಪಡೆದಿದ್ದಾರೆ. 98,992 ಮತಗಳ ಅಂತರದಲ್ಲಿ ತುಕಾರಾಂ ಜಯ ಗಳಿಸಿದ್ದಾರೆ. ಬಹುಶಃ ಈ ಚುನಾವಣೆ ರಾಮುಲು ಅವರ ರಾಜಕೀಯ ಭವಿಷ್ಯವನ್ನು ಅಂತ್ಯಗೊಳಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ. 'ಗಣಿಧಣಿ'ಗಳ 'ರಿಪಬ್ಲಿಕ್' ವಿರುದ್ಧ ಬಳ್ಳಾರಿಯ ಜನ ತಿರುಗಿ ಬಿದ್ದಿದ್ದಾರೆ.

ದಕ್ಷಿಣದಲ್ಲಿ ಬಿಜೆಪಿ ಪ್ರಾಬಲ್ಯ

ದಕ್ಷಿಣ ಕರ್ನಾಟಕದಲ್ಲಿ ಎನ್.ಡಿ.ಎ. ಪರವಾಗಿ ಒಕ್ಕಲಿಗ–ಲಿಂಗಾಯತ ಮತಗಳ ಕ್ರೋಢೀಕರಣ ಪ್ರಮುಖ ಪಾತ್ರ ವಹಿಸಿವೆ. 14 ಕ್ಷೇತ್ರಗಳಲ್ಲಿ 12 ಕಡೆ ಬಿಜೆಪಿ ಮತ್ತು ಮಿತ್ರಪಕ್ಷ ಜೆಡಿ(ಎಸ್) ಗೆದ್ದಿದೆ.

ಸಂಘ ಪರಿವಾರವು ಹಿಂದುತ್ವದ ಮತಾಂಧ ವಿಚಾರಗಳ ಆಧಾರದ ವಿಷ ಪ್ರಚಾರವನ್ನು ಸಮಾಜದಲ್ಲಿ ಆಳವಾಗಿ ಹರಡುವಲ್ಲಿ ಯಶಸ್ವಿಯಾಗಿರುವ ಭಾಗ ಕರ್ನಾಟಕದ ಕರಾವಳಿ. ಸತತ ಸಂಸತ್ ಚುನಾವಣೆಗಳಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಬಿಜೆಪಿ ತನ್ನ ಪ್ರಬಲ ಹಿಡಿತವನ್ನು ಉಳಿಸಿಕೊಂಡಿದೆ.

1991 ರ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಕ್ಷೇತ್ರವನ್ನು (ಹಿಂದಿನ ಮಂಗಳೂರು ಕ್ಷೇತ್ರ) ಕಾಂಗ್ರೆಸಿನಿಂದ ವಶಪಡಿಸಿಕೊಂಡ ಬಿಜೆಪಿ, ಅಲ್ಲಿಂದ ಸತತ ಎಂಟು ಅವಧಿಗೆ ತನ್ನೊಂದಿಗೆ ಸ್ಥಾನವನ್ನು ಉಳಿಸಿಕೊಂಡಿದೆ (1996, 1998, 1999, 2004, 2009, 2014 ಮತ್ತು 2019).

ಉತ್ತರ ಕನ್ನಡದಲ್ಲಿ ಬಿಜೆಪಿ 1996 ರಲ್ಲಿ ಅನಂತಕುಮಾರ್ ಹೆಗಡೆಯವರ ➚

ಗೆಲುವಿನೊಂದಿಗೆ ಮೊದಲ ಲೋಕಸಭಾ ಸ್ಥಾನವನ್ನು ಪಡೆದುಕೊಂಡಿತು. ಅಂದಿನಿಂದ, 1999 ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮಾರ್ಗರೇಟ್ ಆಳ್ವ ಗೆದ್ದಿದ್ದನ್ನು ಹೊರತುಪಡಿಸಿ, ಹೆಗ್ಡೆ ಅವರು ಐದು ಅವಧಿಗೆ (1998, 2004, 2009, 2014 ಮತ್ತು 2019) ಈ ಕ್ಷೇತ್ರವನ್ನು ಗೆದ್ದರು. ಈಗ ಇಲ್ಲಿ ಬಿಜೆಪಿಯಿಂದ ವಿಶ್ವೇಶ್ವರ ಹೆಗಡೆ ಕಾಗೇರಿ ಗೆಲುವು ಸಾಧಿಸಿದ್ದಾರೆ.

1998ರಲ್ಲಿ ಉಡುಪಿ–ಚಿಕ್ಕಮಗಳೂರು ಕ್ಷೇತ್ರದಲ್ಲಿ ಐ.ಎಂ. ಜಯರಾಮ ಶೆಟ್ಟಿ ಗೆಲುವಿನ ಮೂಲಕ ಬಿಜೆಪಿ ತನ್ನ ಖಾತೆಯನ್ನು ತೆರೆದಿತ್ತು. ಬಿಜೆಪಿ ಅಂದಿನಿಂದ ಈ ಸ್ಥಾನವನ್ನು ನಾಲ್ಕು ಅವಧಿಗೆ (2004, 2009, 2014 ಮತ್ತು 2019) ಗೆದ್ದಿದೆ. 1999ರಲ್ಲಿ (ಅಭ್ಯರ್ಥಿ ವಿನಯ್ ಕುಮಾರ್ ಸೊರಕೆ) ಹಾಗೂ 2012ರಲ್ಲಿ ನಡೆದ ಉಪಚುನಾವಣೆಯಲ್ಲಿ (ಅಭ್ಯರ್ಥಿ ಕೆ.ಜಯಪ್ರಕಾಶ್ ಹೆಗ್ಡೆ) ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಈ ಕ್ಷೇತ್ರದಲ್ಲಿ ಎರಡು ಬಾರಿ ಸಂಸದರಾಗಿ, ಹಾಗೂ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವರಾಗಿದ್ದ ಶೋಭಾ ಕರಂದ್ಲಾಜೆ ಪ್ರತಿನಿಧಿಸುತ್ತಿದ್ದರು. ಈಗ ಈ ಕ್ಷೇತ್ರದಲ್ಲಿ ಬಿಜೆಪಿ ತನ್ನ ಬಲವನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದು ಕೋಟ ಶ್ರೀನಿವಾಸ ಪೂಜಾರಿ ಗೆಲುವು ಸಾಧಿಸಿದ್ದಾರೆ.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕಾಂಗ್ರೆಸ್ ಪೈಪೋಟಿ ನೀಡಲು ಪ್ರಯತ್ನಿಸಿತ್ತು.

ಬಿಜೆಪಿಗೆ ಶಕ್ತಿ ಕೊಟ್ಟ
ಹಿಂದುಳಿದ ವರ್ಗಗಳ ಮತ!

ಆರೆಸ್ಸೆಸ್–ಬಿಜೆಪಿ ಪರಿವಾರದ ಕೋಮುವಾದಿ ಕುತಂತ್ರಗಳ ವಿರುದ್ಧ ದೃಢವಾದ ಸೈದ್ಧಾಂತಿಕ ಹೋರಾಟ ಬೆಳೆಸದೇ, ಪ್ರತಿರೋಧ ಒಡ್ಡದೇ, ಕೇವಲ ಜಾತಿ ಸಮೀಕರಣಗಳನ್ನು ನಂಬಿಕೊಂಡು ಚುನಾವಣೆ ಗೆಲ್ಲಲು ಪ್ರಯತ್ನಿಸುವ ಕಾಂಗ್ರೆಸ್‌ನ ದೌರ್ಬಲ್ಯಗಳು ಈ ಚುನಾವಣೆಯಲ್ಲೂ ಮುಂದುವರಿಯಿತು. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಹಿಂದುಳಿದ ವರ್ಗವಾದ ಬಿಲ್ಲವ ಸಮುದಾಯದ ಮತಗಳನ್ನು ಸೆಳೆಯಲು ಕಾಂಗ್ರೆಸ್ ತಂತ್ರಗಾರಿಕೆ ನಡೆಸಿತ್ತು. ಬಿಲ್ಲವ ಸಮುದಾಯದ ಪದ್ಮರಾಜ್ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿತ್ತು. ಚುನಾವಣೆಯಲ್ಲಿ ಬಿಲ್ಲವ ಸಮುದಾಯದ ಕ್ರೋಢೀಕರಣದ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಗಳು ನಡೆದಿದ್ದವು. ಆದರೆ ಇದನ್ನು ಮತವಾಗಿ ಕ್ರೋಢೀಕರಿಸುವಲ್ಲಿಯೂ ಕಾಂಗ್ರೆಸ್ ವಿಫಲವಾಗಿದೆ. ಬದಲಾಗಿ ಬಿಲ್ಲವ ಮತಗಳನ್ನು ಹಿಂದಿನಂತೆ ಬಿಜೆಪಿ ತನ್ನ ತೆಕ್ಕೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಉಡುಪಿ ಚಿಕ್ಕಮಗಳೂರು ಕ್ಷೇತ್ರದಲ್ಲೂ ಬಿಲ್ಲವ ಮತಗಳನ್ನು ತಮ್ಮತ್ತ ಸೆಳೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಮಂಗಳೂರಿನಲ್ಲಿ ಬಂಟ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿಯೂ, ನಾನಾ ತಂತ್ರಗಾರಿಕೆಗಳ ಮೂಲಕ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಬಿಲ್ಲವ ಮತಗಳನ್ನು ತಮ್ಮತ್ತ ಸೆಳೆಯುವಲ್ಲಿ ಬಿಜೆಪಿ ಯಶಸ್ವಿಯಾದರೆ, ಉಡುಪಿ ಚಿಕ್ಕಮಗಳೂರಿನಲ್ಲಿ ಬಿಲ್ಲವ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಅಲ್ಲೂ ಕಾಂಗ್ರೆಸ್‌ಗೆ ಬಿಲ್ಲವ ಮತಗಳು ಹರಿದು ಹೋಗದಂತೆ ತಂತ್ರಗಾರಿಕೆ ರೂಪಿಸಿ ಬಿಜೆಪಿ ಯಶಸ್ವಿಯಾಗಿದೆ.

ಪ್ರಧಾನವಾಗಿ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಅಂದರೆ ‘ಅಹಿಂದ’ ಸಮುದಾಯಗಳ ಬೆಂಬಲವನ್ನು ನೆಚ್ಚಿಕೊಂಡು ಬಂದಿರುವ ಕಾಂಗ್ರೆಸ್ ಶಿವಮೊಗ್ಗದಲ್ಲೂ ಹಿಂದುಳಿದ ಈಡಿಗ ಮತಗಳು ದೊಡ್ಡ ಪ್ರಮಾಣದಲ್ಲಿದ್ದರೂ ಅವರನ್ನು ಕ್ರೋಢೀಕರಿಸುವಲ್ಲಿ ವಿಫಲವಾಗಿದೆ. ಅದೇ ರೀತಿಯಲ್ಲಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲೂ ಹಿಂದುಳಿದ ವರ್ಗ ನಾಮಧಾರಿಗಳನ್ನು ತಮ್ಮತ್ತ ಸೆಳೆಯುವಲ್ಲಿ ಕಾಂಗ್ರೆಸ್ ವಿಫಲವಾಗಿದೆ.

ಹಿಂದುಳಿದ ವರ್ಗ
‘ಕೈ’ ಹಿಡಿಯದ ಕಾರಣವೇನು?

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳು ಕಾಂಗ್ರೆಸ್‌ಗೆ ದೊಡ್ಡ ಪ್ರಮಾಣದಲ್ಲಿ ಸಾಥ್ ನೀಡಿದ್ದವು. ದಕ್ಷಿಣ ಕನ್ನಡ, ಉಡುಪಿ ಹೊರತಾಗಿ ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗದಲ್ಲೂ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿತ್ತು. ಹಿಂದುತ್ವದ ಭದ್ರಕೋಟೆ ಎಂದೇ ಬಿಂಬಿತವಾಗಿದ್ದ ಚಿಕ್ಕಮಗಳೂರಿನಲ್ಲಿ ಐದು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿತ್ತು.

ಶಿವಮೊಗ್ಗ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಪೈಕಿ 3 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿತ್ತು. ಉತ್ತರ ಕನ್ನಡ ಜಿಲ್ಲೆಯ 6 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 4 ರಲ್ಲಿ ಗೆಲುವು ಸಾಧಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಸ್ಥಾನಗಳನ್ನು ಗೆದ್ದರೆ, ಕೊಡಗು ಜಿಲ್ಲೆಯಲ್ಲೂ 2 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ ಉಡುಪಿಯಲ್ಲಿ ಮಾತ್ರ ಗೆಲುವು ಸಾಧ್ಯವಾಗಿರಲಿಲ್ಲ. ಲೋಕಸಭೆಯಲ್ಲಿ ಇವೆಲ್ಲವೂ ಬಿಜೆಪಿ ಪಾಲಾಗಿದೆ.

ಎರಡು ಪಕ್ಷಕ್ಕೆ ಆಸರೆಯಾದ
ದಲಿತ ಸಮುದಾಯದ ಮತಗಳು:

ರಾಯಚೂರು, ಬಳ್ಳಾರಿ ಮತ್ತು ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಪ್ರಬಲವಾಗಿರುವ ನಾಯಕ್ ಸಮುದಾಯವು ಕಾಂಗ್ರೆಸ್‌ಗೆ ಬೆಂಬಲವನ್ನು ಮುಂದುವರೆಸಿದಂತೆ ಕಾಣುತ್ತಿಲ್ಲ. 2023 ರ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಈ ಸಮುದಾಯ (ಎಸ್ಟಿ ಮೀಸಲಾತಿಯಲ್ಲಿನ ಗೊಂದಲದಿಂದ) ಬಿಜೆಪಿಯಿಂದ ದೂರ ಸರಿದಿದೆ ಎಂದು ನಂಬಲಾಗಿದೆ. ಬಳ್ಳಾರಿಯಲ್ಲಿ (ಎಸ್ಟಿ) ಬಿಜೆಪಿಯ ಮಾಜಿ ಸಚಿವ ಬಿ.ಶ್ರೀರಾಮುಲು ಸೋಲು ಮತ್ತು ರಾಯಚೂರಿನಲ್ಲಿ (ಎಸ್ಟಿ) ಕಾಂಗ್ರೆಸ್‌ನ ಗೆಲುವನ್ನು ಈ ಹಿನ್ನೆಲೆಯಲ್ಲಿ ನೋಡಲಾಗುತ್ತಿದೆ.

ಕಲ್ಯಾಣ ಕರ್ನಾಟಕದಲ್ಲಿ ಲಿಂಗಾಯತರು ಹೆಚ್ಚಾಗಿ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದ್ದಾರೆ ಎಂಬ ವಿಶ್ಲೇಷಣೆಗಳಿವೆ. ಪರಿಶಿಷ್ಟ ಪಂಗಡಕ್ಕೆ ಮೀಸಲಾದ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ 2 ಮತ್ತು ಬಿಜೆಪಿ ಹಾಗೂ ಜೆಡಿ(ಎಸ್) ತಲಾ ಒಂದನ್ನು ಗೆದ್ದಿವೆ. ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳು ಕಾಂಗ್ರೆಸ್‌ಗೆ ಮತ ಹಾಕಿದ್ದರೂ, ಪ್ರಬಲ ಜಾತಿಗಳು ಒಗ್ಗೂಡಿ ಬಿಜೆಪಿ ಮತ್ತು ಜೆಡಿ(ಎಸ್) ಗೆಲುವಿಗೆ ಕಾರಣವಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿ ಬಲ ಹೆಚ್ಚಿಸಿದ ಮೈತ್ರಿ

ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿ(ಎಸ್) ಮೈತ್ರಿಯ ಫಲ ಎರಡೂ ಪಕ್ಷಗಳಿಗೆ ದಕ್ಕಿದೆ. ಹಾಸನ ಹೊರತಾಗಿ ಒಕ್ಕಲಿಗ ಸಮುದಾಯ ಗಣನೀಯ ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ಕಾಂಗ್ರೆಸ್ ಅನ್ನು ಕಟ್ಟಿ ಹಾಕುವಲ್ಲಿ ಮೈತ್ರಿ ಯಶಸ್ವಿಯಾಗಿದೆ.

ಮಂಡ್ಯ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಮತಗಳ ಅಂತರದಲ್ಲಿ ಮೈತ್ರಿ ಅಭ್ಯರ್ಥಿಗಳಿಗೆ ಗೆಲುವಾಗಿದೆ. ಅದರಲ್ಲೂ ಬೆಂಗಳೂರು ಗ್ರಾಮಾಂತರದಲ್ಲಿ ಎರಡೂವರೆ ಲಕ್ಷಕ್ಕೂ ಅಧಿಕ ಮತಗಳನ್ನು ಪಡೆದುಕೊಂಡು ಡಾ. ಸಿ.ಎನ್. ಮಂಜುನಾಥ್ ಗೆದ್ದರೆ, ಮಂಡ್ಯದಲ್ಲೂ ಇಷ್ಟೇ ಪ್ರಮಾಣದ ಅಂತರದಲ್ಲಿ ಎಚ್.ಡಿ. ಕುಮಾರಸ್ವಾಮಿ ಗೆಲುವು ಸಾಧಿಸಿದ್ದಾರೆ.

ಮುಂಬೈ ಕರ್ನಾಟಕ ಪ್ರದೇಶದಲ್ಲಿ, ಬಿಜೆಪಿ ಮೇಲುಗೈ ಮುಂದುವರೆದಿದೆ ಮತ್ತು ಲಿಂಗಾಯತ ಸಮುದಾಯದ ಹೆಚ್ಚಿನ ಬೆಂಬಲ ಕ್ರೋಢೀಕರಣದಿಂದ ಇದು ಸಾಧ್ಯವಾಗಿದೆ. ಲಿಂಗಾಯತರ ವಿರೋಧ ಕಟ್ಟಿಕೊಂಡಿದ್ದ ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಸೋಲುವ ಹಂತಕ್ಕೆ ತಲುಪಿದ್ದರು. ನೇಹಾ ಕೊಲೆಯನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಳ್ಳದೇ ಇದ್ದಿದ್ದರೆ ಜೋಷಿ ಹೀನಾಯವಾಗಿ ಸೋಲುತ್ತಿದ್ದರು.

ಸಚಿವರ ಮಕ್ಕಳಿಗೆ ಟಿಕೆಟ್

ಈ ಬಾರಿಯ ವಿಶೇಷತೆ ಎಂದರೆ ಆರು ಹಾಲಿ ಸಚಿವರ ಮಕ್ಕಳು ಅಭ್ಯರ್ಥಿಗಳಾಗಿ ಕಣಕ್ಕಿಳಿದ್ದರು. ಮೂವರು ಸಚಿವರ ಮಕ್ಕಳು ಗೆಲುವು ಸಾಧಿಸಿದರೆ, ಮೂವರು ಸೋಲು ಕಂಡಿದ್ದಾರೆ.

ಚಿಕ್ಕೋಡಿ ಕ್ಷೇತ್ರದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ ಅವರು ಬಿಜೆಪಿ ಅಭ್ಯರ್ಥಿ ಅಣ್ಣಾ ಸಾಹೇಬ್ ಜೊಲ್ಲೆ ಅವರನ್ನು ಸೋಲಿಸುವ ಮೂಲಕ ಗೆಲುವಿನ ನಗೆ ಬೀರಿದ್ದಾರೆ. ಈ ಮೂಲಕ ಮೊದಲ ಬಾರಿಗೆ ಸಂಸತ್ ಪ್ರವೇಶಿಸುತ್ತಿದ್ದಾರೆ.


ಬೆಳಗಾವಿ ಕ್ಷೇತ್ರದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಸೋಲು ಕಂಡಿದ್ದಾರೆ. ಕಾಂಗ್ರೆಸ್ ತೊರೆದು ಮರಳಿ ಬಿಜೆಪಿ ಸೇರಿದ್ದ ಮಾಜಿ ಸಿ.ಎಂ. ಜಗದೀಶ್ ಶೆಟ್ಟರ್ ಇಲ್ಲಿ ಗೆಲುವು ಸಾಧಿಸಿದ್ದಾರೆ. ಬಾಗಲಕೋಟೆ ಕ್ಷೇತ್ರದಲ್ಲಿ ಸಚಿವ ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಪಾಟೀಲ್ ಸೋಲು ಅನುಭವಿಸಿದ್ದಾರೆ. ಪ್ರತಿಸ್ಪರ್ಧಿ ಬಿಜೆಪಿಯ ಪಿ.ಸಿ. ಗದ್ದಿಗೌಡರ್ ಮತ್ತೆ ಗೆದ್ದಿದ್ದಾರೆ.

ಚಾಮರಾಜನಗರ ಎಸ್.ಸಿ. ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಚಿವ ಹೆಚ್.ಸಿ. ಮಹದೇವಪ್ಪ ಪುತ್ರ ಸುನೀಲ್ ಬೋಸ್ ಗೆಲುವು ಸಾಧಿಸಿ ಮೊದಲ ಬಾರಿಗೆ ಸಂಸತ್ ಪ್ರವೇಶಿಸುತ್ತಿದ್ದಾರೆ. ಬಿಜೆಪಿ ಅಭ್ಯರ್ಥಿ ಎಸ್. ಬಾಲರಾಜ್ ಸೋಲು ಕಂಡಿದ್ದಾರೆ.

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ ಸೌಮ್ಯಾ ರೆಡ್ಡಿ ಸೋಲು ಕಂಡಿದ್ದಾರೆ. ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಎರಡನೇ ಅವಧಿಗೆ ಗೆಲುವು ಸಾಧಿಸಿದ್ದಾರೆ.

ರಾಜ್ಯದಲ್ಲಿ ಹೀಗೆ ಸಚಿವರ ಮಕ್ಕಳಿಗೆ ಟಿಕೆಟ್ ನೀಡಿದ್ದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ದಾವಣಗೆರೆಯಲ್ಲಿ ಒಬ್ಬ ಕಾಂಗ್ರೆಸ್ ಮುಖಂಡ ಬಂಡಾಯವೆದ್ದು ಸ್ಪರ್ಧಿಸಿದ್ದರು. ಹೆಚ್ಚಿನ ಪರಿಣಾಮ ಬೀರದಿದ್ದರೂ, ಸಣ್ಣ ಮತಗಳಷ್ಟು ಬಿಜೆಪಿಯ ಕಡೆ ವರ್ಗಾವಣೆ ಆಗಿದೆ ಎಂಬ ಲೆಕ್ಕಾಚಾರಗಳು ಚರ್ಚೆಯಾಗುತ್ತಿವೆ.

ಒಟ್ಟಿನಲ್ಲಿ ಕರ್ನಾಟಕದಲ್ಲಿ ಗಣನೀಯ ಜನಸಂಖ್ಯೆ ಹೊಂದಿರುವ ಒಕ್ಕಲಿಗ ಮತ್ತು ಲಿಂಗಾಯತ ಜಾತಿಗಳಂತಹ ಪ್ರಬಲ ಜಾತಿಗಳ ಹೆಸರಿನಲ್ಲಿ ನಡೆಯುತ್ತಿರುವ, ಆ ಜಾತಿಗಳಲ್ಲಿರುವ ಬಡವರ ಹಿತಾಸಕ್ತಿಗೂ ವಿರುದ್ಧವಾದ ಜಾತಿ ರಾಜಕಾರಣವನ್ನು ಬಳಸಿಕೊಂಡು ಕೋಮುವಾದಿ ಬಿಜೆಪಿ ರಾಜಕೀಯ ಲಾಭವನ್ನು ಪಡೆದಿದೆ. ‘ಜಾತ್ಯತೀತ’ ಎಂಬ ಶಬ್ದವನ್ನು ತನ್ನ ಹೆಸರಿನಲ್ಲೆ ಹೊಂದಿರುವ ಜೆಡಿ(ಎಸ್) ಪಕ್ಷದ ಅವಕಾಶವಾದಿತನ ಅದಕ್ಕೆ ಅವಕಾಶ ಮಾಡಿಕೊಟ್ಟಿದೆ. ●



ಭಾರತೀಯ ಸಮಾಜದಲ್ಲಿನ ಈಗಿನ ಸ್ಥಬ್ದತೆಯನ್ನು ಅಲುಗಾಡಿಸಲು, ಕಾರ್ಮಿಕ ವರ್ಗವು ಸ್ಪಷ್ಟ ದೃಷ್ಟಿಯೊಂದಿಗೆ ಕ್ರಾಂತಿಕಾರಿ ಚಿಂತನೆಯನ್ನು ಮುನ್ನಡೆಸಬೇಕು. ಕಾರ್ಮಿಕ ವರ್ಗವು ಸಾಮಾಜಿಕ ಬದಲಾವಣೆಯ ಸಿದ್ಧಾಂತದಿಂದ ಮಾರ್ಗದರ್ಶಿಸಲ್ಪಟ್ಟರೆ, ಯಶಸ್ಸು ಖಂಡಿತವಾಗಿಯೂ ಸಂಭವಿಸುತ್ತದೆ. ಮುಂದಿನ ದಿನಗಳಲ್ಲಿ ಜಗತ್ತನ್ನು ಉತ್ತಮ ಭವಿಷ್ಯದತ್ತ ಕೊಂಡೊಯ್ಯುವ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿರುವ ಕಾರ್ಮಿಕ ವರ್ಗದ ಸಿದ್ಧಾಂತದ ಬಲವಾದ ಪ್ರಭಾವವನ್ನು ಚೇತರಿಸಿಕೊಳ್ಳುವುದು ನಮ್ಮ ಕಾರ್ಯವಾಗಿದೆ. ಗಮನಿಸಬೇಕಾದ ಅಂಶವೆಂದರೆ 1916 ರಲ್ಲಿ ಸಹ ರಷ್ಯಾಕ್ಕೆ 1917 ರ ಕ್ರಾಂತಿಯ ಬಗ್ಗೆ ಯಾವುದೇ ಸುಳಿವು ಇರಲಿಲ್ಲ.

ಸಿಐಟಿಯು 55ನೇ ಸಂಸ್ಥಾಪನಾ ದಿನದ ವಿಶೇಶ ಲೇಖನ

ಕಾರ್ಮಿಕ ವರ್ಗ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತ

"ಜಗತ್ತಿನ ಕಾರ್ಮಿಕ ವರ್ಗದ ಭಾಗವಾಗಿರುವ ನಾವು, ವಿಶ್ವದ ದುಡಿಯುವ ಶ್ರಮಜೀವಿಗಳ ಭಾಗವಾಗಿರುವ ನಾವು, ಪ್ರಪಂಚದ ಸಾಮಾನ್ಯ ಜನರಾಗಿರುವ ನಾವು ಮುನ್ನಡೆಯಲು ಪ್ರಾರಂಭಿಸಿದ್ದೇವೆ, ನಾವು ವಿಜಯದ ಹಾದಿಯಲ್ಲಿ ಮುನ್ನಡೆಯಲು ಪ್ರಾರಂಭಿಸಿದ್ದೇವೆ. ಈ ಸಮಯ ನಮ್ಮದು, ಈ ಸಮಯ ಸಾಮಾನ್ಯ ಜನರ, ಕಾರ್ಮಿಕ ವರ್ಗದ ಸಮಯ. ಸಾಮ್ರಾಜ್ಯಶಾಹಿಗೆ ಸಂಬಂಧಿಸಿದಂತೆಯೂ ಬಂಡವಾಳಶಾಹಿಯ ಬಗ್ಗೆಯೂ ಈಗಾಗಲೇ ತೀರ್ಪು ಬರೆಯಲಾಗಿದೆ. ಬಂಡವಾಳಶಾಹಿ ಶಕ್ತಿಗಳೇ, ನೀವು ನಶಿಸುತ್ತಿರುವ ಸಮುದಾಯಕ್ಕೆ ಸೇರಿದವರು, ಮುಂದಿನ ದಿನಗಳಲ್ಲಿ ನಾಶವಾಗಬಹುದಾದವರು. ದುಡಿಯುವ ವರ್ಗ ನಿಮ್ಮನ್ನು ಅಗೆದು ಹೂತುಬಿಡುತ್ತದೆ".

"ಇಂದು ಬೂರ್ಜ್ವಾಗಳೊಂದಿಗೆ ಮುಖಾಮುಖಿಯಾಗಿರುವ ಎಲ್ಲಾ ವರ್ಗಗಳಲ್ಲಿ, ಶ್ರಮಜೀವಿಗಳು ಮಾತ್ರ ನಿಜವಾಗಿಯೂ ಕ್ರಾಂತಿಕಾರಿ ವರ್ಗವಾಗಿದೆ. ಆಧುನಿಕ ಉದ್ಯಮದ ಮುಖಾಂತರ ಇತರ ವರ್ಗಗಳು ಕೊಳೆಯುತ್ತವೆ ಮತ್ತು ಅಂತಿಮವಾಗಿ ಕಣ್ಮರೆಯಾಗುತ್ತವೆ; ಶ್ರಮಜೀವಿಗಳು ಅದರ ವಿಶೇಷ ಮತ್ತು ಅಗತ್ಯ ಉತ್ಪನ್ನವಾಗಿದೆ."

54 ವರ್ಷಗಳ ಹಿಂದೆ, 1970 ರಲ್ಲಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ರಚನೆಯಾದಾಗ, ಅದರ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದ ಕಾಮ್ರೇಡ್ ಬಿಟಿ ರಣದಿವೆ ಅವರು ಸಮ್ಮೇಳನವನ್ನು ಉದ್ದೇಶಿಸಿ ಮಾಡಿದ ಘೋಷಣೆ ಇದು:

ಸಿಐಟಿಯುನ 55ನೇ ಸಂಸ್ಥಾಪನಾ ದಿನವನ್ನು 30 ಮೇ 2024 ರಂದು ಆಚರಿಸಲಾಯಿತು. ಸಿಐಟಿಯು ಒಂದು ಪ್ರಖ್ಯಾತ ಪ್ರಯಾಣದ ಇತಿಹಾಸವನ್ನು ಹೊಂದಿದೆ. ಕಳೆದ 54 ವರ್ಷಗಳಲ್ಲಿ ಭಾರತದ ಹೊರಗಿನ ಪರಿಸ್ಥಿತಿ ಗಮನಾರ್ಹವಾಗಿ ಬದಲಾಗಿದೆ. ಸೋವಿಯತ್ ಒಕ್ಕೂಟದ ಪತನ ಮತ್ತು ಸಮಾಜವಾದಕ್ಕೆ ಹಿನ್ನಡೆ, ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿಯ ಆದೇಶದ ಅಡಿಯಲ್ಲಿ ಉಂಟಾದ ನವ ಉದಾರವಾದಿ ಪ್ರಾಬಲ್ಯವು ಇಂದಿನ ಪರಿಸ್ಥಿತಿಗಳನ್ನು ವ್ಯಾಖ್ಯಾನಿಸುತ್ತದೆ.

ಬಂಡವಾಳಶಾಹಿಯ ಬಿರುಗಾಳಿಗೆ ಯಾವುದೇ ಪರ್ಯಾಯವಿಲ್ಲ ಎಂದು ಹೇಳುತ್ತಿದ್ದರೂ ಅದನ್ನು ತೀವ್ರವಾಗಿ ವಿರೋಧಿಸುತ್ತಲೇ ಬಂದಿದ್ದೇವೆ. ಆದಾಗ್ಯೂ, ಭಾರತೀಯ ಕಾರ್ಮಿಕ ವರ್ಗವು ತನ್ನ ವರ್ಗವನ್ನು ಎಲ್ಲಾ ರೀತಿಯ ಶೋಷಣೆಯಿಂದ ಸಂಪೂರ್ಣವಾಗಿ ಮುಕ್ತಗೊಳಿಸಲು ಇನ್ನೂ ಬಹಳ ದೂರ ಸಾಗಬೇಕಾಗಿದೆ. ಬಂಡವಾಳಶಾಹಿ ಸಿದ್ಧಾಂತದ ವಿವಿಧ ಛಾಯೆಗಳಿಂದ ಬೆದರಿಕೆಗೆ ಒಳಗಾದ ಕಾರ್ಮಿಕ ವರ್ಗವನ್ನು ಪುನರುಜ್ಜೀವನಗೊಳಿಸಬಹುದು. ಎಲ್ಲಾ ಶೋಷಿತ ಮತ್ತು ತುಳಿತಕ್ಕೊಳಗಾದ ವರ್ಗಗಳು ಎದ್ದು ಸಮಾಜವಾದದತ್ತ ಸಾಗಬಹುದು. ಇದಕ್ಕಾಗಿ ನಾವು ನಮ್ಮ ಸಿದ್ಧಾಂತದ ಆಧಾರದ ಮೇಲೆ ದುಡಿಯುವ ವರ್ಗವನ್ನು ಮೇಲೆತ್ತಬೇಕಾಗಿದೆ.

ದುಡಿಯುವ ವರ್ಗದಲ್ಲಿ ಭಾರೀ ಪ್ರಮಾಣದ ಅಪನಂಬಿಕೆ, ನಿರುತ್ಸಾಹ, ಅಸಮಾಧಾನ ಮತ್ತು ಹತಾಶೆಯನ್ನು ಸೃಷ್ಟಿಸುವುದು ಆಡಳಿತ ವರ್ಗ ನಡೆಸುವ ಸೈದ್ಧಾಂತಿಕ ಆಕ್ರಮಣದ ಪ್ರಮುಖ ಭಾಗವಾಗಿದೆ. ಬಂಡವಾಳಶಾಹಿಯು ತನ್ನ ಸ್ವಂತ ಅಸ್ತಿತ್ವ ಮತ್ತು ಶಕ್ತಿಯನ್ನು ಅಂದಾಜು ಮಾಡಲು ಸಾಧ್ಯವಾಗದ ರೀತಿಯಲ್ಲಿ ಅತ್ಯಂತ ಮುಂದುವರಿದ ಮತ್ತು ಕ್ರಾಂತಿಕಾರಿ ವರ್ಗವಾದ ಕಾರ್ಮಿಕ ವರ್ಗವನ್ನು ನಿಶ್ಯಸ್ತ್ರಗೊಳಿಸುತ್ತದೆ. ಆದ್ದರಿಂದ, ಕಾರ್ಮಿಕ ವರ್ಗದ ವ್ಯಕ್ತಿನಿಷ್ಠತೆಗೆ ಬಂಡವಾಳಶಾಹಿ ಕಲ್ಪನೆಗಳು ಒಡ್ಡುವ ಸವಾಲುಗಳನ್ನು ಎದುರಿಸಿದಾಗ ಮಾತ್ರ ವಸ್ತುನಿಷ್ಠ ಸವಾಲುಗಳನ್ನು ಜಯಿಸಲು ಸಾಧ್ಯ. ದುಡಿಯುವ ವರ್ಗದ ಯುವಕರಲ್ಲಿನ ಆತ್ಮವಿಶ್ವಾಸದ ಕೊರತೆಯನ್ನು ಅಸ್ತಿತ್ವದಲ್ಲಿರುವ ಸಾಮಾಜಿಕ ರಚನೆಯನ್ನು ಬೇರುಸಹಿತ ಕಿತ್ತು ಹೊಸ ಉದಯದತ್ತ ಮುನ್ನಡೆಯುವ ರೀತಿಯಲ್ಲಿ ಎತ್ತಿಹಿಡಿಯಬೇಕು.

ಇವರೆಲ್ಲರೂ ಒಂದೇ ವರ್ಗಕ್ಕೆ ಸೇರಿದವರು

ಕಾರ್ಮಿಕರು–ರೈತರು–ಮಧ್ಯಮ ವರ್ಗ–ಕೈಯಿಂದ ಮತ್ತು ಆಲೋಚನೆಯಿಂದ ದುಡಿಯುವ ಎಲ್ಲರೂ ಒಂದೇ "ವರ್ಗ". ವರ್ಗವು ವಿಭಿನ್ನ ಜನರ ಗುಂಪಲ್ಲ. ಉತ್ಪಾದನೆ, ಸರಬರಾಜು, ವಿತರಣೆ, ಸೇವೆ ಮತ್ತು ಹೆಚ್ಚುವರಿ ಕಾರ್ಮಿಕರ ಉತ್ಪಾದನೆ ಇವೆಲ್ಲವೂ ಉತ್ಪಾದನಾ ಪ್ರಕ್ರಿಯೆಯ ತಾತ್ಕಾಲಿಕ ವರ್ಗೀಕರಣವಾಗಿದೆ. ಇವರೆಲ್ಲರನ್ನು ಒಂದಾಗಿಸುವ ಈ ಚಿಂತನೆಯ ಹರಿವನ್ನು ಮೊಂಡಾಗಿಸಲು, ಆಡಳಿತ ವರ್ಗವು ಬೌದ್ಧಿಕ ದಲ್ಲಾಳಿಗಳು, ಧಾರ್ಮಿಕ ಮೂಲಭೂತವಾದಿಗಳ ಮುಖಂಡರು ಮತ್ತು ರಾಜಕೀಯ ದಲ್ಲಾಳಿಗಳ ಮೂಲಕ ಇವರ ವಿರುದ್ಧ ಸೈದ್ಧಾಂತಿಕ ದಾಳಿಯನ್ನು ಪ್ರಾರಂಭಿಸಿದೆ.

ಉತ್ಪಾದನಾ ಸಾಧನಗಳ ಮೇಲೆ ಅವರ ನಿಯಂತ್ರಣದಿಂದಾಗಿ ಮತ್ತು ಉತ್ಪಾದನಾ ಸಂಬಂಧಗಳಲ್ಲಿ ನಮ್ಮ ಪ್ರತ್ಯೇಕ ಅಸ್ತಿತ್ವದಿಂದಾಗಿ, ನಾವೆಲ್ಲರೂ ಒಂದೇ ವರ್ಗಕ್ಕೆ ಸೇರಿದವರು ಎಂಬುದನ್ನು ಅವರು ನಿರಾಕರಿಸುತ್ತಾರೆ.

ಅಂತಹ ಆಲೋಚನೆಯ ಪರಿಣಾಮವೇನೆಂದರೆ, ಇದು ವರ್ಗಗಳ ನಿರ್ದಿಷ್ಟ ಸಂಘಟನೆಯನ್ನು ನಿರಾಕರಿಸುವುದು, ಅವುಗಳ ನಡುವಿನ ಅಂತರ್ಗತ ವಿರೋಧಾಭಾಸವನ್ನು ನಿರಾಕರಿಸುವುದು, ವರ್ಗ ಹೋರಾಟದ ನಿರ್ದಿಷ್ಟ ಪಾತ್ರವನ್ನು ನಿರಾಕರಿಸುವುದು ಮತ್ತು ವಿಶೇಷವಾಗಿ ಸಾಮಾಜಿಕ ಬದಲಾವಣೆಯಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನು ನಿರಾಕರಿಸುವುದು.

ಕ್ರಾಂತಿಕಾರಿ ಟ್ರೇಡ್ ಯೂನಿಯನ್ ಕೇಂದ್ರದ ಮೂಲಭೂತ ಕಾರ್ಯವೆಂದರೆ, ಕೈಗಾರಿಕಾ ಕಾರ್ಮಿಕರ ತಕ್ಷಣದ ಬೇಡಿಕೆಗಳಿಗಾಗಿ ಕಾರ್ಮಿಕರನ್ನು ಮಾಲೀಕ ವರ್ಗದ ವಿರುದ್ಧ ಒಂದು ವರ್ಗವಾಗಿ ಸಜ್ಜುಗೊಳಿಸುವುದು. ಸಮಾಜದ ತುಳಿತಕ್ಕೊಳಗಾದ ವರ್ಗಗಳನ್ನು ಮುನ್ನಡೆಸುವ ರಾಜಕೀಯ ಪ್ರಬುದ್ಧತೆಯನ್ನು ಪಡೆಯುವುದು ಈ ಕಾರ್ಮಿಕ ಸಂಘಗಳು. ಹೀಗೆ ಒಂದು ವರ್ಗವಾಗಿ ರೂಪುಗೊಂಡ ಕಾರ್ಮಿಕ ವರ್ಗವು ತನ್ನ ಐತಿಹಾಸಿಕ ಕೆಲಸವನ್ನು ಪೂರ್ಣಗೊಳಿಸಬೇಕು.

ಜಾತಿ ಮತ್ತು ಜನಾಂಗೀಯವಾಗಿ ವಿಭಜಿಸುವ ಪ್ರಯತ್ನ

ಈಗ ಮುಂಚೂಣಿಗೆ ಬಂದಿರುವ ಎರಡನೆಯ ಪ್ರಮುಖ ಅಂಶವೆಂದರೆ, ಒಂದು ವರ್ಗವಾಗಿ ಅವರನ್ನು ಒಗ್ಗೂಡಿಸುವ ಪ್ರಯತ್ನವನ್ನು ಮೊಟಕುಗೊಳಿಸುವ ಸಲುವಾಗಿ ಕಾರ್ಮಿಕ ವರ್ಗದ ನಡುವೆ ಅಸ್ಮಿತೆ ರಾಜಕೀಯವನ್ನು ಅಳವಡಿಸುವುದು – ಇದು ಅವರನ್ನು ಜಾತಿ ಮತ್ತು ಜನಾಂಗೀಯವಾಗಿ ವಿಭಜಿಸುತ್ತದೆ . ಇದು ಅವರನ್ನು ಜಾತಿ ರೇಖೆಗಳ ಮೂಲಕ ವಿಭಜಿಸುವುದಲ್ಲದೆ, ಅಂತಿಮವಾಗಿ ಕಾರ್ಮಿಕ ವರ್ಗವು ಐಕ್ಯ ಶಕ್ತಿಯಾಗಿ ನೀಡಬೇಕಾದ ರಾಜಕೀಯ ಕೊಡುಗೆಯ ಮೇಲೆ ಪರಿಣಾಮ ಬೀರುತ್ತದೆ.

ಇದು ಜಾಗತಿಕ ಉತ್ತರದಲ್ಲಿಯೂ ಸಹ ಬೃಹತ್ ಕೈಗಾರಿಕೀಕರಣ ಮತ್ತು ಬೃಹತ್ ಉದ್ಯೋಗ ನಷ್ಟಕ್ಕೆ ಕಾರಣವಾಗಿದೆ. ಅಲ್ಪ ಭರವಸೆಯ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೂ ಕತ್ತರಿ ಬೀಳುತ್ತಿದೆ. ಪರಿಸ್ಥಿತಿಗಳು ಸ್ಫೋಟಕವಾಗಿ ಬದಲಾಗುತ್ತಿವೆ. ಬಂಡವಾಳಶಾಹಿಯನ್ನು ಉಳಿಸುವ ಕೊನೆಯ ಉಪಾಯವಾಗಿ, ಆಧುನಿಕ ಫ್ಯಾಸಿಸ್ಟ್ ರಾಜಕೀಯ ನಿರ್ವಹಣೆಯು ಸಾಮ್ರಾಜ್ಯಶಾಹಿ ಯುದ್ಧಗಳನ್ನು ಬಿಚ್ಚಿಟ್ಟಿದೆ. ಹೀಗೆ ಬಿಕ್ಕಟ್ಟಿನ ಕೇಂದ್ರವು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಬದಲಾಗುತ್ತಲೇ ಇದೆ.

ಪಿತೃಪ್ರಧಾನ ಸಮಾಜದಿಂದ ಜಾತಿ ಆಧಾರಿತ ಸಮಾಜದವರೆಗೆ, ಎಲ್ಲಾ ಹಿಮ್ಮುಖ ಸಾಮಾಜಿಕ ಆಚರಣೆಗಳು ವಾಸ್ತವವಾಗಿ ಶೋಷಣೆಯ ಆಡಳಿತಕ್ಕೆ ಅಧೀನವಾಗಿವೆ. ಅಂತಹ ಅಧಿಕಾರಗಳು ತಮ್ಮ ಪ್ರಾಬಲ್ಯದ ಸಾಮಾಜಿಕ ರಾಜ್ಯ ಉಪಕರಣಗಳ ಮೂಲಕ ಆಡಳಿತಗಾರರಿಗೆ ಸಂಬಳವಿಲ್ಲದ ಅಥವಾ ಅಗ್ಗದ ಕಾರ್ಮಿಕರನ್ನು ಒದಗಿಸುತ್ತವೆ.

ಅಂತಹ ಸಾಮಾಜಿಕ ದಬ್ಬಾಳಿಕೆಯ ವಿರುದ್ಧ ಸಕ್ರಿಯ ಹೋರಾಟದ ಮೂಲಕ ಮಾತ್ರ ಕಾರ್ಮಿಕ ವರ್ಗವು ತನ್ನ ನಾಯಕತ್ವವನ್ನು ಚಲಾಯಿಸಬಹುದು, ಊಳಿಗಮಾನ್ಯ–ಬಂಡವಾಳಶಾಹಿ ದಬ್ಬಾಳಿಕೆಯ ವಿರುದ್ಧ ಪ್ರಬಲವಾದ ಶಕ್ತಿಯನ್ನು ರೂಪಿಸಬಹುದು. ಇಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರ ಮುಖ್ಯವಾಗುತ್ತದೆ.

ಸಣ್ಣ ಉತ್ಪಾದಕರ ಬಗ್ಗೆ...

ಭಾರತದಲ್ಲಿ ಸಣ್ಣ ಉತ್ಪಾದಕರ ದೊಡ್ಡ ಸೇನೆಯೇ ಹುಟ್ಟಿಕೊಳ್ಳುತ್ತಿದೆ. ಇದಕ್ಕೆ ಮುಖ್ಯ ಕಾರಣ ಬಂಡವಾಳಶಾಹಿ ಪೂರ್ವ ಉತ್ಪಾದನಾ ಸಂಬಂಧಗಳ ಮುಂದುವರಿಕೆ. ಆದಾಗ್ಯೂ, ಭಾರತದಲ್ಲಿ ಬಂಡವಾಳಶಾಹಿಯ ಬೆಳವಣಿಗೆಯು ವಿಸ್ತರಿಸುತ್ತಿದೆ. ಭೂಮಾಲೀಕರು ಹೆಚ್ಚೆಚ್ಚು ಬಂಡವಾಳಶಾಹಿ ಭೂಮಾಲೀಕರಾಗುತ್ತಿದ್ದಾರೆ.

ಐತಿಹಾಸಿಕ ರೈತ ಚಳವಳಿಯು ಸಣ್ಣ ಉತ್ಪಾದಕರು ಮತ್ತು ಏಕಸ್ವಾಮ್ಯ ಬಂಡವಾಳಶಾಹಿಗಳ ನಡುವಿನ ವಿರೋಧಾಭಾಸಗಳನ್ನು ಮುನ್ನೆಲೆಗೆ ತಂದಿತು. ಸಣ್ಣ ಉತ್ಪಾದಕರ ಪ್ರಸರಣವು ಬಂಡವಾಳಶಾಹಿ ವಿರೋಧಿ "ಜಾಗತಿಕ ದಕ್ಷಿಣ" ದಲ್ಲಿ ಅಭಿವೃದ್ಧಿ ಪ್ರವೃತ್ತಿಯಾಗಿದೆ. ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಸಂಘಗಳು ಸಾಮಾಜಿಕ ಬದಲಾವಣೆಗೆ ಪ್ರೇರಕ ಶಕ್ತಿಯಾಗಿವೆ ಎಂಬ ಅಂಶವನ್ನು ಇದು ಕುಗ್ಗಿಸುತ್ತದೆ.

ಸಣ್ಣ ಪ್ರಮಾಣದ ಉತ್ಪಾದನೆಯ ಹೆಚ್ಚಿನ ಪ್ರಮಾಣವು ಏಕಸ್ವಾಮ್ಯದಿಂದ ನಿಯಂತ್ರಿಸಲ್ಪಡುವ ಜಾಗತಿಕ ಮೌಲ್ಯ ಸರಪಳಿಗಳ ಭಾಗವಾಗಿದೆ ಎಂಬ ಅಂಶವನ್ನು ಗಮನಿಸುವುದು ಯೋಗ್ಯವಾಗಿದೆ. ಸಣ್ಣ ಉತ್ಪಾದಕರು ಉತ್ಪಾದಿಸುವ ಸರಕುಗಳ ಬೆಲೆಗಳನ್ನು ಸಹ ಏಕಸ್ವಾಮ್ಯದಿಂದ ನಿಯಂತ್ರಿಸಲಾಗುತ್ತದೆ ಮತ್ತು ರೂಪಿಸಲಾಗುತ್ತದೆ. ಮತ್ತು ಅವರ ಹೆಚ್ಚುವರಿಗಳನ್ನು ದೊಡ್ಡ ವ್ಯಾಪಾರ ಕಂಪನಿಗಳಿಗೆ ನೀಡಲಾಗುತ್ತದೆ. ಆದ್ದರಿಂದ ಸಣ್ಣ ಪ್ರಮಾಣದ ಉತ್ಪಾದನಾ ರೂಪಗಳು ಏಕಸ್ವಾಮ್ಯ ಬಂಡವಾಳಶಾಹಿಯ ಅವಿಭಾಜ್ಯ ಅಂಗವಾಗಿದೆ.

ಸಣ್ಣ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸುವುದು

ಎರಡನೆಯದಾಗಿ, ಸಣ್ಣ ಉತ್ಪಾದಕರು ಭೌಗೋಳಿಕವಾಗಿ ಚದುರಿಹೋಗಿದ್ದಾರೆ. ಅವುಗಳನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸುವುದು ತುಂಬಾ ಕಷ್ಟ. ಆದ್ದರಿಂದ ಸಣ್ಣ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸುವುದು ಮತ್ತು ಊಳಿಗಮಾನ್ಯ ವಿರೋಧಿ ಹೋರಾಟಗಳನ್ನು ಪೂರ್ಣಗೊಳಿಸುವುದು ದೀರ್ಘಕಾಲದ ಹೋರಾಟವಾಗಿದೆ. ಇದಕ್ಕೆ ಕಾರ್ಮಿಕ ವರ್ಗದ ಸಜ್ಜುಗೊಳಿಸುವಿಕೆ, ಏಕತೆ ಮತ್ತು ನಾಯಕತ್ವದ ಅಗತ್ಯವಿದೆ.

ಸಾಮ್ರಾಜ್ಯಶಾಹಿಯನ್ನು ವಿರೋಧಿಸೋಣ ಮತ್ತು ಸೋಲಿಸೋಣ

ಕಾರ್ಮಿಕ ವರ್ಗವನ್ನು ಅದರ ಕೈಗಾರಿಕಾ, ಸ್ಥಳೀಯ ಅಥವಾ ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಳಿಸುವ ಸುಧಾರಣಾವಾದಿ ದೃಷ್ಟಿಕೋನ ಮತ್ತು ಜಾಗತಿಕ ಕಾರ್ಮಿಕ ವರ್ಗವನ್ನು ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಬಂಧಿಸುವ ವಾಸ್ತವತೆಯ ನಡುವಿನ ಅಂತರವು ಸ್ಪಷ್ಟವಾಗಿದೆ. ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ಕಾರ್ಮಿಕರನ್ನು ಮತ್ತಷ್ಟು ಶೋಷಿಸುವ, ಸಣ್ಣ–ಪ್ರಮಾಣದ ಉತ್ಪಾದನೆಯನ್ನು ತೊಡೆದುಹಾಕಲು ಮತ್ತು ಪರಭಕ್ಷಕ ಲಾಭವನ್ನು ಕಡ್ಡಾಯಗೊಳಿಸುವ ರೀತಿಯಲ್ಲಿ 'ಗ್ಲೋಬಲ್ ಸೌತ್' ನ ಎಲ್ಲಾ ದೇಶಗಳಲ್ಲಿ ಅಮಾನವೀಯ ಕಾರ್ಮಿಕ ನೀತಿಗಳನ್ನು ಜಾರಿಗೊಳಿಸುವುದನ್ನು ಕಡ್ಡಾಯಗೊಳಿಸುತ್ತದೆ. ವಸಾಹತುಶಾಹಿ ಕಾಲದಿಂದಲೂ, 'ಜಾಗತಿಕ ದಕ್ಷಿಣ' ದೇಶಗಳಲ್ಲಿ ವಾಸಿಸುವ ಕಾರ್ಮಿಕರು ಮತ್ತು 'ಉತ್ತರ'ದಲ್ಲಿ ವಾಸಿಸುವ ಕಾರ್ಮಿಕರ ನಡುವಿನ ಜೀವನ ಪರಿಸ್ಥಿತಿಗಳಲ್ಲಿ ದೊಡ್ಡ ಅಂತರವಿದೆ. ಆದಾಗ್ಯೂ, ಆಧುನಿಕ ಉದಾರವಾದಿ ವಿಶ್ವ ದೃಷ್ಟಿಕೋನಗಳ ಇಂದಿನ ಯುಗದಲ್ಲಿ, ಬಂಡವಾಳವು ಹೆಚ್ಚು ಪರಭಕ್ಷಕವಾಗಿದೆ. ಇದು ಜಾಗತಿಕ ಉತ್ತರದಲ್ಲಿಯೂ ಸಹ ಬೃಹತ್ ಕೈಗಾರಿಕೀಕರಣ ಮತ್ತು ಬೃಹತ್ ಉದ್ಯೋಗ ನಷ್ಟಕ್ಕೆ ಕಾರಣವಾಗಿದೆ. ಅಲ್ಪ ಭರವಸೆಯ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೂ ಕತ್ತರಿ ಬೀಳುತ್ತಿದೆ. ಪರಿಸ್ಥಿತಿಗಳು ಸ್ಫೋಟಕವಾಗಿ ಬದಲಾಗುತ್ತಿವೆ. ಬಂಡವಾಳಶಾಹಿಯನ್ನು ಉಳಿಸುವ ಕೊನೆಯ ಉಪಾಯವಾಗಿ, ಆಧುನಿಕ ಫ್ಯಾಸಿಸ್ಟ್ ರಾಜಕೀಯ ನಿರ್ವಹಣೆಯು ಸಾಮ್ರಾಜ್ಯಶಾಹಿ ಯುದ್ಧಗಳನ್ನು ಬಿಚ್ಚಿಟ್ಟಿದೆ. ಹೀಗೆ ಬಿಕ್ಕಟ್ಟಿನ ಕೇಂದ್ರವು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಬದಲಾಗುತ್ತಲೇ ಇದೆ.

ಅಂತಹ ಪರಿಸ್ಥಿತಿಯಲ್ಲಿ, ಕ್ರಾಂತಿಕಾರಿ ವರ್ಗದ ದೃಷ್ಟಿಕೋನದೊಂದಿಗೆ ಕೆಲಸ ಮಾಡುವ ಕಾರ್ಮಿಕ ಸಂಘಟನೆಯ ಚಳುವಳಿಯು, ಬಿಕ್ಕಟ್ಟನ್ನು ಎದುರಿಸಲು ಸಾಮ್ರಾಜ್ಯಶಾಹಿಯು ಬಿಚ್ಚಿಟ್ಟ ಪ್ರತಿಯೊಂದು ಮಿಲಿಟರಿ–ರಾಜಕೀಯ ನಡೆಯನ್ನು ವಿರೋಧಿಸುವ ಮತ್ತು ಒಗ್ಗಟ್ಟಿನಿಂದ ಹೋರಾಡುವ ಪ್ರಮುಖ ಕರ್ತವ್ಯವಾಗಿದೆ. ಈ ಹೋರಾಟವನ್ನು ಕಾರ್ಮಿಕ ವರ್ಗದಿಂದ ಮಾತ್ರ ನಡೆಸಬಹುದು. ಈ ಬಿಕ್ಕಟ್ಟನ್ನು ಪರಿಹರಿಸುವ ಏಕೈಕ ಸಿದ್ಧಾಂತವೆಂದರೆ ಅಂತರರಾಷ್ಟ್ರೀಯತೆಯೊಂದಿಗೆ ಸಾಮಾಜಿಕ ಬದಲಾವಣೆಯ ಸಿದ್ಧಾಂತ.

ಇಂದಿನ ಕಾರ್ಮಿಕ ವರ್ಗ

ಇಂದು, ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಗಳಲ್ಲಿನ 90 ಪ್ರತಿಶತ ಸದಸ್ಯತ್ವವು ಅನೌಪಚಾರಿಕ ಕೆಲಸಗಾರರಾಗಿದ್ದಾರೆ. ವಾಸ್ತವವಾಗಿ ಅವರು ತುಂಬಾ ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಕನಿಷ್ಟ ಕೂಲಿಗಿಂತ ಕಡಿಮೆ ವೇತನದಲ್ಲಿ ಬದುಕಲು ಹೆಣಗಾಡುತ್ತಿದ್ದಾರೆ. ಗುತ್ತಿಗೆ, ಕ್ಯಾಶುಯಲ್, ಅಪ್ರೆಂಟಿಸ್ ಇನ್ನಿತರ ರೂಪಗಳಲ್ಲಿ ಕಾರ್ಮಿಕರನ್ನು ತಾತ್ಕಾಲಿಕ ಉದ್ಯೋಗಿಗಳಾಗಿ ನೇಮಿಸಿಕೊಳ್ಳುವ ಮೂಲಕ ಕಾರ್ಮಿಕ ವರ್ಗದ ಹೋರಾಟದ ಶಕ್ತಿಯನ್ನು ಕಡಿಮೆ ಮಾಡಲು ಬಂಡವಾಳದ ರೂಪಗಳನ್ನು ವಿನ್ಯಾಸಗೊಳಿಸಲಾಗಿದೆ. ಹೆಚ್ಚು ಕೇಂದ್ರೀಕೃತ ಮತ್ತು ಆಧುನಿಕ ಉತ್ಪಾದನೆ/ಸೇವೆಗಳಲ್ಲಿ ಕೆಲಸ ಮಾಡುವುದರಿಂದ, ಈ ಕಾರ್ಮಿಕರು (ಅವರು ಖಾಯಂ ಅಲ್ಲದ ಕೆಲಸಗಾರರ ವಿವಿಧ ರೂಪಗಳಾಗಿದ್ದರೂ) ಹೆಚ್ಚು ಮುಂದುವರಿದವರು, ನುರಿತರು ಮತ್ತು ಸಾಮಾಜಿಕ ಬದಲಾವಣೆಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಲು ಅಧಿಕಾರವನ್ನು ಹೊಂದಿರುತ್ತಾರೆ.

ಇಂದಿನ ಜನಸಂಖ್ಯೆಯ ಬಹುಪಾಲು ಯುವಕರು. ವಾಸ್ತವವಾಗಿ ಅವರು ಬಂಡವಾಳದ ವಿರುದ್ಧದ ಹೋರಾಟವನ್ನು ಮುನ್ನಡೆಸುವ ಶಕ್ತಿಯೂ ಹೌದು. ಈ ಯುವಕರು ಶೋಷಿತ ದುಡಿಯುವ ಜನರನ್ನು ಸಂಘಟಿಸಬಲ್ಲರು.

ಇ ತಿ ಹಾ ಸ' ದಿ ಂ ದ' ಪುಟ 15 ಕ್ಕೆ

ಚುನಾವಣೆ ತೀರ್ಪು: ಒಂದು ಹೆಜ್ಜೆ ಮುನ್ನಡೆ

ಹೋರಾಟ ಮುಂದುವರಿಯಲಿದೆ...

ಪ್ರಕಾಶ್ ಕಾರತ್



ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಪ್ರಾಮುಖ್ಯ ನೀಡುತ್ತೇವೆಂದು ಜನರು ಪ್ರತಿಪಾದನೆ ಮಾಡಿರುವ ಕಾರಣಕ್ಕೆ 2024ರ ಲೋಕಸಭೆ ಚುನಾವಣೆಯ ತೀರ್ಪು ಬಹಳ ಗಮನಾರ್ಹವಾಗಿದೆ. ಜನರು ಬಿಜೆಪಿಗೆ ಸ್ಪಷ್ಟ ಬಹುಮತ ಸಿಗದಂತೆ ಮಾಡಿದ್ದಾರೆ. 2014 ಮತ್ತು 2019ರಲ್ಲಿ ಅದಕ್ಕೆ ಸ್ಪಷ್ಟ ಬಹುಮತ ಸಿಕ್ಕಿತ್ತು. ಬಿಜೆಪಿಯ ಸ್ಥಾನಗಳ ಸಂಖ್ಯೆ 303ರಿಂದ 240ಕ್ಕೆ ಇಳಿದಿದೆ. ಅಂದರೆ ಶೇಕಡ 21ರಷ್ಟು ಕಡಿಮೆಯಾಗಿದೆ. ಎನ್‌ಡಿಎ 292 ಸ್ಥಾನಗಳನ್ನು ಗಳಿಸಿದ್ದರೆ ಇಂಡಿಯಾ ಕೂಟ 234 ಕ್ಷೇತ್ರಗಳಲ್ಲಿ ಗೆಲವು ಸಾಧಿಸಿದೆ.

ಹಿಂದೂತ್ವ–ಕೋಮುವಾದಿ ಅಜೆಂಡಾವನ್ನು ಪ್ರವರ್ತಿಸಿದ ಸರ್ವಾಧಿಕಾರಿ ಆಡಳಿತವೇ ಹೆಗ್ಗುರುತಾದ ಮೋದಿಯ ಹತ್ತು ವರ್ಷಗಳ ಆಡಳಿತದ ಹಿನ್ನೆಲೆಯಲ್ಲಿ ಚುನಾವಣೆಗಳು ನಡೆದಿದ್ದವು. ಸಂವಿಧಾನದ ಪ್ರತಿಯೊಂದು ಅಂಶವೂ ದಾಳಿಗೆ ಒಳಗಾಗಿದ್ದು ಪ್ರಭುತ್ವದ ಸಂಸ್ಥೆಗಳನ್ನು ಕಬ್ಜಾ ಮಾಡಿಕೊಳ್ಳಲು ಹಾದಿ ಮಾಡಿಕೊಟ್ಟಿತ್ತು. ಅದು ಚುನಾವಣೆ ಪೂರ್ವದಲ್ಲಿ ಪ್ರತಿಫಲಿಸಿತ್ತು. ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ಪ್ರತಿಪಕ್ಷಗಳ ನಾಯಕರ ಮೇಲೆ ನಿರಂತರವಾಗಿ ದಾಳಿ ನಡೆಸಿದ್ದು, ಇಬ್ಬರು ಮುಖ್ಯಮಂತ್ರಿಗಳನ್ನು ಜೈಲಿಗೆ ಹಾಕಿದ್ದು ಮತ್ತು ಕಾಂಗ್ರೆಸ್ ಹಾಗೂ ಸಿಪಿಐ(ಎಂ) ನಂಥ ರಾಜಕೀಯ ಪಕ್ಷಗಳ ಹಣಕಾಸಿನ ಮೇಲೆ ನಿರ್ಬಂಧ ಹೇರಿದ್ದು ಇವೇ ಮೊದಲಾದವು ಅದಕ್ಕೆ ದೃಷ್ಟಾಂತವಾಗಿದೆ.

ಪ್ರತಿಪಕ್ಷಗಳಿಗೆ ಸಮಾನ ಅವಕಾಶವಿಲ್ಲದಂತೆ ಮಾಡಿದ ಸನ್ನಿವೇಶದಲ್ಲಿ ಚುನಾವಣಾ ಪ್ರಚಾರ ನಡೆದಿತ್ತು. ಈ ವಿಚಾರದಲ್ಲಿ ಚುನಾವಣಾ ಆಯೋಗದ ಪಾತ್ರ ಖಂಡನೀಯವಾಗಿದೆ. ಜೀ ಹುಜೂರ್ ಆಯುಕ್ತರೇ ತುಂಬಿಕೊಂಡಿದ್ದ ಚುನಾವಣೆ ಆಯೋಗ, ಮಾದರಿ ನೀತಿ ಸಂಹಿತೆಯ ನಗ್ನ ಉಲ್ಲಂಘನೆಯನ್ನು ನಿಯಂತ್ರಿಸಲಾಗದ ಮತ್ತು ಉಲ್ಲಂಘಿಸಿದವರನ್ನು ಶಿಕ್ಷಿಸಲಾಗದ ಬೆನ್ನುಮೂಳೆಯಿಲ್ಲದ ಆಯೋಗವೆಂದು ಸಾಬೀತಾಯಿತು. ಪ್ರಧಾನಿ ನರೇಂದ್ರ ಮೋದಿಯ ವಿಷಮಯ ಮುಸ್ಲಿಂ–ವಿರೋಧಿ ಭಾಷಣಗಳು ಎಗ್ಗಿಲ್ಲದೆ ಮುಂದುವರಿದವು. ಮತದಾನದ ಅಂಕಿಅಂಶಗಳ ಸಮನ್ವಯದಲ್ಲಿ ಪಾರದರ್ಶಕತೆಯನ್ನು ನಿಭಾಯಿಸುವಲ್ಲಿ ವಿಫಲವಾದ ಆಯೋಗ, ಅನಗತ್ಯ ಅನುಮಾನಗಳು ಹಾಗೂ ಊಹಾಪೋಹಗಳಿಗೆ ಎಡೆ ಮಾಡಿತು. ಇದರಿಂದ ಒಂದು ಮಹತ್ವದ ಸಾಂವಿಧಾನಿಕ ಸಂಸ್ಥೆಯ ವಿಶ್ವಾಸಾರ್ಹತೆಗೆ ಭಾರಿ ಹಾನಿಯಾಯಿತು.

ಕಾರ್ಪೊರೇಟ್ ಮಾಧ್ಯಮದಲ್ಲಿ ಬಿಜೆಪಿ ಏಕಸ್ವಾಮ್ಯ ಸಾಧಿಸಿತು ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಅದು ಅಪಾರ ಹಣವನ್ನು ಸುರಿಯಿತು. ಪ್ರಚಾರಕ್ಕೆ ಬಿಜೆಪಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತು. ಮತದಾರರಿಗೆ ಲಂಚವಾಗಿ ವಿತರಿಸಿದ ಹಣವೂ ಅದರಲ್ಲಿ ಸೇರಿದೆ.

ಪ್ರಚಾರದುದ್ದಕ್ಕೂ ಮೋದಿ ಮತ್ತವರ ಬಾಲಬಡುಕರು ಇಂಡಿಯಾ ಕೂಟದ ಪಕ್ಷಗಳನ್ನು ಬೆದರಿಸುವ ಧೋರಣೆಯನ್ನೇ ಅನುಸರಿಸಿದವು. ಇಂಥ ಪ್ರತಿಕೂಲ ಸನ್ನಿವೇಶದಲ್ಲಿ ಇಂಡಿಯಾ ಕೂಟದ ಸದಸ್ಯ ಪಕ್ಷಗಳು ಚುನಾವಣಾ ಪ್ರಚಾರ ಕಾರ್ಯ ನಡೆಸಿದವು.

ಮೋದಿಯ ವಿಷಮಯ ಕೋಮುವಾದಿ ವಾಗಾಡಂಬರಕ್ಕೆ ಪ್ರತಿಯಾಗಿ, ಪ್ರತಿಪಕ್ಷಗಳು ನಿರುದ್ಯೋಗ ಮತ್ತು ಕೆಲಸಗಳು, ಬೆಲೆಯೇರಿಕೆ ಮತ್ತು ಹಣದುಬ್ಬರ, ಕೃಷಿ ಬಿಕ್ಕಟ್ಟು ಮತ್ತು ಹಿಂದೂತ್ವ ಶಕ್ತಿಗಳಿಂದ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಎದುರಾಗಿರುವ ಅಪಾಯಗಳು ಮುಂತಾದ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಪ್ರಚಾರ ನಡೆಸಿದವು. ಸಂವಿಧಾನವನ್ನು ರಕ್ಷಿಸುವುದು ಅಗತ್ಯವೆಂಬ ಕಾಳಜಿಗೆ ಇದೇ ಮೊದಲ ಬಾರಿಗೆ ಜನಸಮುದಾಯ, ಅದರಲ್ಲೂ ವಿಶೇಷವಾಗಿ ದಲಿತರ ನಡುವೆ ಉತ್ತಮ ಸ್ಪಂದನೆ ದೊರಕಿತು.

ಉತ್ತರ ಪ್ರದೇಶದ ಹೊಡೆತ ಜೋರು

ಬಿಜೆಪಿಗೆ ಬಹುಮತ ನಷ್ಟವಾಗಿದ್ದರಲ್ಲಿ ಉತ್ತರ ಪ್ರದೇಶದಲ್ಲಿ ಅನುಭವಿಸಿದ ಹಿನ್ನಡೆ ಪ್ರಮುಖವಾಗಿದೆ. ಉತ್ತರ ಪ್ರದೇಶದ 80 ಸ್ಥಾನಗಳಲ್ಲಿ ಬಿಜೆಪಿಗೆ ಕೇವಲ 33 ಸ್ಥಾನಗಳು ದಕ್ಕಿವೆ. 2019ರಲ್ಲಿ ಅದು 62 ಕ್ಷೇತ್ರಗಳನ್ನು ಗೆದ್ದಿತ್ತು.

ಉತ್ತರ ಪ್ರದೇಶ ರಾಜ್ಯವು ಹಿಂದೂತ್ವ ರಾಜಕಾರಣದ ಹೃದಯ ಸ್ಥಾನವಾಗಿದೆ ಮತ್ತು ಅಯೋಧ್ಯೆಯಲ್ಲಿನ ರಾಮ ಮಂದಿರವು ಹಿಂದೂತ್ವ ಶ್ರೇಷ್ಠತೆಯ ಸಂಕೇತವಾಗಿದೆ. ಇಷ್ಟೆಲ್ಲಾ ಇದ್ದರೂ ಬಿಜೆಪಿಯ ಮತ ಶೇಕಡ 9ರಷ್ಟು ಕುಸಿದಿದೆ.

ಉದ್ಯೋಗರಾಹಿತ್ಯತೆ, ಬೆಲೆಯೇರಿಕೆ, ರೈತರ ಅತೃಪ್ತಿ ಮತ್ತು ಅಗ್ನಿವೀರ್ ಯೋಜನೆ ವಿರುದ್ಧ ಯುವಜನರ ಆಕ್ರೋಶ ಹಾಗೂ ಟೆಸ್ಟ್ ಪತ್ರಿಕೆಗಳ ಸೋರಿಕೆಯು ಕೋಮು ಧ್ರುವೀಕರಣದ ವಿರುದ್ಧ ಕೆಲಸ ಮಾಡಿದವು. ಮಾತ್ರವಲ್ಲದೆ ಸಮಾಜವಾದಿ ಪಕ್ಷ ರೂಪಿಸಿದ ಕೆಲವು ಜಾಣ್ಮೆಯ ವಿಶಾಲ ಜಾತಿ–ಮೈತ್ರಿಕೂಟ ಕೂಡ ಅದಕ್ಕೆ ನೆರವಾದವು. ಅಯೋಧ್ಯೆಯೂ ಒಳಗೊಂಡಿರುವ ಫೈಜಾಬಾದ್ ಲೋಕಸಭಾ ಕ್ಷೇತ್ರದ ಹಾಲಿ ಬಿಜೆಪಿ ಎಂಪಿ ಸೋತಿದ್ದು ಈ ಪ್ರತ್ಯೇಕಗೊಳ್ಳುವಿಕೆಯನ್ನು ಢಾಳಾಗಿ ಎತ್ತಿ ತೋರಿಸುತ್ತದೆ.

ಸಮೀಕ್ಷೆಗಳ ಪ್ರವಾಹ

ಏಳನೇ ಹಾಗೂ ಕೊನೇ ಹಂತದ ಮತದಾನದ ದಿನದ ಸಂಜೆ ಹೊರಬಿದ್ದ ಮತೋತ್ತರ ಸಮೀಕ್ಷೆಗಳ (ಎಕ್ಸಿಟ್ ಪೋಲ್) ಪ್ರವಾಹವು ಎನ್‌ಡಿಎಗೆ ಭಾರಿ ಗೆಲವು ಸಿಗುತ್ತದೆ ಎಂದು ಹೇಳಿತ್ತು. ಅದಕ್ಕೆ ಸರಾಸರಿಯಾಗಿ 367 ಸ್ಥಾನಗಳು ದಕ್ಕುತ್ತವೆಂದು ಬಹುತೇಕ ಸಮೀಕ್ಷೆಗಳು ಹೇಳಿದ್ದವು. ಪ್ರತಿಪಕ್ಷಗಳ ಸ್ಥೈರ್ಯವನ್ನು ಕುಗ್ಗಿಸಲು ಮತ್ತು ಆಡಳಿತ ಪಕ್ಷದ ಪ್ರಾಬಲ್ಯವನ್ನು ಮೆರೆಸಲು ಈ ಎಕ್ಸಿಟ್ ಪೋಲ್‌ಗಳನ್ನು ಅಸ್ತ್ರವನ್ನಾಗಿ ಬಳಸಲಾಯಿತು. ಮಾಧ್ಯಮ–ಕಾರ್ಪೊರೇಟ್ ವಲಯ ಶಾಮೀಲಾಗಿ ಷೇರು ಮಾರುಕಟ್ಟೆಯಲ್ಲಿ ಲಾಭ ಉಂಟು ಮಾಡುವುದು ಮೂಲಭೂತ ಉದ್ದೇಶವಾಗಿದ್ದು ಮುಂಬೈ ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರ ಸಂಪತ್ತು 14 ಲಕ್ಷ ಕೋಟಿ ರೂಪಾಯಿಗಳಷ್ಟು ಏರಿಕೆಯಾಯಿತು.

ಒಡಿಶಾದಲ್ಲಿ ಬಿಜು ಜನತಾ ದಳಕ್ಕೆ ಹಾಗೂ ಆಂಧ್ರ ಪ್ರದೇಶದಲ್ಲಿ ವೈಎಸ್‌ಆರ್‌ಸಿಪಿಗೆ ನಿರ್ಣಾಯಕ ಸೋಲುಂಟಾಗಿರುವುದಕ್ಕೆ ಕೂಡ ಈ ಚುನಾವಣೆಗಳು ಸಾಕ್ಷಿಯಾಗಿವೆ. ಅಲ್ಲಿ ಲೋಕಸಭೆ ಜೊತೆ ವಿಧಾನಸಭೆ ಚುನಾವಣೆಗಳೂ ನಡೆದಿದ್ದವು. ಆ ಎರಡೂ ಪಕ್ಷಗಳು ರಾಜ್ಯ ಸರಕಾರಗಳನ್ನು ಕಳೆದುಕೊಳ್ಳುವ ಜೊತೆ ಜೊತೆಯಲ್ಲಿ ಲೋಕಸಭೆಯಲ್ಲೂ ಪರಾಜಯ ಅನುಭವಿಸಿದವು. ಒಡಿಶಾದಲ್ಲಿ ಬಿಜೆಪಿ 21 ಲೋಕಸಭೆ ಸ್ಥಾನಗಳಲ್ಲಿ 20ರಲ್ಲಿ ಗೆದ್ದಿದೆ ಹಾಗೂ ವಿಧಾನಸಭೆಯಲ್ಲಿ ಬಹುಮತ ಗಳಿಸಿದೆ. ಈ ಎರಡು ರಾಜ್ಯಗಳು ಮೋದಿ ಸರಕಾರದೊಂದಿಗೆ ಸಹಕರಿಸುವ ಅಥವಾ ಅದಕ್ಕೆ ಬೆಂಬಲ ನೀಡುವ ಪ್ರಾದೇಶಿಕ ಪಕ್ಷಗಳಿಗೆ ಒಂದು ಪಾಠವಾಗಬೇಕು. ನೀವು ಬಿಜೆಪಿಯೊಂದಿಗೆ ಕೈಜೋಡಿಸಿದರೆ ಅದು ನಿಮ್ಮ ರೆಕ್ಕೆಪುಕ್ಕ ಕತ್ತರಿಸುತ್ತದೆ ಹಾಗೂ ಆಪೋಶನ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಇದು ತೋರಿಸುತ್ತದೆ. ಬಿಜೆಪಿಯನ್ನು ಪ್ರಬಲವಾಗಿ ವಿರೋಧಿಸಿದ ಪ್ರಾದೇಶಿಕ ಪಕ್ಷಗಳು ಮಾತ್ರವೇ ಉಳಿದುಕೊಂಡು ಬಲಿಷ್ಠವಾಗಿ ಹೊರಹೊಮ್ಮಿವೆ. ಡಿಎಂಕೆ, ಸಮಾಜವಾದಿ ಪಕ್ಷ ಮತ್ತು ಆರ್‌ಜೆಡಿ ಮೊದಲಾದವು ಅದಕ್ಕೆ ಉದಾಹರಣೆಯಾಗಿವೆ.

ಕರಗಿದ ಮೋದಿ ಕುರಿತ ಭ್ರಮೆ

2024ರ ಲೋಕಸಭೆ ಚುನಾವಣಾ ಫಲಿತಾಂಶವು ಮೋದಿ ಕುರಿತು ಇದ್ದ ಭ್ರಮೆ ಕಳಚಿ ಬೀಳುವಂತೆ ಮಾಡಿದೆ. ಸ್ವತಃ ಮೋದಿ ಹಾಗೂ ಬಿಜೆಪಿ ಅಂಥದ್ದೊಂದು ಮಹಾ ವ್ಯಕ್ತಿತ್ವದ ಭ್ರಮೆಯನ್ನು ಬಹಳ ಶ್ರದ್ಧೆಯಿಂದ ಕಟ್ಟಿ ಬೆಳೆಸಿತ್ತು. ಬಿಜೆಪಿಗೆ ಏನಾದರೂ ಹಾನಿಯಾಗಿದೆಯೆಂದರೆ ಅದಕ್ಕೆ ಮೋದಿಯೊಬ್ಬರೇ ಕಾರಣ. ಚುನಾವಣೆ ಪೂರ್ಣವಾಗಿ ಮೋದಿ ಸುತ್ತವೇ ಗಿರಕಿ ಹೊಡೆದಿತ್ತು. ಒಂದು ಪಕ್ಷವಾಗಿ ಬಿಜೆಪಿ ಹಿನ್ನೆಲೆಗೆ ಸರಿದಿತ್ತು. ಬಿಜೆಪಿ ಚುನಾವಣೆ ಪ್ರಣಾಳಿಕೆಯನ್ನು ಕೂಡ ಮೋದಿ ಕೀ ಗ್ಯಾರಂಟಿ ಎಂದು ಕರೆಯಲಾಗಿತ್ತು. ಮೋದಿ ಅಜೇಯ ಎಂದು ಅವರ ಸುತ್ತ ಸೃಷ್ಟಿಸಲಾಗಿದ್ದ ಪ್ರಭಾವಳಿಗೆ ಈಗ ಭಾರಿ ಹಾನಿಯಾಗಿದೆ.

ಮೋದಿ ಮತ್ತು ಅಮಿತ್ ಷಾ ಯಾರದೇ ಭಯ–ಭೀತಿಯೆಂಬುದಿಲ್ಲದೆ ಸರಕಾರವನ್ನು ನಡೆಸುತ್ತಿದ್ದ ರೀತಿಗೆ ಎನ್‌ಡಿಎ ಸಮ್ಮಿಶ್ರ ಸರಕಾರದ ರಚನೆಯು ಬ್ರೇಕ್ ಹಾಕಬಹುದೆಂದು ಆಶಿಸಬಹುದಾಗಿದೆ.

ಎನ್‌ಡಿಎ ಮೂರನೇ ಎರಡು ಬಹುಮತದಿಂದ ದೂರದಲ್ಲಿದೆ. ಈ ಒಂದು ಅಂಶವೇ ಕೆಲವು ಅಪಾಯಕಾರಿ ಯೋಜನೆಗಳಿಗೆ ತಡೆಹಾಕಲು ನೆರವಾಗುವ ಸಂಭವವಿದೆ. ಒಂದು ರಾಷ್ಟ್ರ–ಒಂದು ಚುನಾವಣೆ ವ್ಯವಸ್ಥೆ ಮುಂತಾದ ಯೋಜನೆಗಳು ಅವುಗಳಲ್ಲಿ ಸೇರಿದೆ. ಮೋದಿ ಸರಕಾರದ ಮೂರನೇ ಅವಧಿಯಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದ ಚುನಾವಣೆಯನ್ನು ತಕ್ಷಣವೇ ಜಾರಿಗೆ ತರಲಾಗುವುದೆಂದು ಅಮಿತ್ ಷಾ ಆಶ್ವಾಸನೆ ನೀಡಿದ್ದಾರೆ. ಹಾಗೆ ಮಾಡಬೇಕಾದರೆ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳು ಅಗತ್ಯವಾಗುತ್ತದೆ. ಅದೀಗ ಬಿಜೆಪಿಗೆ ಕೈಟುಕದ್ದು ಎನ್ನುವಂತೆ ಕಾಣಿಸುತ್ತದೆ.

ನಿರಂತರ ಎಚ್ಚರಿಕೆ ಅಗತ್ಯ

ಏನೇ ಇರಲಿ. ನಿರಂತರ ಎಚ್ಚರಿಕೆಯಿಂದ ಇರುವುದು ತೀರಾ ಅಗತ್ಯವಾಗಿದೆ. ಬಿಜೆಪಿ–ಆರ್‌ಎಸ್‌ಎಸ್ ಕೂಟದಲ್ಲಿ ಸರ್ವಾಧಿಕಾರಿ–ಹಿಂದೂತ್ವ ಪ್ರವೃತ್ತಿ ರಕ್ತಗತವಾಗಿದೆ. ಹಾಗಾಗಿ, ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ತಮ್ಮ ಕಾರ್ಯಸೂಚಿಯನ್ನು ಮುಂದೊತ್ತಲು ಅವರು ಸತತವಾಗಿ ಅವಕಾಶವನ್ನು ಹುಡುಕುತ್ತಿರುತ್ತಾರೆ.

ಸಂಸತ್ತಿನ ಒಳಗಡೆ, ಮತ್ತು ತುಂಬಾ ಮುಖ್ಯವಾಗಿ ಸಂಸತ್ತಿನ ಹೊರಗಡೆ

ಸಂಯುಕ್ತ ಪ್ರತಿಪಕ್ಷ ನಿರ್ವಹಿಸಬೇಕಾದ ಪಾತ್ರವೇನೆಂಬುದು ಇಲ್ಲೇ ಗೊತ್ತಾಗುತ್ತದೆ. ಇಂಡಿಯಾ ಕೂಟದ ಪಕ್ಷಗಳು ಉತ್ತಮ ಸಮನ್ವಯ ಸಾಧಿಸಬೇಕು ಹಾಗೂ ಸಾಮಾನ್ಯ ವೇದಿಕೆಯೊಂದರ ಮೂಲಕ ಕೆಲಸ ಮಾಡುವುದನ್ನು ಖಾತರಿಪಡಿಸಬೇಕು. ವೈವಿಧ್ಯತೆಯನ್ನು ಹೊಂದುವ ಹಾಗೂ ರಾಜಕೀಯ ಕಾರ್ಯಕ್ರಮಗಳು ಮತ್ತು ನೀತಿಗಳೊಂದಿಗೆ ಸಂಘರ್ಷವಾಗದ ರೀತಿಯ ವಿಶಾಲ ವೇದಿಕೆ ಅಗತ್ಯವೇ ಹೊರತು ಕಟ್ಟುನಿಟ್ಟಿನ ಮೈತ್ರಿಕೂಟ ಅಲ್ಲ. ಫಲದಾಯಕತೆ ಅಲ್ಲೇ ಅಡಗಿದೆ ಎನ್ನುವುದನ್ನು ಇಂಡಿಯಾ ಕೂಟದ ಕೆಲವೇ ತಿಂಗಳ ಅನುಭವ ತೋರಿಸಿಕೊಟ್ಟಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವಕ್ಕೆ ಬದ್ಧತೆಯೇ ಎಲ್ಲರನ್ನೂ ಒಗ್ಗೂಡಿಸುವ ತತ್ವವಾಗಬೇಕು. ಸರ್ವಾಧಿಕಾರ ಮತ್ತು ಕೋಮುವಾದದ ಅಪಾಯದ ವಿರುದ್ಧದ ಹೋರಾಟ ಇನ್ನೂ ಮುಗಿದಿಲ್ಲ.

ಆತ್ಮಾವಲೋಕನ

ಇಂಡಿಯಾ ಕೂಟದ ಯಶಸ್ಸನ್ನು ಸಂಭ್ರಮಿಸುವಾಗಲೇ ಸಿಪಿಐ (ಎಂ) ಮತ್ತು ಎಡ ಪಕ್ಷಗಳು ತಮ್ಮ ಸಾಧನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ಎಡ ಪಕ್ಷಗಳ ಚುನಾವಣಾ ಸಾಧನೆಯಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಕಳೆದ ಬಾರಿಯ ಐದು ಸ್ಥಾನಗಳಿಗೆ ಹೋಲಿಸಿದರೆ ಅವು ಈ ಬಾರಿ ಎಂಟರಲ್ಲಿ ಗೆದ್ದಿವೆ. ಸಿಪಿಐ(ಎಂ) 4, ಸಿಪಿಐ 2 ಹಾಗೂ ಸಿಪಿಐ (ಎಂಎಲ್) 2 ಕ್ಷೇತ್ರಗಳಲ್ಲಿ ಜಯಿಸಿವೆ. ಹೆಚ್ಚು ಸೀಟುಗಳಲ್ಲಿ ಗೆಲ್ಲುವ ನಿರೀಕ್ಷೆಯಿದ್ದ ಕೇರಳದ ಫಲಿತಾಂಶ ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ಗೆ ನಿರಾಶಾದಾಯಕವಾಗಿದೆ. ಕಾರಣಗಳನ್ನು ಪತ್ತೆ ಮಾಡಲು ಮತ್ತು ಕೊರತೆಗಳನ್ನು ಸರಿಪಡಿಸಿಕೊಳ್ಳಲು ಸ್ವಯಂ–ವಿಮರ್ಶೆ ಅಗತ್ಯವಾಗಿದೆ. ಹಿಂದೂತ್ವ–ಕಾರ್ಪೊರೇಟ್ ಮೈತ್ರಿಯ ವಿರುದ್ಧದ ಹೋರಾಟ ತೀವ್ರಗೊಳ್ಳುವುದು ಖಚಿತವಾಗಿರುವ ಮುಂಬರುವ ದಿನಗಳಲ್ಲಿ ಬಲಿಷ್ಠ ಎಡಶಕ್ತಿ ತುಂಬಾ ಮಹತ್ವದ್ದಾಗಲಿದೆ.

ಅನು: ವಿಶ್ವ

ಹಿಂದಿ ರಾಜ್ಯಗಳಲ್ಲಿ ಬಿಜೆಪಿಗೆ ಭಾರೀ ಹಿನ್ನಡೆ



ಬಿಜೆಪಿ ಮತ್ತು ಅದರ ನಾಯಕತ್ವದ ಎನ್.ಡಿ.ಎ ಕೂಟಕ್ಕೆ ಹಿಂದಿ ರಾಜ್ಯಗಳಲ್ಲಿ ಭಾರೀ ಹಿನ್ನಡೆಯಾಗಿರುವುದು 2024ರ 18ನೆಯ ಲೋಕಸಭಾ ಚುನಾವಣೆಗಳ ಅತಿ ದೊಡ್ಡ ಬೆಳವಣಿಗೆ ಎನ್ನಬಹುದು. ಹಿಂದಿ ರಾಜ್ಯಗಳೆಂದು ಕರೆಯಲಾಗುವ ಹತ್ತು ರಾಜ್ಯಗಳಲ್ಲಿ ಐದು ದೊಡ್ಡ ರಾಜ್ಯಗಳಲ್ಲಿ ಎನ್.ಡಿ.ಎ ಕೂಟದ ಸೀಟು ಮತ್ತು ಮತಗಳಿಕೆ ಎರಡರಲ್ಲೂ ಗಮನಾರ್ಹ ಇಳಿಕೆ ಕಂಡು ಬಂದಿದೆ. ಆ 5 ರಾಜ್ಯಗಳೆಂದರೆ – ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಹರಿಯಾಣ, ಜಾರ್ಖಂಡ. ಮೂರು ರಾಜ್ಯಗಳಲ್ಲಿ ಎನ್.ಡಿ.ಎ ಕೂಟದ ಸೀಟು ಅಷ್ಟೇಯಿದೆ, ಆದರೆ ಮತಗಳಿಕೆಯಲ್ಲಿ ಇಳಿಕೆಯಾಗಿದೆ. ಆ 3 ರಾಜ್ಯಗಳೆಂದರೆ – ದೆಹಲಿ, ಹಿಮಾಚಲ, ಉತ್ತರಾಖಂಡ. ಎನ್.ಡಿ.ಎ ಕೂಟಕ್ಕೆ ಸೀಟು ಮತ್ತು ಮತಗಳಿಕೆ ಎರಡರಲ್ಲೂ ಅಲ್ಪ ಏರಿಕೆಯಾಗಿರುವುದು ಎರಡು ರಾಜ್ಯಗಳಲ್ಲಿ ಮಾತ್ರ –ಛತ್ತಿಸಗಢ, ಮಧ್ಯಪ್ರದೇಶ. ಇದಕ್ಕೆ 2019ರ ಚುನಾವಣೆಗಳಲ್ಲಿ ಬಿಜೆಪಿ/ಎನ್.ಡಿ.ಎ ಕೂಟ ಗರಿಷ್ಠ ಮಟ್ಟ ಮುಟ್ಟಿದ್ದು ಒಂದು ಕಾರಣ ನಿಜ. ಆದರೆ ಜನತೆ ಬಿಜೆಪಿ/ಎನ್.ಡಿ.ಎ ಕೂಟ ಮತ್ತು ಅದರ ನಾಯಕ ಮೋದಿಯ ಸಾಧನೆಯನ್ನು ತೀವ್ರವಾಗಿ ಪ್ರಶ್ನಿಸಿದ್ದಾರೆ, ಮೋದಿ ನಾಯಕತ್ವವನ್ನು ತಿರಸ್ಕರಿಸಿದ್ದಾರೆ ಮತ್ತು ಮೂವರಿಗೂ ಗಂಭೀರ ಎಚ್ಚರಿಕೆ ಕೊಟ್ಟಿದ್ದಾರೆ ಎನ್ನುವುದು ಅಷ್ಟೇ ನಿಜ.

ಎನ್.ಕೆ. ವಸಂತರಾಜ್

ಹಿಂದಿ ರಾಜ್ಯಗಳಲ್ಲಿ ಒಟ್ಟು 225 ಸೀಟುಗಳು ಇದ್ದು, ಅದರಲ್ಲಿ ಎನ್.ಡಿ.ಎ ಕೂಟ 2019ರಲ್ಲಿ ಗಳಿಸಿದ್ದ 63 ಸೀಟುಗಳನ್ನು ಕಳೆದುಕೊಂಡು 149 ಸೀಟುಗಳಿಗೆ ಕುಸಿದಿದೆ. ಅದರಲ್ಲಿ ಅರ್ಧದಷ್ಟು (28) ಸೀಟು ಕಳೆದುಕೊಂಡದ್ದು ಉತ್ತರ ಪ್ರದೇಶದಲ್ಲಿ. ಇಂಡಿಯಾ ಕೂಟ 74 ಸೀಟುಗಳನ್ನು ಗಳಿಸಿದ್ದು 61 ಹೆಚ್ಚು ಸೀಟುಗಳನ್ನು ಗಳಿಸಿದೆ. ಎನ್.ಡಿ.ಎ ಕೂಟ ಈ 10 ಹಿಂದಿ ರಾಜ್ಯಗಳಲ್ಲಿ ಶೇ.2.3 ಮತ ಕಳೆದುಕೊಂಡು ಶೇ.48.9 ಮತ ಗಳಿಸಿದೆ. ಇಂಡಿಯಾ ಕೂಟ ಶೇ.11.2 ಎಷ್ಟು ಮತಗಳಿಕೆ ಹೆಚ್ಚಿಸಿಕೊಂಡು ಶೇ. 41.0 ಮತ ಗಳಿಸಿದೆ. ಇತರರು ಶೇ.9 ಮತ ಕಳೆದುಕೊಂಡು ಶೇ,.10 ಮತ ಗಳಿಸಿದ್ದಾರೆ.

ಹಿಂದಿ ರಾಜ್ಯಗಳ ಸೀಟು–ಮತಪ್ರಮಾಣ ಗಳಿಕೆ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	149	-63	48.9	-2.3
ಇಂಡಿಯಾ	74	+61	41.0	+11.2
ಇತರೆ	2	+2	10.0	-9.0

ಬಿಜೆಪಿ ಸೀಟು–ಮತಗಳಿಕೆ ಎರಡೂ ಕಳೆದುಕೊಂಡ 5 ರಾಜ್ಯಗಳು

ಉತ್ತರ ಪ್ರದೇಶ


ಉತ್ತರ ಪ್ರದೇಶದಲ್ಲಿ ಎನ್.ಡಿ.ಎ ಸೀಟುಗಳಲ್ಲೂ (64ರಿಂದ 36ಕ್ಕೆ) ಮತಪ್ರಮಾಣದಲ್ಲೂ ಅತ್ಯಂತ ಹೆಚ್ಚಿನ ನಷ್ಟ ಅನುಭವಿಸಿದೆ. ಇವೆಲ್ಲವೂ ಇಂಡಿಯಾ ಕೂಟಕ್ಕೆ ಲಾಭವಾಗಿದೆ. ಬಿ.ಎಸ್.ಪಿ ಎಲ್ಲಾ ಸೀಟುಗಳಲ್ಲಿ ಸ್ಪರ್ಧಿಸಿ ಶೂನ್ಯ ಸಂಪಾದನೆ ಮಾಡಿದ್ದು ಶೇ. 10 ರಷ್ಟು ಮತ ಕಳೆದುಕೊಂಡಿದೆ. ಈ ಮತಗಳೂ ಇಂಡಿಯಾ ಕೂಟಕ್ಕೆ ಹೋಗಿದೆ. ಎನ್.ಡಿ.ಎ ಕೂಟದ ಬಿಜೆಪಿ 33 ಸೀಟು, ರಾಷ್ಟ್ರೀಯ ಲೋಕದಳ 2 ಸೀಟು, ಅಪ್ನಾ ದಲ್ 1 ಸೀಟು ಗಳಿಸಿವೆ. ಇಂಡಿಯಾ ಕೂಟದ ಸಮಾಜವಾದಿ ಪಕ್ಷ (ಎಸ್.ಪಿ) 37 ಸೀಟು ಗಳಿಸಿ ದೇಶದಲ್ಲೇ ಮೂರನೇ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಕಾಂಗ್ರೆಸ್ 6 ಸೀಟು ಗಳಿಸಿದೆ. ಎರಡೂ ಕೂಟಕ್ಕೆ ಸೇರದೆ ಏಕಾಂಗಿಯಾಗಿ ಸ್ಪರ್ಧಿಸಿದ್ದ ಹೊಸ ದಲಿತ ಪಕ್ಷವಾದ ಆಜಾದ್ ಸಮಾಜ ಪಾರ್ಟಿ (ಕಾನ್ಶಿರಾಂ) ಯ ಚಂದ್ರಶೇಖರ್ ಬಿಜೆಪಿ, ಎಸ್.ಪಿ, ಬಿ.ಎಸ್.ಪಿ ಮೂರೂ ಪಕ್ಷಗಳನ್ನೂ ಸೋಲಿಸಿ ಆಯ್ಕೆಯಾಗಿರುವುದು ವಿಶೇಷ. ಎರಡೂ ಕೂಟಗಳ ಮತಗಳಿಕೆ ಪ್ರಮಾಣ ಹೆಚ್ಚು ಕಡಿಮೆ (ಕೇವಲ 0.5 % ವ್ಯತ್ಯಾಸ) ಒಂದೇ ಆಗಿರುವುದು ಸಹ ಗಮನಾರ್ಹ, ಮುಂಬರುವ ವಿಧಾನಸಭಾ ಚುನಾವಣೆ ದೃಷ್ಟಿಯಿಂದ.

ಉತ್ತರ ಪ್ರದೇಶ ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	36	-28	43.7	-9.1
ಇಂಡಿಯಾ	43	37	43.2	+18.8
ಬಿ.ಎಸ್.ಪಿ.	0	0	9.4	-9.9
ಇತರೆ	1	1	3.7	0.2

ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿಯ ಪ್ರಾಣಪ್ರತಿಷ್ಠಾನ ತನ್ನ ಚಾರಿತ್ರಿಕ ಸಾಧನೆ ಮತ್ತು ಇದು ತನ್ನನ್ನು ಈ ಲೋಕಸಭಾ ಚುನಾವಣೆಯಲ್ಲಿ 400 ಗಡಿ ದಾಟಿಸಿ ಬಿಡುತ್ತದೆಯೆಂದು ಭಾವಿಸಿದ್ದ ಬಿಜೆಪಿ ಗೆ ಶಾಕ್ ಕೊಟ್ಟಿದೆ. ಪ್ರಾಣಪ್ರತಿಷ್ಠಾನ ಇಡೀ ದೇಶದಲ್ಲಿ ಪ್ರಭಾವ ಬೀರುವುದು ಹಾಗಿರಲಿ, ಉತ್ತರ ಪ್ರದೇಶ ರಾಜ್ಯದಲ್ಲೂ, ಕೊನೆಗೆ ಅಯೋಧ್ಯೆಯಿರುವ ಫೈಜಾಬಾದ್ ಕ್ಷೇತ್ರದಲ್ಲೂ ಬಿಜೆಪಿ ಕೈ ಹಿಡಿದಿಲ್ಲ. 'ರಾಹುಲ್ ಗಾಂಧೀ ಅಮೇಥಿಯಿಂದ ಓಡಿಹೋಗಿದ್ದಾರೆ' ಎಂದು ಟ್ರೋಲ್ ಮಾಡುತ್ತಿದ್ದ ಸ್ಮೃತಿ ಇರಾನಿಯನ್ನು 1.7 ಲಕ್ಷದಷ್ಟು ಅಂತರದಿಂದ, ಅವರು 'ಗಾಂಧಿಗಳ ಕ್ಲಾರ್ಕು' ಎಂದು ಕರೆದ ಕಾಂಗ್ರೆಸ್ ಅಭ್ಯರ್ಥಿ ಕಿಶೋರಿ ಲಾಲ್ ಸೋಲಿಸಿದ್ದಾರೆ. 'ಪ್ರತ್ಯಕ್ಷ ರಾಮನೇ ಬಂದಿದ್ದೇನೆ' ಎಂದು ಹೇಳಿಕೊಂಡಿದ್ದ ರಾಮಾಯಣ ಸೀರಿಯಲ್ ರಾಮ ಪಾತ್ರಧಾರಿ ಅರುಣ್ ಗೋವಿಲ್ ಸಹ ಸೋತಿದ್ದಾರೆ. ಹಿಂದೆ ರೆಕಾರ್ಡ್ ಅಂತರದಿಂದ ಗೆದ್ದಿದ್ದ ಪ್ರಧಾನಿ ಮೋದಿ ಕೇವಲ 1.5 ಲಕ್ಷ ಅಂತರದಿಂದ ಗೆದ್ದಿದ್ದಾರೆ. ಒಂದು ಹಂತದಲ್ಲಿ ಅವರು ಹಿನ್ನಡೆಯಲ್ಲಿದ್ದರು. ರಾಹುಲ್ ಗಾಂಧಿ ರಾಯ್ ಬರೇಲಿಯಲ್ಲಿ 3.9 ಲಕ್ಷ ದ ಭಾರೀ ಬಹುಮತದಿಂದ ಗೆದ್ದಿದ್ದಾರೆ. ಹೀಗೆ ಬಿಜೆಪಿ ಉತ್ತರ ಪ್ರದೇಶದಲ್ಲಿ ಸಮಗ್ರ ಸೋಲು ಅನುಭವಿಸಿದೆ. ಮೋದಿ ಗ್ಯಾರಂಟಿಯಾಗಲಿ, ಯೋಗಿ ಬುಲ್ಡೋಜರ್ ಬೆದರಿಕೆಯಾಗಲಿ, ಡಬ್ಬಲ್ ಇಂಜಿನ್ ಮೆಚ್ಚುಗೆಯಾಗಲಿ, ಕೊನೆಯ ಗಳಿಗೆಯಲ್ಲಿ ಕಿಸಾನ್ ಚಳುವಳಿಯ ಆಕ್ರೋಶದಿಂದ ತಪ್ಪಿಸಿಕೊಳ್ಳಲು ಭಾರತರತ್ನ ಕೊಟ್ಟು ಜಾಟ್ ಸಮುದಾಯದ ಪಕ್ಷವಾದ ರಾಷ್ಟ್ರೀಯ ಲೋಕದಳದ ಜತೆ ಕೊನೆಯ ಗಳಿಗೆಯ ಮೈತ್ರಿ – ಇವು ಜನಾದೇಶದ ಮೇಲೆ ಹೆಚ್ಚಿನ ಪ್ರಭಾವ ಬೀರಲಿಲ್ಲ. ಬದಲಾಗಿ ಉದ್ಯೋಗ ಸೃಷ್ಟಿ ಬೆಲೆಏರಿಕೆ ತಡೆಯಲ್ಲಿ ಮೋದಿ–ಯೋಗಿ ಆಡಳಿತದ ಭೀಕರ ವೈಫಲ್ಯಗಳು, ಮಾತ್ರ ಜನಮನದಲ್ಲಿತ್ತು ಎಂಬುದು ಸ್ಪಷ್ಟ. ಎಸ್.ಪಿ ನಾಯಕ ಅಖೀಲೇಶ್ ಯಾದವ್ ಎಸ್.ಪಿ ಪಕ್ಷದ ಅಭ್ಯರ್ಥಿಗಳ ಆಯ್ಕೆ ಮಾಡುವಾಗ ಹಳೆ ಮುಸ್ಲಿಂ–ಯಾದವ ಜಾತಿ ಸಮೀಕರಣವಾದ ಬದಲಿಸಿ, ಪ್ರಧಾನವಾಗಿ ಇತರ ಒಬಿಸಿ, ದಲಿತರ ಸೇರಿದಂತೆ ಎಲ್ಲ ಸಮುದಾಯಗಳವರಿಗ ಟಿಕೆಟ್ ಕೊಟ್ಟದ್ದು ಸಹ ಬಿಜೆಪಿ–ಎನ್.ಡಿ.ಎ ಸೋಲಿಗೆ ಕಾರಣವಾಯಿತು.

ಬಿ.ಎಸ್.ಪಿ ಯು ಬಿಜೆಪಿಯ ಬಿ ಟೀಮ್ ನಂತೆ ವರ್ತಿಸಿದ್ದು, ಅದರ ಜೊತೆ ಸೇರಿ ಹಲವು ಕ್ಷೇತ್ರಗಳಲ್ಲಿ ನಿರ್ದಿಷ್ಟ ಸಮುದಾಯದ ಅಭ್ಯರ್ಥಿಗಳನ್ನು ಹಾಕಿತು ಅಥವಾ ಬದಲಾಯಿಸಿತು. ಬಿಜೆಪಿ ವಿರುದ್ಧ ಪರಿಣಾಮಕಾರಿ ಪ್ರಚಾರ ಮಾಡುತ್ತಿದ್ದ ಮುಖ್ಯ ಪ್ರಚಾರಕ/ಸಂಯೋಜಕನನ್ನೇ ಬಿಜೆಪಿ ಅಣತಿಯ ಮೇರೆಗೆ ಎಲ್ಲಾ ಪದವಿಗಳಿಂದ ಬರ್ಖಾಸ್ತು ಮಾಡಿತು. ಇಂಡಿಯಾ ಕೂಟದ ಅಭ್ಯರ್ಥಿಯನ್ನು ಸೋಲಿಸಲು ಎಲ್ಲ ತಂತ್ರಗಳನ್ನು ಹೂಡಿತ್ತು. ಇದು ಸ್ಪಷ್ಟವಾಗುತ್ತಾ ಹೋದಂತೆ ಅದರ ಮುಸ್ಲಿಂ ಮತ್ತು ದಲಿತ ಮತದಾರರು ಕೈಬಿಟ್ಟರು. ಆದರೂ ಬಿ.ಎಸ್.ಪಿ ಯ ಸ್ಪರ್ಧೆಯಿಂದ 16 ಕ್ಷೇತ್ರಗಳಲ್ಲಿ ಇಂಡಿಯಾ ಕೂಟ ಸೋತಿತು ಎಂದು ವಿಶ್ಲೇಷಣೆಯೊಂದು ಹೇಳಿದೆ.



ಬಿಹಾರ

ಬಿಹಾರದಲ್ಲಿ ಎನ್.ಡಿ.ಎ ಸೀಟುಗಳಲ್ಲಿ (30ರಿಂದ 21ಕ್ಕೆ) ನಷ್ಟದ ಪ್ರಮಾಣ ಉತ್ತರ ಪ್ರದೇಶದಷ್ಟು ತೀವ್ರವಾಗಿಲ್ಲ. ಆದರೆ ಮತಪ್ರಮಾಣದಲ್ಲಿ ನಷ್ಟ (12.5%ರಷ್ಟು) ಯು.ಪಿ ಗಿಂತಲೂ ಹೆಚ್ಚು ಎಂಬುದನ್ನು ಗಮನಿಸಬೇಕು. ಬಿಜೆಪಿ 17 ಸೀಟು ಸ್ಪರ್ಧಿಸಿ, ಜೆಡಿಯು 16 ಸೀಟು ಸ್ಪರ್ಧಿಸಿ ತಲಾ 12 ಸೀಟು ಪಡೆದಿವೆ. ಲೋಕಜನಶಕ್ತಿ 5 ರಲ್ಲಿ 5 ಸೀಟುಗಳನ್ನು ಗೆದ್ದಿದೆ. ಇಂಡಿಯಾ ಕೂಟ ಸೀಟುಗಳು (1 ರಿಂದ 9 ಕ್ಕೆ) ಮತ್ತು ಮತಪ್ರಮಾಣ ಎರಡರಲ್ಲೂ (13.6%) ಏರಿಕೆ ಕಂಡಿದೆ.ಇಂಡಿಯಾ ಕೂಟದ ಆರ್.ಜೆ.ಡಿ 6, ಕಾಂಗ್ರೆಸ್ 3, ಸಿಪಿಐ(ಎಂ.ಎಲ್–ಲಿಬರೇಶನ್) 2 ಸೀಟುಗಳನ್ನು ಗೆದ್ದಿವೆ.

ಬಿಹಾರ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	30	-9	47.3	-12.5
ಇಂಡಿಯಾ	9	8	39.2	+13.6
ಇತರೆ	1	1	13.5	-1.1

ಪಕ್ಷೇತರರಲ್ಲದೆ ಇತರೆಯಲ್ಲಿ ಪ್ರಮುಖವಾಗಿ ಬಿ.ಎಸ್.ಪಿ., ಎಐಎಂ.ಐ.ಎಂ ಬರುತ್ತವೆ. ಅವುಗಳ ಮತಗಳಿಕೆಯಲ್ಲಿ ಗಮನಾರ್ಹವಾಗಿ ಕಡಿಮೆಯಾಗದಿರುವುದು ಇಂಡಿಯಾ ಕೂಟದ ಸಾಧನೆಗೆ ತಡೆಯಾಗಿರುವಂತೆ ಕಾಣುತ್ತದೆ. ಬಿಹಾರದಲ್ಲೂ ಡಬ್ಬಲ್ ಇಂಜಿನ್ ವೈಫಲ್ಯಗಳ ಮತ್ತು ಅಗ್ನಿವೀರ ಯೋಜನೆಯ ವಿರುದ್ಧ ತೀವ್ರ ಆಕ್ರೋಶವಿದ್ದರೂ, ಬಹುಶಃ ನಿತೀಶ್ ಕುಮಾರ್ (ಅವರ ಹಲವು ತಿಪ್ಪರಲಾಗಗಳ ನಂತರವೂ) ಎಲ್ಲಾ ಸಮುದಾಯಗಳ ನಡುವೆ ಅವರ ಜನಪ್ರಿಯತೆ ಎನ್.ಡಿ.ಎ. ಯನ್ನು ಸ್ವಲ್ಪ ಮಟ್ಟಿಗೆ ಕಾಪಾಡಿದಂತೆ ಕಾಣುತ್ತದೆ. ಪಾನನಿಷೇಧದಿಂದಾಗಿ ಮಹಿಳೆಯರ ವಿಶ್ವಾಸ, ಜಾತಿ ಜನಗಣತಿ ನಡೆಸಿದ್ದು, 5 ಲಕ್ಷ ಸರಕಾರಿ ಉದ್ಯೋಗ (ಕೊನೆಯ ಎರಡನ್ನು ಆರ್.ಜೆ.ಡಿ, ಕಾಂಗ್ರೆಸ್ ಜತೆಗಿನ ಮಹಾಘಟಬಂಧನ ಸರಕಾರದ ಅವಧಿಯಲ್ಲಿ ಮಾಡಿದ್ದರೂ) – ಇವುಗಳ ಕ್ರೆಡಿಟ್ ನಿತೀಶ್ ಕುಮಾರ್ ಗೆ ಸಿಕ್ಕಿದಂತೆ ಕಾಣುತ್ತದೆ. ಆರ್.ಜೆ.ಡಿ ಸಹ ಹಳೆ ಮುಸ್ಲಿಂ–ಯಾದವ ಜಾತಿ ಸಮೀಕರಣವನ್ನು ಬದಲಿಸಿ, ಪ್ರಧಾನವಾಗಿ ಇತರ ಒಬಿಸಿ, ದಲಿತರ ಸೇರಿದಂತೆ ಎಲ್ಲ ಸಮುದಾಯಗಳವರಿಗ ಟಿಕೆಟ್ ಕೊಟ್ಟಿದ್ದರೂ ಸಹ, ಬಿಜೆಪಿ–ಎನ್.ಡಿ.ಎ. ಜಾತಿ ಸಮೀಕರಣವನ್ನು ಬೇಧಿಸಲು ಸಾಧ್ಯವಾಗಿಲ್ಲ.

ರಾಜಸ್ಥಾನ

ರಾಜಸ್ಥಾನದಲ್ಲಿ ಇತ್ತೀಚೆಗೆ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಭಾರೀ ಬಹುಮತ ಗಳಿಸಿದ್ದರೂ, ಲೋಕಸಭಾ ಚುನಾವಣೆಯಲ್ಲಿ ಸೀಟುಗಳಲ್ಲೂ (25ರಿಂದ 14ಕ್ಕೆ) ಮತಪ್ರಮಾಣದಲ್ಲೂ (ಶೇ.9.3) ಹೆಚ್ಚಿನ ನಷ್ಟ ಅನುಭವಿಸಿದೆ. ಬಿಜೆಪಿ 14 ಸೀಟು ಗಳಿಸಿದರೆ, ಕಾಂಗ್ರೆಸ್ 8 ಸೀಟು ಗಳಿಸಿತು. ಇಂಡಿಯಾ ಕೂಟದ ಇತರ ಪಕ್ಷಗಳಾದ ಸಿಪಿಐ(ಎಂ), ರಾಷ್ಟ್ರೀಯ ಲೋಕತಾಂತ್ರಿಕ ಪಕ್ಷ ಮತ್ತು ಭಾರತ ಆದಿವಾಸಿ ಪಕ್ಷ ತಲಾ 1 ಸೀಟು ಗಳಿಸಿದ್ದು ವಿಶೇಷ.

ರಾಜಸ್ಥಾನ – ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	14	-11	49.2	-9.3
ಇಂಡಿಯಾ	11	+10	45.0	+8.6
ಇತರೆ	0	0	5.7	+0.6

ಕಾಂಗ್ರೆಸ್ ವಿಧಾನಸಭಾ ಸೋಲಿನಿಂದ ಪಾಠ ಕಲಿತು ಹೆಚ್ಚಿನ ಐಕ್ಯತೆಯಿಂದ ಕೆಲಸ ಮಾಡಿತ್ತು. ಸಾಕಷ್ಟು ಮತ ಗಳಿಸಿದ್ದ ಇತರ ಪಕ್ಷಗಳನ್ನು ಇಂಡಿಯಾ ಕೂಟಕ್ಕೆ ಸೇರಿಸಿಕೊಂಡು ಸೀಟು ಹಂಚಿಕೊಂಡಿತ್ತು. ಪಂಜಾಬ್, ಹರಿಯಾಣ, ಯು.ಪಿ ಗಡಿಗೆ ಹೊಂದಿಕೊಂಡಿರುವ ರಾಜ್ಯದ ಉತ್ತರ ಭಾಗದಲ್ಲಿ ಕಿಸಾನ್ ಚಳುವಳಿ ಮತ್ತು ಕೇಂದ್ರ ಸರಕಾರದಿಂದ ಅದರ ದಮನದ ವಿರುದ್ಧ ಆಕ್ರೋಶ ಸಹ ಮಡುಗಟ್ಟಿತ್ತು. ವಿಧಾನಸಭೆ ಚುನಾವಣೆ ನಡೆದು ಮುಖ್ಯಮಂತ್ರಿ ಆಯ್ಕೆ ಮತ್ತು ಸರಕಾರದ ರಚನೆಯ ನಂತರ ಬಣ ರಾಜಕಾರಣ ಬಿಜೆಪಿಯಲ್ಲಿ ತೀವ್ರಗೊಂಡಿದ್ದು, ಟಿಕೆಟ್ ಹಂಚಿಕೆಯ ಬಗೆಗಿನ ಅತೃಪ್ತಿ ಅದನ್ನು ಇನ್ನಷ್ಟು ಉಲ್ಬಣಿಸಿದೆ. ಇವೆಲ್ಲ ಬಿಜೆಪಿ ಸೀಟುಗಳನ್ನು ಕಳೆದುಕೊಳ್ಳುವಂತೆ ಮಾಡಿದೆ.

ಹರಿಯಾಣ

ಹರಿಯಾಣದಲ್ಲಿ ಬಿಜೆಪಿ ಲೋಕಸಭಾ ಚುನಾವಣೆಯಲ್ಲಿ ಸೀಟುಗಳಲ್ಲೂ (10 ರಿಂದ 5ಕ್ಕೆ) ಮತಪ್ರಮಾಣದಲ್ಲೂ (ಶೇ.12.0) ಹೆಚ್ಚಿನ ನಷ್ಟ ಅನುಭವಿಸಿದೆ. ಬಿಜೆಪಿ 5 ಸೀಟು ಗಳಿಸಿದರೆ, ಕಾಂಗ್ರೆಸ್ 5 ಸೀಟು ಗಳಿಸಿತು. ಇಂಡಿಯಾ ಕೂಟದ ಇತರ ಪಕ್ಷವಾದ ಎಎಪಿ 1 ಸೀಟಿನಲ್ಲಿ ಕಾಂಗ್ರೆಸಿನಿಂದ ಇತ್ತೀಚೆಗಷ್ಟೇ ಪಕ್ಷಾಂತರ ಮಾಡಿದ್ದ ಬಿಜೆಪಿಯ ನವೀನ್ ಜಿಂದಾಲ್ ವಿರುದ್ಧ ಸ್ಪರ್ಧಿಸಿ ಸೋತಿದೆ. ಇಂಡಿಯಾ ತನ್ನ ಮತಗಳಿಕೆ ಪ್ರಮಾಣವನ್ನು ಗಮನಾರ್ಹವಾಗಿ (18.9%) ಏರಿಸಿಕೊಂಡಿದೆ. ಮಾತ್ರವಲ್ಲ, ಹಿಂದಿ ರಾಜ್ಯಗಳಲ್ಲಿ ಈ ರಾಜ್ಯದಲ್ಲಿ ಮಾತ್ರ ಇಂಡಿಯಾ ಕೂಟದ ಮತಪ್ರಮಾಣ ಎನ್.ಡಿ.ಎ ಯ ಮತಪ್ರಮಾಣಕ್ಕಿಂತ ಹೆಚ್ಚಿದೆ.

ಹರಿಯಾಣದ ಪ್ರಾದೇಶಿಕ ಪಕ್ಷಗಳಾದ ಜನನಾಯಕ ಜನತಾ ಪಾರ್ಟಿ ಮತ್ತು ಇಂಡಿಯನ್ ನೇಶನಲ್ ಲೋಕದಳ ಬಿ.ಎಸ್.ಪಿ ಸ್ಪರ್ಧಿಸಿದ ಇತರ ಪಕ್ಷಗಳಾಗಿದ್ದು ಅವು ಶೂನ್ಯ ಸಂಪಾದನೆ ಮಾಡಿದ್ದಲ್ಲದೆ, ತಮ್ಮ ಹಿಂದಿನ ಮತಗಳಿಕೆಯನ್ನು (ಅರ್ಧಕ್ಕಿಂತಲೂ ಹೆಚ್ಚು) ದೊಡ್ಡ ಪ್ರಮಾಣದಲ್ಲಿ ಕಳೆದುಕೊಂಡಿವೆ

ಹರಿಯಾಣ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	5	-5	46.1	-12.0
ಇಂಡಿಯಾ	5	+5	47.8	+18.9
ಇತರೆ	0	0	6.1	-7.0

ಹರಿಯಾಣದಲ್ಲಿ ಇತರೆಡೆಯಂತೆ ನಿರುದ್ಯೋಗ, ಬೆಲೆಏರಿಕೆ ಗಳಲ್ಲದೆ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಕಿಸಾನ್ ಆಂದೋಲನದ ದಮನ ಮತ್ತು ಮೂರು ಕರಾಳ ಕಾನೂನುಗಳು ದೊಡ್ಡ ಚುನಾವಣಾ ವಿಷಯವಾಗಿತ್ತು. ಹಲವು ಪ್ರದೇಶ/ಹಳ್ಳಿಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಚುನಾವಣಾ ಪ್ರಚಾರಗಳಿಗೆ ಪ್ರವೇಶಿಸಲು ಬಿಡಲಿಲ್ಲ. ಕಿಸಾನ್ ಆಂದೋಲನದ ನಂತರ ಆಶ್ವಾಸನೆ ಕೊಟ್ಟಂತೆ ಎಂ.ಎಸ್.ಪಿ ಕಾನೂನುಬದ್ಧ ಹಕ್ಕು ಮಾಡದಿದ್ದುದು ಬಿಜೆಪಿಯ ವಿರುದ್ಧ ಆಕ್ರೋಶಕ್ಕೆ ಕಾರಣವಾಗಿತ್ತು. ಹರಿಯಾಣದ ಮಹಿಳಾ ಕ್ರೀಡಾಪಟುಗಳ ಲೈಂಗಿಕ ಕಿರುಕುಳ ಕೊಟ್ಟ ಬಿಜೆಪಿ ಸಂಸದನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ್ದರ ವಿರುದ್ಧ ಆಕ್ರೋಶ ತೀವ್ರವಾಗಿತ್ತು. ಚರಣ್ ಸಿಂಗ್ ಗೆ ಭಾರತ ರತ್ನ ಕೊಟ್ಟದ್ದಾಗಲಿ, ನೆರೆಯ ಯುಪಿಯಲ್ಲಿ ಜಾಟ್ ಪಕ್ಷ ಆರ್.ಎಲ್.ಡಿ. ಜೊತೆ ಮೈತ್ರಿಯಾಗಲಿ ಈ ಆಕ್ರೋಶವನ್ನು ಶಮನ ಮಾಡಲು ಸಾಧ್ಯವಾಗಲಿಲ್ಲ.

ಹರಿಯಾಣದ ಬಿಜೆಪಿ ರಾಜ್ಯ ಸರಕಾರ ಬಹುಮತ ಕಳೆದುಕೊಂಡಿದ್ದು ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ. ಸರಕಾರ ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿದೆ. ಅದನ್ನು ಬೆಂಬಲಿಸುತ್ತಿದ್ದ ಜನನಾಯಕ ಜನತಾ ಪಾರ್ಟಿ ಮತ್ತು ಇಂಡಿಯನ್ ನೇಶನಲ್ ಲೋಕದಳ ಹಾಗು ಕೆಲವು ಪಕ್ಷೇತರ ಅಭ್ಯರ್ಥಿಗಳು ತಮ್ಮ ಬೆಂಬಲ ಹಿಂತೆಗೆದುಕೊಂಡಿದ್ದಾರೆ. ಕೆಲವೇ ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ಇದ್ದು ಬಿಜೆಪಿ ಈ ರಾಜ್ಯವನ್ನು ಕಳೆದುಕೊಳ್ಳುವುದು ಹೆಚ್ಚು ಕಡಿಮೆ ಖಚಿತವಾಗಿದೆ.

ಜಾರ್ಖಂಡ್

ಜಾರ್ಖಂಡ್ ನಲ್ಲಿ ಎನ್.ಡಿ.ಎ. ಸೀಟುಗಳಲ್ಲಿ (12ರಿಂದ 9ಕ್ಕೆ) ನಷ್ಟದ ಪ್ರಮಾಣ ಹೆಚ್ಚಲ್ಲದಿದ್ದರೂ, ಮತಪ್ರಮಾಣದಲ್ಲಿ ನಷ್ಟ (ಶೇ.13.2ರಷ್ಟು) ಗಮನಾರ್ಹವಾಗಿದೆ. ಬಿಜೆಪಿ 13 ಸೀಟು ಸ್ಪರ್ಧಿಸಿ 8 ಗೆದ್ದಿದ್ದರೆ, ಎಜೆಎಸ್ ಯು ಸ್ಪರ್ಧಿಸಿದ 1 ಸೀಟು ಗೆದ್ದಿದೆ. ಇಂಡಿಯಾ ಕೂಟದ ಸೀಟುಗಳು (2 ರಿಂದ 5 ಕ್ಕೆ) ಮತ್ತು ಮತಪ್ರಮಾಣ ಎರಡರಲ್ಲೂ (ಶೇ.13.6) ಏರಿಕೆ ಕಂಡಿದೆ. ಇಂಡಿಯಾ ಕೂಟದ ಕಾಂಗ್ರೆಸ್ 7 ಸೀಟುಗಳಲ್ಲಿ ಸ್ಪರ್ಧಿಸಿ 2, ಜೆಎಂಎಂ 5 ಸೀಟುಗಳಲ್ಲಿ ಸ್ಪರ್ಧಿಸಿ 3 ಸೀಟುಗಳನ್ನು ಗೆದ್ದಿದೆ. ಆರ್.ಜೆ.ಡಿ ಮತ್ತು ಸಿಪಿಐ(ಎಂ.ಎಲ್–ಲಿಬರೇಶನ್) ತಲಾ 1 ಸೀಟಿನಲ್ಲಿ ಸ್ಪರ್ಧಿಸಿ ಸೋತಿವೆ. ಇತರರಲ್ಲಿ ಸಿಪಿಐ 4 ಸೀಟುಗಳಲ್ಲಿ ಮತ್ತು ಸಿಪಿಐ(ಎಂ) 1 ಸೀಟಿನಲ್ಲಿ ಸ್ಪರ್ಧಿಸಿ ಸೋತಿವೆ.







ಜಾರ್ಖಂಡ್ – ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	9	-3	47.2	-13.2
ಇಂಡಿಯಾ	5	+3	39.6	+9.5
ಇತರೆ	0	0	13.2	+3.7

ಜಾರ್ಖಂಡ್ ನ ಜೆಎಂಎಂ ಪಕ್ಷದ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರನ್ನು ಚುನಾವಣೆಗೆ ಮೊದಲೇ ಹಣದ ಸಾಗಾಣಿಕೆಯ ಆಪಾದನೆಯ ಮೇಲೆ ಬಂಧಿಸಲಾಗಿತ್ತು. ಚುನಾವಣೆ ಘೋಷಣೆಯಾದರೂ ಅವರಿಗೆ ಬೈಲ್ ಕೊಡಲಾಗಲಿಲ್ಲ. ಮುಂದೆ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಗೆ ಬೈಲ್ ಕೊಟ್ಟ ಮೇಲೂ ಸೋರೇನ್ ಅವರಿಗೆ ಬೈಲ್ ಸಿಗಲಿಲ್ಲ. ಈ ರೀತಿಯ ಬಂಧನ ರಾಜಕೀಯ ದುರುದ್ದೇಶದ್ದಾಗಿದ್ದು, ಜನತೆಯಲ್ಲಿ ಅವರ ವಿರುದ್ಧ ತಪ್ಪು ಅಭಿಪ್ರಾಯ ರೂಪಿಸಲಾಗಿದ್ದು, ಜೆಎಂಎಂ ಮತ್ತಿತರ ಪಕ್ಷಗಳಿಗೆ 'ಸಮನಾದ ರಾಜಕೀಯ ಅವಕಾಶ' ನಿರಾಕರಿಸಲಾಯಿತು ಎಂದೇ ಹೇಳಬೇಕು. ಅಷ್ಟರ ಮಟ್ಟಿಗೆ ಈ ರಾಜ್ಯದ ಫಲಿತಾಂಶ ಬಿಜೆಪಿ ಪರವಾಗಿ ವಿರೂಪಗೊಂಡದ್ದು ಎಂದೇ ಹೇಳಬೇಕಾಗುತ್ತದೆ. ಆದರೂ ಬಿಜೆಪಿಯ ಮತಪ್ರಮಾಣದಲ್ಲಿ ಭಾರೀ ಇಳಿಕೆಯಾಯಿತು ಎಂದು ಗಮನಿಸಬೇಕು.

ಬಿಜೆಪಿ ಸೀಟು ಉಳಿಸಿಕೊಂಡ, ಮತಗಳಿಕೆ ಕಳೆದುಕೊಂಡ 3 ರಾಜ್ಯಗಳು

ದೆಹಲಿ

ದೆಹಲಿಯ ಚುನಾವಣೆಗಳಲ್ಲಿ ಹಿಂದಿನಂತೆ ಬಿಜೆಪಿ 'ಕ್ಲೀನ್ ಸ್ವೀಪ್' ಮಾಡಿದರೂ ಅದರ ಮತಗಳಿಕೆಯ ಪ್ರಮಾಣದಲ್ಲಿ ಕಡಿಮೆಯಾಯಿತು ಎಂಬುದನ್ನು ಗಮನಿಸಬೇಕು. ದೆಹಲಿ ಯಲ್ಲಿ ರಾಜ್ಯ/ಸ್ಥಳೀಯ ಚುನಾವಣೆಗಳಲ್ಲಿ ಎಎಪಿ ಭಾರೀ ಬಹುಮತ ಗಳಿಸಿದರೂ ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಸೇರಿದಂತೆ ಶೂನ್ಯ ಸಂಪಾದನೆಯೇ ಅದರ ಪಾಲಿಗೆ ಬಂದಿತ್ತು. ಇದುವರೆಗೆ ಕಾಂಗ್ರೆಸ್ ಮತ್ತು ಎಎಪಿ ಎರಡೂ ಬಿಜೆಪಿ ವಿರುದ್ಧ ಸೆಣಸುತ್ತಿದ್ದು ಅದು ಬಿಜೆಪಿ 'ಕ್ಲೀನ್ ಸ್ವೀಪ್' ಗೆ ಕಾರಣವಾಗಿರಬಹುದು ಎಂದು ಹೇಳಲಾಗಿತ್ತು. ಆದರೆ ಈ ಬಾರಿ ಕಾಂಗ್ರೆಸ್ ಮತ್ತು ಎಎಪಿ ತೀವ್ರ ಚೌಕಾಶಿಯ ನಂತರ 3 ಮತ್ತು 4 ಸೀಟುಗಳನ್ನು ಹಂಚಿಕೊಂಡು ಹೊಂದಾಣಿಕೆ ಮಾಡಿಕೊಂಡಿದ್ದವು. ಚುನಾವಣಾ ಪ್ರಚಾರದಲ್ಲೂ ತಳಮಟ್ಟದಲ್ಲಿ ಹೊಂದಾಣಿಕೆ ಚೆನ್ನಾಗಿಯೇ ಇತ್ತು ಎಂದು ಹೇಳಲಾಗಿದೆ. ಆದರೂ ಬಿಜೆಪಿ ಕಡಿಮೆ ಮತಗಳೊಂದಿಗೆ ಮತ್ತೆ ಕ್ಲೀನ್ ಸ್ವೀಪ್ ಮಾಡಿದೆ.

ದೆಹಲಿ – ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	7	0	54.4	-2.2
ಇಂಡಿಯಾ	0	0	43.0	+2.4
ಇತರೆ	0	0	2.6	-0.2

ಚುನಾವಣೆಗೆ ಮೊದಲೇ ಅಬಕಾರಿ ನೀತಿ ಹಗರಣದ ಹುಸಿ ಆರೋಪದ ಮೇಲೆ (ಸಚಿವರೂ ಸೇರಿದಂತೆ) ಹಲವು ಹಿರಿಯ ಎಎಪಿ ನಾಯಕರನ್ನು ಬಂಧಿಸಲಾಗಿತ್ತು. ಯಾವುದೇ ಪುರಾವೆಯಿಲ್ಲದೆ ಜನತೆಯಲ್ಲಿ ಅವರ ವಿರುದ್ಧ 'ಭ್ರಷ್ಟರು' ಎಂಬ ತಪ್ಪು ಅಭಿಪ್ರಾಯ ರೂಪಿಸಲಾಯಿತು. ಹಲವು ಶಾಸಕರ ಸಂಸದರ ಪಕ್ಷಾಂತರಕ್ಕೆ ಆಮಿಷ ಬೆದರಿಕೆ ಒಡ್ಡಲಾಗಿತ್ತು. ಪಕ್ಷದ ಅಕೌಂಟ್ ಸ್ಥಗಿತಗೊಳಿಸಲಾಗಿತ್ತು. ಪಕ್ಷದ ಕಚೇರಿಗೆ ಹೋಗಲು ನಿರ್ಬಂಧಗಳನ್ನು ಹಾಕಲಾಗಿತ್ತು. ಚುನಾವಣೆ ಘೋಷಣೆಯಾದ ಮೇಲೆ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಬಂಧಿಸಲಾಯಿತು. ಇವೆಲ್ಲ ಎಎಪಿಯ ಚುನಾವಣೆಯ ತಯಾರಿಗೆ, ಪ್ರಚಾರಕ್ಕೆ ತೀವ್ರ ಅಡೆತಡೆಗಳನ್ನು ತಂದಿತು. ಮುಂದೆ ಪ್ರಮುಖ ನಾಯಕರಾದ ಕೇಜ್ರಿವಾಲ್ ಮತ್ತು ಸಂಜಯ ಸಿಂಗ್ ಗೆ ಸುಪ್ರೀಂ ಕೋರ್ಟ್ ಬೈಲ್ ಕೊಟ್ಟರೂ ಎಎಪಿ ಗೆ 'ಸಮನಾದ ರಾಜಕೀಯ ಅವಕಾಶ' ನಿರಾಕರಿಸಲಾಯಿತು ಎಂದೇ ಹೇಳಬೇಕು. ಅಷ್ಟರ ಮಟ್ಟಿಗೆ ಈ ರಾಜ್ಯದ ಫಲಿತಾಂಶ ಬಿಜೆಪಿ ಪರವಾಗಿ ವಿರೂಪಗೊಂಡದ್ದು ಎಂದೇ ಹೇಳಬೇಕಾಗುತ್ತದೆ. ಆದರೂ ಬಿಜೆಪಿಯ ಮತಪ್ರಮಾಣದಲ್ಲಿ ಇಳಿಕೆಯಾಯಿತು ಎಂದು ಗಮನಿಸಬೇಕು.


ಹಿಮಾಚಲ


ಹಿಮಾಚಲದ ಚುನಾವಣೆಗಳಲ್ಲಿ ಹಿಂದಿನಂತೆ ಬಿಜೆಪಿ 'ಕ್ಲೀನ್ ಸ್ವೀಪ್' ಮಾಡಿದರೂ ಅದರ ಮತಗಳಿಕೆಯ ಪ್ರಮಾಣದಲ್ಲಿ ಭಾರೀ (12.7%ರಷ್ಟು) ಕಡಿತವಾಗಿದೆ ಎಂಬುದನ್ನು ಗಮನಿಸಬೇಕು. ಹಿಮಾಚಲದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದ್ದರೂ ಇತ್ತೀಚೆಗೆ 'ಆಪರೇಶನ ಕಮಲ' ದ ಪ್ರಯತ್ನ ನಡೆದಿದೆ. ಕಾಂಗ್ರೆಸ್ ಬಣ ಸಂಘರ್ಷಗಳ


ಪುಟ 14 ಕ್ಕೆ


18ನೇ ಲೋಕಸಭಾ ಚುನಾವಣೆ ಸಿಪಿಐ(ಎಂ) ಪಡೆದ ಮತಗಳು

ಕ್ರ.ಸಂ	ಸಂಖ್ಯೆ	ರಾಜ್ಯ	ಕ್ಷೇತ್ರ	ಪಡೆದ ಮತಗಳು	ಸ್ಥಾನ
01	01	ಅಂಡಮಾನ್ ಮತ್ತು ನಿಕೋಬಾರ್ ದ್ವೀಪ	ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	6,017	4ನೇ
02	01	ಆಂಧ್ರಪ್ರದೇಶ	ಅರಕು	1,23,129	3ನೇ
03	01	ಅಸ್ಸಾಂ	ಬಾರ್ಪೇಟಾ	96,138	3ನೇ
04	01	ಬಿಹಾರ	ಖಗರಿಯಾ	3,77,526	2ನೇ
05	01	ಜಾರ್ಖಂಡ್	ರಾಜಮಹಲ್ (ST)	37,291	4ನೇ
06	01	ಕರ್ನಾಟಕ	ಚಿಕ್ಕಬಳ್ಳಾಪುರ	4,557	3ನೇ
07	01	ಕೇರಳ	ಕಾಸರಗೋಡು	3,90,010	2ನೇ
08	02		ಕಣ್ಣೂರು	4,09,542	2ನೇ
09	03		ವಡಕರ	4,43,022	2ನೇ
10	04		ಕೋಝಿಕ್ಕೋಡ್	3,74,245	2ನೇ
11	05		ಪೊನ್ನಾನಿ	3,26,756	2ನೇ
12	06		ಮಲಪ್ಪುರಂ	3,43,888	2ನೇ
13	07		ಆಲತ್ತೂರ್ (SC)	4,03,447	ಗೆಲುವು
14	08		ಪಾಲಕ್ಕಾಡ್	3,45,886	2ನೇ
15	09		ಚಾಲಕುಡಿ	3,30,417	2ನೇ
16	10		ಎರ್ನಾಕುಲಂ	2,31,932	2ನೇ
17	11		ಇಡುಕ್ಕಿ	2,98,645	2ನೇ
18	12		ಆಲಪ್ಪುಳ	3,41,047	2ನೇ
19	13		ಪಥನಂತಿಟ್ಟ	3,01,504	2ನೇ
20	14		ಕೊಲ್ಲಂ	2,93,326	2ನೇ
21	15		ಅಟ್ಟಿಂಗಲ್	3,27,367	2ನೇ
22	01	ಮಹಾರಾಷ್ಟ್ರ	ಹಿಂಗೋಲಿ	14,644	5ನೇ
23	01	ಒಡಿಶಾ	ಭುವನೇಶ್ವರ	4,148	4ನೇ
24	01	ಪಂಜಾಬ್	ಜಲಂಧರ್	5,958	7ನೇ
25	01	ರಾಜಸ್ಥಾನ	ಸಿಕರ್	6,59,300	ಗೆಲುವು
26	01	ತಮಿಳುನಾಡು	ಮಧುರೈ	4,30,323	ಗೆಲುವು
27	02		ಡಿಂಡಿಗಲ್	6,70,149	ಗೆಲುವು
28	01	ತೆಲಂಗಾಣ	ಭುವನಗಿರಿ	28,730	4ನೇ
29	01	ತ್ರಿಪುರ	ತ್ರಿಪುರ ಪೂರ್ವ (ಎಸ್.ಟಿ)	2,90,628	2ನೇ
30	01	ಪಶ್ಚಿಮ ಬಂಗಾಳ	ಜಲ್ಪೈಗುರಿ (ಎಸ್.ಸಿ)	74,092	3ನೇ
31	02		ಕೃಷ್ಣನಗರ	1,80,201	3ನೇ
32	03		ಡಮ್ ಡಮ್	2,40,784	3ನೇ
33	04		ಜಾದವ್‌ಪುರ	2,58,712	3ನೇ
34	05		ಕೋಲ್ಕತ್ತಾ ದಕ್ಷಿಣ	1,68,531	3ನೇ
35	06		ಹೌರಾ	1,52,005	3ನೇ
36	07		ಶ್ರೀರಾಂಪುರ	2,39,146	3ನೇ
37	08		ಹೂಗ್ಲಿ	1,39,919	3ನೇ
38	09		ತಾಮ್ಲುಕ್	85,389	3ನೇ
39	10		ಬಂಕುರಾ	1,05,359	3ನೇ
40	11		ಬಿಷ್ಣುಪುರ್ (SC)	1,05,411	3ನೇ
41	12		ಬರ್ಧಮಾನ್ ಪುರ್ಬಾ(SC)	1,76,899	3ನೇ
42	13		ಅಸನ್ಸೋಲ್	1,05,964	3ನೇ
43	14		ಮುರ್ಷಿದಾಬಾದ್	5,18,227	2ನೇ
44	15		ರಾಣಾಘಾಟ್ (SC)	1,23,810	3ನೇ
45	16		ಬರ್ಧಮಾನ್ ದುರ್ಗಾಪುರ	1,53,829	3ನೇ
46	17		ಬೋಲ್ಪುರ್ (SC)	99,383	3ನೇ
47	18		ಬ್ಯಾರಕ್‌ಪುರ	1,09,564	3ನೇ
48	19		ಬಸಿರ್ಹತ್	77,899	3ನೇ
49	20		ಡೈಮಂಡ್ ಹಾರ್ಬರ್	86,953	3ನೇ
50	21		ಮಥುರಾಪುರ (SC)	61,100	4ನೇ
51	22		ಜಾರ್ಗ್ರಾಮ್ (ST)	77,302	3ನೇ
52	23		ಅರಂಬಾಗ್ (SC)	92,502	3ನೇ









ಬಿಜೆಪಿಗೆ ಹಿನ್ನಡೆಯುಂಟು ಮಾಡಿರುವ ಜನರ ತೀರ್ಪು ಲೋಕಸಭಾ ಚುನಾವಣಾ ಫಲಿತಾಂಶಗಳ ಬಗ್ಗೆ ಸಿಪಿಐ(ಎಂ) ಅಭಿನಂದನೆ

18ನೇ ಲೋಕಸಭಾ ಚುನಾವಣೆ ಫಲಿತಾಂಶ ಬಿಜೆಪಿಗೆ ಒಂದು ಹಿನ್ನಡೆಯಾಗಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ 2014 ಮತ್ತು 2019ರಲ್ಲಿ ಲೋಕಸಭೆಯಲ್ಲಿ ಪಡೆದಿದ್ದ ಬಹುಮತವನ್ನು ಅದು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ 400 ಸೀಟುಗಳನ್ನು ಗೆಲ್ಲುವುದಾಗಿ ಬೀಗುತ್ತಿದ್ದ ನರೇಂದ್ರ ಮೋದಿಯ ಸುತ್ತ ಕಟ್ಟಿಕೊಂಡಿದ್ದ ಅಜೇಯತೆಯ ಚಿತ್ರಣವನ್ನು ಕುಟುಕಿರುವ ಹೊಡೆತ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಚುನಾವಣೆಗಳು ವಿರೋಧ ಪಕ್ಷಗಳ ಮೇಲೆ ಸತತ ದಾಳಿಗಳು, ಕೇಂದ್ರೀಯ ಸಂಸ್ಥೆಗಳ ದುರುಪಯೋಗ ಮತ್ತು ಹಣಬಲದ ಭಾರೀ ಬಳಕೆಯ ಹಿನ್ನೆಲೆಯಲ್ಲಿ ನಡೆದಿವೆ. ಈ ನಿರಂಕುಶ ದಾಳಿಗಳನ್ನು ಎದುರಿಸಿ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ಜನರು ಕಾಪಾಡಿದ್ದಾರೆ ಎನ್ನುತ್ತ ಪೊಲಿಟ್ ಬ್ಯೂರೋ ಜನರನ್ನು ಅಭಿನಂದಿಸಿದೆ.

ಇಂಡಿಯ ಮೈತ್ರಿಕೂಟ ನಿರುದ್ಯೋಗ, ಬೆಲೆ ಏರಿಕೆ, ಕೃಷಿ ಸಂಕಟ ಮತ್ತು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲಿನ ದಾಳಿಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಉತ್ತಮ ಪ್ರದರ್ಶನ ನೀಡಿದೆ. ಮೋದಿ ಮತ್ತು ಬಿಜೆಪಿ ನಡೆಸಿದ ಕೋಮುವಾದಿ ಚುನಾವಣಾ ಪ್ರಚಾರವನ್ನು ಸಾಕಷ್ಟು ಪ್ರಮಾಣದಲ್ಲಿ ಎದುರಿಸಲು ಅದು ಸಮರ್ಥವಾಗಿದೆ.

ಚುನಾವಣಾ ಆಯೋಗವು ಸಮಾನ ಅವಕಾಶವನ್ನು ಖಾತ್ರಿಪಡಿಸಿದ್ದರೆ ಫಲಿತಾಂಶಗಳು ಬಿಜೆಪಿ ಮತ್ತು ಎನ್‌ಡಿಎಗೆ ಇನ್ನೂ ಹೆಚ್ಚು ಪ್ರತಿಕೂಲಕರವಾಗುತ್ತಿದ್ದವು. ನರೇಂದ್ರ ಮೋದಿಯವರ ಪ್ರಚೋದನಕಾರಿ ಕೋಮುವಾದಿ ಭಾಷಣಗಳನ್ನು ನಿಗ್ರಹಿಸುವಲ್ಲಿ ಮತ್ತು ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸುವಲ್ಲಿ ಅದರ ಹೀನಾಯ ವಿಫಲತೆ ಆಯೋಗದ ಖ್ಯಾತಿಗೆ ಕಳಂಕವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ತಮ್ಮ ಒಟ್ಟು ಸಂಖ್ಯೆಯಲ್ಲಿ ಅಲ್ಪ ಸುಧಾರಣೆ ದಾಖಲಿಸಿವೆ. ಸಂಪೂರ್ಣ ಚುನಾವಣಾ ಫಲಿತಾಂಶಗಳು ಲಭ್ಯವಾದ ನಂತರ ಈ ಬಗ್ಗೆ ಹೆಚ್ಚು ವಿವರವಾದ ವಿಶ್ಲೇಷಣೆಯನ್ನು ಕೈಗೊಳ್ಳಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಜನರು ಪ್ರಜಾಪ್ರಭುತ್ವ, ಸಂವಿಧಾನ ಮತ್ತು ತಮ್ಮ ಜೀವನೋಪಾಯದ ಮೇಲಿನ ಎಲ್ಲಾ ದಾಳಿಗಳನ್ನು ಎದುರಿಸಿ ಹೋರಾಡಲಿದ್ದಾರೆ ಎಂಬುದರ ಸಂಕೇತ ಈ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಚುನಾವಣೆ ಮುಗಿಯುತ್ತಿದ್ದಂತೆ ಜನರ ಮೇಲೆ ಹೊರೆಗಳು ಮದರ್ ಡೈರಿ ಮತ್ತು ಅಮುಲ್ ಹಾಲಿನ ಎಲ್ಲಾ ರೂಪಾಂತರಗಳ ಬೆಲೆಗಳನ್ನು ಪ್ರತಿ ಲೀಟರ್ ಗೆ 2 ರೂ.ನಷ್ಟು ಹಚ್ಚಿಸಿದೆ

ಜನರ ಮೇಲೆ ಮತ್ತಷ್ಟು ಹೊರೆ ಹೊರಿಸಲು ಸರ್ಕಾರ ಚುನಾವಣೆ ಮುಗಿಯುವವರೆಗೂ ಕಾಯುತ್ತಿತ್ತು ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇದಕ್ಕೆ ಮೊದಲು ಮತದಾನ ಮುಗಿದ ತಕ್ಷಣ, ರಸ್ತೆ ಟೋಲ್ ತೆರಿಗೆಯನ್ನು 5 ಶೇಕಡಾದಷ್ಟು ಹೆಚ್ಚಿಸಲಾಯಿತು. ಇದು ಜನರ ಪ್ರಯಾಣದ ವೆಚ್ಚವನ್ನು ಹೆಚ್ಚಿಸುವುದಲ್ಲದೆ ಎಲ್ಲಾ ಸರಕುಗಳ ಬೆಲೆಗಳನ್ನು, ವಿಶೇಷವಾಗಿ ರಸ್ತೆ ಮೂಲಕ ಸಾಗಿಸುವ ಆಹಾರ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಎಕ್ಸಿಟ್ ಪೋಲ್ ನ 'ಬಿಜೆಪಿ ಸುನಾಮಿ' ನಂಬಿ ಒಂದೇ ದಿನದಲ್ಲಿ 14 ಲಕ್ಷ ಕೋಟಿ ರೂ. ಸಂಪತ್ತಿನ ಹೆಚ್ಚಳ

ಫಲಿತಾಂಶ ಹೊರಬರುತ್ತಿದ್ದಂತೆ 30 ಲಕ್ಷ ಕೋಟಿ ರೂ. ಕಳೆದುಕೊಂಡ ಚಿಲ್ಲರೆ ಹೂಡಿಕೆದಾರರು

ಷೇರು ಮಾರುಕಟ್ಟೆ ಚಂಚಲತೆ:

ನರೇಂದ್ರ ಮೋದಿಯವರು ಚುನಾವಣಾ ಪ್ರಚಾರದಲ್ಲಿ "10 ವರ್ಷಗಳ ಹಿಂದೆ ಷೇರು ಮಾರುಕಟ್ಟೆ ಸೆನ್ಸೆಕ್ಸ್ ಸೂಚ್ಯಂಕ 25,000 ಇತ್ತು, ಇಂದು 75,000 ಕ್ಕೆ ಏರಿದೆ. ಜೂನ್ 4 ರಂದು ಷೇರು ಮಾರುಕಟ್ಟೆ ದಾಖಲೆಗಳನ್ನು ಮುರಿಯಲಿದೆ" ಎಂದರು. ತಾನು ಮತ್ತೊಮ್ಮೆ ಅಧಿಕಾರಕ್ಕೆ ಬರುತ್ತೇನೆ ಮತ್ತು ಷೇರು ಮಾರುಕಟ್ಟೆ ಮತ್ತಷ್ಟು ಬೆಳವಣಿಗೆಯಾಗುತ್ತದೆ ಎಂಬ ಭ್ರಮೆಯನ್ನು ಹೂಡಿಕೆದಾರರಲ್ಲಿ ಸೃಷ್ಟಿಸುವ ಮಾತುಗಳನ್ನು ಮೋದಿ ಆಡಿದ್ದರು. ನಂತರ, ಚುನಾವಣೋತ್ತರ ಸಮೀಕ್ಷೆಗಳು 'ಎನ್‌ಡಿಎ 350ರಿಂದ 400 ಸೀಟುಗಳನ್ನು ಪಡೆಯುತ್ತದೆ ಎಂದು ಸೃಷ್ಟಿಸಿದ ಸುಳ್ಳು ಗ್ರಹಿಕೆಗಳನ್ನು ನಂಬಿ ಸೆನ್ಸೆಕ್ಸ್ ಬಾರೀ ಏರಿಕೆ ಕಂಡು ಒಂದೇ ದಿನದಲ್ಲಿ ಮುಂಬೈ ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರ ಸಂಪತ್ತು 14 ಲಕ್ಷ ಕೋಟಿ ರೂಪಾಯಿಗಳಷ್ಟು ಏರಿಕೆಯಾಯಿತು. ಚುನಾವಣಾ ಪಲಿತಾಂಶ ಹೊರಬರುತ್ತಿದ್ದಂತೆ, ಸಮ್ಮಿಶ್ರ ಸರ್ಕಾರ ಬರುವ ಸೂಚನೆ ಸಿಗುತ್ತಿದ್ದಂತೆ ಸೆನ್ಸೆಕ್ಸ್ ಬಾರೀ ಕುಸಿತ ಕಂಡಿತು. ಚಿಲ್ಲರೆ ಹೂಡಿಕೆದಾರರು 30 ಲಕ್ಷ ಕೋಟಿ ರೂಪಾಯಿ ಕಳೆದುಕೊಂಡಿರುವ ಈ 'ಅತಿದೊಡ್ಡ ಷೇರು ಮಾರುಕಟ್ಟೆ ಹಗರಣ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ನೇರವಾಗಿ ಭಾಗಿಯಾಗಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಬಿಜೆಪಿ ಮಾತ್ರ ಉತ್ತಮ ಎಂಬ ಭ್ರಮೆ ಇವರಿಗೇಕೆ?

ಸಿ.ಸಿದ್ದಯ್ಯ

18ನೇ ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ಜೂನ್ ಒಂದರಂದು ಮುಗಿಯುತ್ತಿದ್ದಂತೆ ಸುದ್ದಿ ಮಾಧ್ಯಮಗಳು ಮತದಾನೋತ್ತರ ಸಮೀಕ್ಷೆ ಬಿಡುಗಡೆ ಮಾಡಿದವು. ಈ ಸಮಯಕ್ಕಾಗಿಯೇ ಮಾಧ್ಯಮ ಸಂಸ್ಥೆಗಳು ಕೆಲವು ದಿನಗಳಿಂದ ಕಾಯುತ್ತಿದ್ದವು. (ಹೂಡಿಕೆದಾರರನ್ನು ಪ್ರತಿನಿಧಿಸುವ ದೊಡ್ಡ ಶ್ರೀಮಂತರ ಲಾಬಿ ಈ ಸಮಯಕ್ಕಾಗಿ ಕಾಯುತ್ತಿತ್ತು ಎಂದರೆ ತಪ್ಪಾಗಲಾರದು) ದೇಶದ ಜನರಷ್ಟೇ ಅಲ್ಲದೆ ವಿದೇಶಗಳಲ್ಲೂ ಈ ಸಮೀಕ್ಷಾ ವರದಿಯನ್ನು ತಿಳಿಯಲು ಕಾತುರದಿಂದ ಕಾಯುತ್ತಿದ್ದರು. ಮುಂದಿನ ಸರ್ಕಾರ ಯಾರದಾಗಿರುತ್ತದೆ ಎಂಬುದನ್ನು ಚುಣಾವಣಾ ಪಲಿತಾಂಶಕ್ಕೂ ಮುಂಚಿತವಾಗಿ ತಿಳಿಯುವ ಕಾತುರ ಅವರದು. ಎಕ್ಸಿಟ್ ಪೋಲ್‌ಗಳು ಹೊರಬಂದಾಗ, ಭಾರತೀಯ ಜನತಾ ಪಕ್ಷ (ಬಿಜೆಪಿ) 400 ಸೀಟುಗಳನ್ನು ಪಡೆಯುತ್ತದೆ ಎಂದು ಅಂದಾಜಿಸಿದವು. ಇವುಗಳಲ್ಲಿ ಬಹುತೇಕ ಸಮೀಕ್ಷೆಗಳು ಬಿಜೆಪಿ 350 ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಗೆಲುವು ಪಡೆಯಲಿದೆ ಎಂದು ಹೇಳಿದವು. ಅಂದು ಶನಿವಾರವಾದ್ದರಿಂದ ಷೇರು ಮಾರುಕಟ್ಟೆಗೆ ರಜೆ. ಮರುದಿನ ಭಾನುವಾರ. ಭಾನುವಾರ ಕಳೆದು ಸೋಮವಾರ ಷೇರು ಮಾರುಕಟ್ಟೆ ತೆರೆಯುತ್ತಿದ್ದಂತೆ ಖರೀದಿದಾರರಲ್ಲಿ ಸಂಭ್ರಮವೋ ಸಂಭ್ರಮ! ಭಾರತದ ದೊಡ್ಡ ಸ್ಟಾಕ್-ಮಾರುಕಟ್ಟೆ ಹೂಡಿಕೆದಾರರು, ಮ್ಯೂಚುವಲ್ ಫಂಡ್‌ಗಳು, ಊಹಾಪೋಹಗಾರರು ಇತ್ಯಾದಿಗಳ ನಡುವೆ ಸೋಮವಾರದಂದು ಒಂದೇ ದಿನ ರೂ. 12 ಲಕ್ಷ ಕೋಟಿ ಸಂಪತ್ತಿನ ಬೆಳವಣಿಗೆಗೆ ಸಾಕ್ಷಿಯಾಯಿತು.

ಮರುದಿನ (ಜೂನ್ 4 ರಂದು) ನಿಜವಾದ ಫಲಿತಾಂಶಗಳು ಬರುತ್ತಿದ್ದಂತೆ, ಬಿಜೆಪಿ ತನ್ನ ಹಿಂದಿನ ಸ್ಥಾನಗಳಷ್ಟನ್ನೂ ಗಳಿಸಲಾರದು ಎಂಬುದನ್ನು ತಿಳಿದ ನಂತರ ಸೆನ್ಸೆಕ್ ಬಾರಿ ಕುಸಿತ ಕಂಡಿತು. ಹೂಡಿಕೆದಾರರನ್ನು ಪ್ರತಿನಿಧಿಸುವ ದೊಡ್ಡ ಶ್ರೀಮಂತ ಲಾಬಿಯ 'ಸಮೀಪದೃಷ್ಟಿ' ಪ್ರಚಾರ ಯಂತ್ರಗಳು ಸೃಷ್ಟಿಸಿದ ಸುಳ್ಳು ಗ್ರಹಿಕೆಗಳ ಉತ್ಪನ್ನದಿಂದಾಗಿ ಆ ಎರಡು ದಿನಗಳ ವಹಿವಾಟುಗಳಲ್ಲಿ ಚಿಲ್ಲರೆ ಹೂಡಿಕೆದಾರರಿಗೆ 30 ಲಕ್ಷ ಕೋಟಿ ರೂಪಾಯಿಗಳ ನಷ್ಟಕ್ಕೆ ಕಾರಣವಾಯಿತು. ಇದೆಲ್ಲವನ್ನೂ ಉದ್ದೇಶಪೂರ್ವಕವಾಗಿ ಕಾರ್ಯಗತಗೊಳಿಸಲಾಗಿದೆ ಎಂಬ ಆರೋಪ ಕೇಳಿಬರುತ್ತಿದೆ. ಮಾಧ್ಯಮ-ಕಾರ್ಪೊರೇಟ್ ವಲಯ ಶಾಮೀಲಾಗಿ ಷೇರು ಮಾರುಕಟ್ಟೆಯಲ್ಲಿ ಲಾಭ ಉಂಟು ಮಾಡುವುದು ಇದರ ಉದ್ದೇಶವಾಗಿತ್ತು. ಎಕ್ಸಿಟ್ ಪೋಲ್ ಗಳು ನಿಖರವಾಗಿಲ್ಲ ಎಂದು ಬಿಜೆಪಿ ನಾಯಕರಿಗೆ ಮೊದಲೇ ತಿಳಿದಿತ್ತು, ಪ್ರಧಾನಿ, ಗೃಹ ಸಚಿವರು, ಹಣಕಾಸು ಸಚಿವರು, ನಕಲಿ ಎಕ್ಸಿಟ್ ಪೋಲ್‌ಸ್ಟರ್‌ಗಳು ಮತ್ತು ಸಂಶಯಾಸ್ಪದ ವಿದೇಶಿ ಹೂಡಿಕೆದಾರರ ಪಾತ್ರವನ್ನು ತನಿಖೆ ಮಾಡಲು ಜೆಪಿಸಿ ತನಿಖೆಯನ್ನು ನಡೆಸಬೇಕು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಮೋದಿ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿ ಕೂಟ ಸರ್ಕಾರ ರಚಿಸುತ್ತದೆ ಎಂಬ ಭರವಸೆಯೊಂದಿಗೆ ಮಾರುಕಟ್ಟೆ ಮತ್ತೆ ಚೇತರಿಸಿಕೊಳ್ಳುತ್ತಿದೆ. ಈ ಚೇತರಿಕೆಯೂ ಎನ್‌ಡಿಎ ಸರ್ಕಾರದ ಭದ್ರತೆ ಮತ್ತು ಅದು ತೆಗೆದುಕೊಳ್ಳುವ ನೀತಿ ನಿಲುವುಗಳನ್ನು ಅವಲಂಭಿಸಿ ಏರಿಳಿತ ಕಾಣುವ ಸಾಧ್ಯತೆಗಳಿವೆ. ಚಿಲ್ಲರೆ ಹೂಡಿಕೆದಾರರು ಷೇರು ಮಾರುಕಟ್ಟೆಗಳಲ್ಲಿ ದೊಡ್ಡ ಊಹಾತ್ಮಕ ಹೂಡಿಕೆಗಳನ್ನು ಮಾಡುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ.

ಬಿಜೆಪಿ ಮಾತ್ರ ಉತ್ತಮ ಎಂಬ ಭ್ರಮೆಯ ಸೃಷ್ಟಿ?

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಮ್ಮ ಚುನಾವಣಾ ಪ್ರಚಾರದ ಸಮಯದಲ್ಲಿ "10 ವರ್ಷಗಳ ಹಿಂದೆ ಷೇರು ಮಾರುಕಟ್ಟೆ ಸೆನ್ಸೆಕ್ಸ್ ಸೂಚ್ಯಂಕ 25,000 ಇತ್ತು, ಇಂದು 75,000 ಕ್ಕೆ ಏರಿದೆ." ಎನ್ನುತ್ತ, "ಜೂನ್ 4 ರಂದು ಷೇರು ಮಾರುಕಟ್ಟೆ ದಾಖಲೆಗಳನ್ನು ಮುರಿಯಲಿದೆ" ಎಂದರು. ಮೇ 13 ರಂದು ಅಮಿತ್ ಶಾ ಅವರು "ಜೂನ್ 4 ರ ಮೊದಲು ಷೇರುಗಳನ್ನು ಖರೀದಿಸಿ" ಎಂದು ಹೇಳಿದರು. ಇವರ ಇಂತಹ ಹೇಳಿಕೆಗಳು ಬಿಜೆಪಿ ಆಡಳಿತದಿಂದ ಮಾತ್ರ ಷೇರು ಮಾರುಕಟ್ಟೆ ಬೆಳವಣಿಗೆ ಸಾಧ್ಯ ಎಂಬ ಭ್ರಮೆ ಸೃಷ್ಟಿಸುವ ಪ್ರಯತ್ನವಾಗಿದೆ ಮಾತ್ರವಲ್ಲ, ಬಿಜೆಪಿ ಮಾತ್ರ ಷೇರು ಮಾರುಕಟ್ಟೆಗೆ ಒಳ್ಳೆಯದು ಎಂಬಂತ್ತಿದೆ.



ಇಲ್ಲಿನ ಹೂಡಿಕೆದಾರರು ಷೇರು ಮಾರುಕಟ್ಟೆಯ ಬೆಳವಣಿಗೆಯ ಕುರಿತು ತಪ್ಪಾಗಿ ಗ್ರಹಿಸಿದ್ದಾರೆ: 10 ವರ್ಷಗಳ ನರೇಂದ್ರ ಮೋದಿಯವರ ಆಡಳಿತದ ಅವಧಿಯಲ್ಲಿ ಷೇರು ಮಾರುಕಟ್ಟೆಯಲ್ಲಿನ ಶೇ. 260 ರ ಆದಾಯಕ್ಕೆ ಹೋಲಿಸಿದರೆ, ಯುಪಿಎ ಶೇ. 400 ಆದಾಯವನ್ನು ನೀಡಿದೆ. ಎರಡನೆಯದಾಗಿ, ಷೇರು ಮಾರುಕಟ್ಟೆಯಲ್ಲಿನ ಗಳಿಕೆಯ ಅತ್ಯಂತ ನಿರ್ಣಾಯಕ ಸೂಚಕವೆಂದರೆ ಆರ್ಥಿಕ ಬೆಳವಣಿಗೆ. ಯುಪಿಎ 10 ವರ್ಷಗಳಲ್ಲಿ ಶೇ.7.8 ಅನ್ನು ನೀಡಿತು, ಎನ್.ಡಿ.ಎ. ಯ ಶೇ. 5.9 ಕ್ಕೆ ಹೋಲಿಸಿದರೆ ಯುಪಿಎ ಅವಧಿಯಲ್ಲಿ ಆರ್ಥಿಕ ಬೆಳವಣಿಗೆ ಹೆಚ್ಚು. ಹಾಗಾದರೆ ಇವರಲ್ಲಿ ಕೆಲವರು ನ್ಯೂಯಾರ್ಕ್ ಮತ್ತು ಲಂಡನ್ ಇತ್ಯಾದಿಗಳಲ್ಲಿನ ಐಶಾರಾಮಿ ಹವಾನಿಯಂತ್ರಿತ ಕಛೇರಿಗಳಲ್ಲಿ ಕುಳಿತು ಭಾರತದ ಈಕ್ವಿಟಿ ಮಾರುಕಟ್ಟೆಗಳ ಮೇಲೆ ವ್ಯವಹರಿಸುತ್ತ, ಉದ್ದೇಶಪೂರ್ವಕವಾಗಿ ವಾಸ್ತವ ಸ್ಥಿತಿಯನ್ನು ಕಾಣದಷ್ಟು ಕುರುಡಾಗಿದ್ದಾರೆಯೇ? ಇವರಲ್ಲಿ ಹೆಚ್ಚಿನವರು "ಉದ್ಯೋಗಗಳು" ಮತ್ತು "ಹಣದುಬ್ಬರ" ವನ್ನು ಅಮೆರಿಕ ಅಧ್ಯಕ್ಷೀಯ ಚುನಾವಣೆಗಳಲ್ಲಿ ದೊಡ್ಡ ಸಮಸ್ಯೆಗಳಾಗಿ ಉಲ್ಲೇಖಿಸುತ್ತಾರೆ. ಭಾರತದ ಗಂಭೀರ ನಿರುದ್ಯೋಗ ಬಿಕ್ಕಟ್ಟನ್ನು (ಉತ್ತರಪ್ರದೇಶದಲ್ಲಿ 60,000 ಪೊಲೀಸ್ ಕಾನ್ಸ್‌ಟೇಬಲ್ ಉದ್ಯೋಗಗಳಿಗೆ ಎಂಬಿಎ, ಪಿ.ಎಚ್.ಡಿ., ಎಂಜಿನಿಯರಿಂಗ್ ಪದವಿ ಇತ್ಯಾದಿ ಹೊಂದಿರುವ 48 ಲಕ್ಷ ಯುವಕರು ಅರ್ಜಿ ಸಲ್ಲಿಸುತ್ತಿದ್ದಾರೆ), ಆಹಾರ ಹಣದುಬ್ಬರವನ್ನು, ದೊಡ್ಡ ದೊಡ್ಡ ಹಗರಣಗಳನ್ನು ಇವರು ನಿರ್ಲಕ್ಷಿಸುತ್ತಿದ್ದಾರೆ.

ಹಿಂಡೆನ್‌ಬರ್ಗ್ ವರದಿ

ಅದಾನಿ ಗ್ರೂಪ್ ಕುರಿತ ಹಿಂಡೆನ್‌ಬರ್ಗ್ ವರದಿಯ ಬಗ್ಗೆ ಇವರಿಗೆ ತಿಳಿದಿಲ್ಲವೇ? ಇದು ರಾಜಕೀಯ ಪ್ರೇರಿತ ಎಂದು ಇವರು ಭಾವಿಸುತ್ತಾರೆಯೇ? ನಿಯಂತ್ರಕ ಪ್ರಕ್ರಿಯೆಗಳ ಅಸ್ಪಷ್ಟ ಕುಶಲತೆಯಿಂದ ಸೆಬಿ (ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ) ಕೂಡ ಎಚ್ಚೆತ್ತುಕೊಂಡಿದೆ. ಇದು ರಾಜಕೀಯ ಆಶ್ರಯವಿಲ್ಲದೆ ನಡೆದಿದೆ ಎಂದು ಇವರು ಭಾವಿಸುತ್ತಾರೆಯೇ?

ಚುನಾವಣಾ ಬಾಂಡ್

ಎಲೆಕ್ಟೋರಲ್ ಬಾಂಡ್‌ಗಳ ಹಗರಣದ ಬಗ್ಗೆ ಇವರು ಏನು ಹೇಳುತ್ತಾರೆ? ಡೊನಾಲ್ಡ್ ಟ್ರಂಪ್ ಅಥವಾ ಜೋ ಬಿಡೆನ್ ಸುಲಿಗೆ, ಬಂಧನದ ಬೆದರಿಕೆ, ರಾಜ್ಯ ಅಧಿಕಾರದ ದುರುಪಯೋಗ ಮತ್ತು ಮೂಲಸೌಕರ್ಯ ಯೋಜನೆಗಳನ್ನು ದತ್ತಿಯಾಗಿ ಬಿಟ್ಟುಕೊಡುವ ಮೂಲಕ ಪ್ರಚಾರದ ಹಣವನ್ನು ಸಂಗ್ರಹಿಸಲು ಇವರು ಅನುಮತಿಸುತ್ತಾರೆಯೇ? ಭಾರತದಲ್ಲಿ ದುರಾಶೆ, ಕ್ರೋನಿ ಕ್ಯಾಪಿಟಲಿಸಂ ಮತ್ತು ಭ್ರಷ್ಟಾಚಾರವು ಇವರಿಗೆ ನ್ಯಾಯಸಮ್ಮತವೇ?

ಮುಳುಗಿದ ಎನ್ರಾನ್ ಕಂಪನಿ

1996 ರಲ್ಲಿ, ಎನ್ರಾನ್ ಕಂಪನಿಯು ವಿದ್ಯುತ್ ಉತ್ಪಾದಿಸಲು ಸರ್ಕಾರಿ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿತು, ಆಗಿನ ಮಹಾರಾಷ್ಟ್ರ ಸರ್ಕಾರದೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತು, ಅಂತಿಮವಾಗಿ ವಿದ್ಯುತ್ ಉತ್ಪಾದಿಸದೆ ನಮ್ಮ ದೇಶದಿಂದ ಹಾರಿತು. ಅದಕ್ಕೆ ಸಾಲ ನೀಡಿದ ಬ್ಯಾಂಕುಗಳು ದಿವಾಳಿಯಾದವು. ಆ ಕಂಪನಿಯಲ್ಲಿ ಷೇರುಗಳನ್ನು ಖರೀದಿಸಿದ ಸಾಮಾನ್ಯ ಹೂಡಿಕೆದಾರರು ಮುಳುಗಿದರು. ಕೊನೆಗೆ ಆ ಕಂಪನಿಯ ಉದ್ಯೋಗಿಗಳೂ ನೀರಿನಲ್ಲಿ ಮುಳುಗಿದರು. ಎನ್ರಾನ್ ಉದ್ಯೋಗಿಗಳಿಗೆ ಸ್ಟಾಕ್ ಆಯ್ಕೆಗಳ ಹೆಸರಿನಲ್ಲಿ ನೀಡಲಾದ ಷೇರುಗಳು ಸ್ಕ್ರ್ಯಾಪ್ ಪೇಪರ್‌ಗಳಾಗಿ ಉಳಿದಿವೆ. ಕಿಂಗ್ ಫಿಶರ್ ಮತ್ತು ನೀರವ್ ಮೋದಿಯ ಕಥೆಗಳು ಇದೇ ಅಲ್ಲವೇ?

ಎಫ್.ಡಿ.ಐ.

2021-22 ರಲ್ಲಿ, ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ರೂಪದಲ್ಲಿ ರೂ. 4.37 ಲಕ್ಷ ಕೋಟಿಗಳು ನಮ್ಮ ದೇಶದ ಆರ್ಥಿಕತೆಯನ್ನು ಪ್ರವೇಶಿಸಿವೆಯಾದರೂ, 2022-23 ರಲ್ಲಿ ಇದು ರೂ. 3.67 ಲಕ್ಷ ಕೋಟಿಗಳಿಗೆ ತೀವ್ರವಾಗಿ ಇಳಿಯುತ್ತವೆ. ನಮ್ಮ ದೇಶಕ್ಕೆ ಬಂದಿರುವ ಎಫ್‌ಡಿಐ ಸೇವಾ ವಲಯ ಮತ್ತು ಸಾಫ್ಟ್‌ವೇರ್ ಕ್ಷೇತ್ರಕ್ಕೂ ಬಂದಿದೆ. ಉತ್ಪಾದನಾ ವಲಯ, ನಿರ್ಮಾಣ ಕ್ಷೇತ್ರ ಮತ್ತು ಕೌಶಲ್ಯ ಸುಧಾರಣೆ ವಲಯದಲ್ಲಿ ಎಫ್‌ಡಿಐ ನಾಮಮಾತ್ರಕ್ಕೆ ಬಂದಿದೆ. ಇದು ದೇಶದ ಅಭಿವೃದ್ಧಿಗೆ ಹೇಗೆ ಕೊಡುಗೆ ನೀಡುತ್ತದೆ? ಅಸ್ಥಿರವಾದ ವಿದೇಶಿ ಬಂಡವಾಳ ಹೂಡಿಕೆಗಳು ದೇಶದ ಆರ್ಥಿಕತೆಯನ್ನು ಹೇಗೆ ಹಾನಿಗೊಳಿಸುತ್ತವೆ ಎಂಬುದನ್ನು 80 ಮತ್ತು 90 ರ ದಶಕಗಳಲ್ಲಿ ದಕ್ಷಿಣ ಏಷ್ಯಾದ ದೇಶಗಳ ಆರ್ಥಿಕತೆಯ ಕುಸಿತದಿಂದ ನೋಡಬಹುದಾಗಿದೆ.

ತಳಮಟ್ಟದಲ್ಲಿ ನೋಡಬೇಕಿದೆ

ಭಾರತವು ಮಧ್ಯಮ-ಆದಾಯದ ರಾಷ್ಟ್ರದ ಕೆಳ ಹಂತದಲ್ಲಿದೆ. ನಮ್ಮ ತಲಾ ಆದಾಯ, ಮಾನವ ಅಭಿವೃದ್ಧಿ ಸೂಚ್ಯಂಕ, ಬಡತನ

ಪುಟ 14 ಕ್ಕೆ



ಕೃಪೆ: ಸತೀಶ್ ಆಚಾರ್ಯ

ಸೆನ್ಸೆಕ್ಸ್‌ನ ಏರಿಕೆ ಮತ್ತು ಕುಸಿತವು ಆರು ಕಂಪನಿಗಳ ಮೇಲೆ ಆಧಾರಿತವಾಗಿದ್ದರೆ, ಅದು ಆರ್ಥಿಕತೆಯ ಪ್ರವೃತ್ತಿಯನ್ನು ಹೇಗೆ ಪ್ರತಿಬಿಂಬಿಸುತ್ತದೆ? ದೇಶದ ಆರ್ಥಿಕತೆಯು ಅತ್ಯುತ್ತಮವಾಗಿದ್ದರೆ, ನಮ್ಮ ದೇಶವು ಎಲ್ಲಾ ಅಭಿವೃದ್ಧಿ ಸೂಚಕಗಳಲ್ಲಿ ಏಕೆ ಹಿಂದುಳಿದಿದೆ? 80 ಕೋಟಿ ಜನರು ತಿಂಗಳಿಗೆ ಸರ್ಕಾರ ನೀಡುವ ಐದು ಕೆಜಿ ಆಹಾರಧಾನ್ಯದ ಮೇಲೆ ಏಕೆ ಅವಲಂಬಿತರಾಗಿದ್ದಾರೆ? ಜನರ ಆದಾಯ ಮತ್ತು ಜೀವನ ಮಟ್ಟ ಏಕೆ ಕುಸಿಯುತ್ತಿದೆ ಮತ್ತು ಕುಟುಂಬದ ಸಾಲ ಏಕೆ ಹೆಚ್ಚುತ್ತಿದೆ? ಹಾಗಾಗಿ ಆರ್ಥಿಕತೆಯ ಕಾರ್ಯಕ್ಷಮತೆ ಮತ್ತು ಸೆನ್ಸೆಕ್ಸ್‌ನ ಓಟದ ನಡುವೆ ಯಾವುದೇ ಸಂಬಂಧವಿಲ್ಲ.

'ಮೋದಿ ಗ್ಯಾರಂಟಿ'ಗಳಲ್ಲಿ ಭಾರತದ ಜನರಿಗೆ ಎಳ್ಳಷ್ಟೂ ನಂಬಿಕೆ ಇಲ್ಲ!

18ನೇ ಲೋಕಸಭಾ ಚುನಾವಣೆಗಳಲ್ಲಿ ಮತದಾರರ ತೀರ್ಪು ಭಾರತದ ಪ್ರಜಾಪ್ರಭುತ್ವವನ್ನು ಮತ್ತು ಸಂವಿಧಾನವನ್ನು ಉಳಿಸುವ ಹೋರಾಟದಲ್ಲಿ ಒಂದು 'ಐತಿಹಾಸಿಕ ಹೆಜ್ಜೆ' ಎಂದು ಸ್ವಾಗತಿಸಿದರೆ, ತಮ್ಮ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತ ಮೋದಿಯವರು ಇದು 'ಚಾರಿತ್ರಿಕ ಗೆಲುವು' ಎಂದು ಹೇಳಿರುವುದಾಗಿ ವರದಿಯಾಗಿದೆ. ಆದರೆ ಈ ಚುನಾವಣೆಗಳಲ್ಲಿ ಮತದಾರರು ಬಿಜೆಪಿಗೆ 63 ಸ್ಥಾನಗಳನ್ನು ಕಡಿತ ಮಾಡಿ ಕಳೆದ ಎರಡು ಚುನಾವಣೆಗಳಲ್ಲಿ ನೀಡಿದ್ದ ಸ್ಪಷ್ಟ ಬಹುಮತವನ್ನು ಈ ಬಾರಿ ನಿರಾಕರಿಸಿದ್ದಾರೆ. ಎನ್‌ಡಿಎಗೆ ಈ ಬಾರಿ 400 ಕ್ಕಿಂತಲೂ ಹೆಚ್ಚು ಸ್ಥಾನಗಳು ದೊರೆಯುತ್ತವೆ ಎಂದು ಮೋದಿ–ಷಾ ಡಂಗುರಕ್ಕೆ ಪ್ರತಿಯಾಗಿ ಭಾರತದ ಮತದಾರರು ಅದು 300ನ್ನೂ ದಾಟದಂತೆ ನೋಡಿಕೊಂಡಿದ್ದಾರೆ. ಆದರೆ ಇದರಲ್ಲಿ ಬಿಜೆಪಿಯೇತರ ಎನ್‌ಡಿಎ ಪಕ್ಷಗಳ ಬಲ ಕಳೆದ ಬಾರಿಯ 50ರಿಂದ ಈ ಬಾರಿ 53ಕ್ಕೇರಿದೆ. ಅಂದರೆ ಮತದಾರರು ಎನ್‌ಡಿಎ ಗೆ ಬಹುಮತ ನೀಡಿದರೂ ಬಿಜೆಪಿಗೆ ಬಹುಮತವನ್ನು ನಿರಾಕರಿಸಿದ್ದಾರೆ.

ಬಿಜೆಪಿ ಪ್ರಣಾಳಿಕೆಯ ಹೆಸರೇ ಬಿಜೆಪಿಯ ಗ್ಯಾರಂಟಿ ಬದಲು 'ಮೋದಿ ಗ್ಯಾರಂಟಿ' ಎಂದಿತ್ತು. ಬಿಜೆಪಿಗೆ ಬಹುಮತವನ್ನು ನಿರಾಕರಿಸುವ ಮೂಲಕ ಮತದಾರರು ಮೋದಿ ಗ್ಯಾರಂಟಿಯನ್ನು ತಾವು ನಂಬುವುದಿಲ್ಲ ಎಂದು ಸಾರಿ ಹೇಳಿದಂತಾಗಿದೆ.

ಮತಪಾಲಿನಲ್ಲಿ ಎನ್‌ಡಿಎ ಹಿಂದಿ ಪ್ರದೇಶ ಮತ್ತು ಪಶ್ಚಿಮ ಭಾರತದಲ್ಲಿ 17ನೇ ಲೋಕಸಭೆಗೆ ಹೋಲಿಸಿದರೆ ಅನುಕ್ರಮವಾಗಿ 2.3% ಮತ್ತು 14.4% ಕಡಿಮೆ ಮತ ಪಡೆದಿದೆ. ಈಶಾನ್ಯ ಭಾರತದಲ್ಲಿ 1.5% ಕಡಿಮೆಯಾಗಿದೆ. ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ತೆಲುಗು ದೇಶಂ ನೆರವಿನಿಂದ 7.6% ಹೆಚ್ಚಿದೆ. ಪೂರ್ವ ಭಾರತದಲ್ಲಿ 0.7% ಏರಿಕೆ ಕಂಡಿದೆ. ಇಂಡಿಯ ಮೈತ್ರಿಕೂಟ ಎಲ್ಲ ಪ್ರದೇಶಗಳಲ್ಲೂ ಮತಪಾಲನ್ನು ಹೆಚ್ಚಿಸಿಕೊಂಡಿದೆ. ಮುಖ್ಯವಾಗಿ ಹಿಂದಿ ಪ್ರದೇಶದಲ್ಲಿ 11.2% ಮತ್ತು ಪಶ್ಚಿಮ ಭಾರತದಲ್ಲಿ 12.4% ಉಳಿದಂತೆ ದಕ್ಷಿಣ, ಪೂರ್ವ ಮತ್ತು ಈಶಾನ್ಯ ಭಾರತಗಳಲ್ಲಿ ಅನುಕ್ರಮವಾಗಿ 7.1%, 2.5% ಮತ್ತು 4.2% ಏರಿಕೆ ಕಂಡಿದೆ.

ಎನ್‌ಡಿಎ ಮತಪಾಲು ಅರೆ–ಗ್ರಾಮೀಣ ಪ್ರದೇಶಗಳನ್ನು ಬಿಟ್ಟು ಬೇರೆಲ್ಲ ಕಡೆಗಳಲ್ಲಿ 2019ಕ್ಕೆ ಹೋಲಿಸಿದರೆ ಇಳಿಕೆಯಾಗಿದೆ. ಅತಿ ಹೆಚ್ಚು ಇಳಿಕೆ ಕಂಡಿರುವುದು ಗ್ರಾಮೀಣ ಪ್ರದೇಶಗಳಲ್ಲಿ. ಇಂಡಿಯಾ ಮೈತ್ರಿಕೂಟ ಎಲ್ಲ ಪ್ರದೇಶಗಳಲ್ಲಿ ಸರಾಸರಿ 8% ದಷ್ಟು ಹೆಚ್ಚು ಮತಗಳನ್ನು ಗಳಿಸಿದೆ.

ಗಮನಾರ್ಹ ಸಂಗತಿಯೆಂದರೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ 131 ಕ್ಷೇತ್ರಗಳಲ್ಲಿ ಬಿಜೆಪಿ ಕಳೆದ ಬಾರಿ 77 ಸ್ಥಾನಗಳನ್ನು ಪಡೆದಿತ್ತು. ಅದೀಗ 55ಕ್ಕಿಳಿದಿದೆ– ಕಳೆದ ಬಾರಿ ಪರಿಶಿಷ್ಟ ಜಾತಿಗಳಿಗೆ ಮೀಸಲಾಗಿರುವ ಸ್ಥಾನಗಳಲ್ಲಿ 45ನ್ನು ಬಿಜೆಪಿ ಪಡೆದಿತ್ತು. ಅದೀಗ 30ಕ್ಕಿಳಿದಿದೆ. ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಸ್ಥಾನಗಳ ಸಂಖ್ಯೆ 32ರಿಂದ 25ಕ್ಕಿಳಿದಿದೆ.

ಅಂದರೆ ಇಂಡಿಯಾ ಮೈತ್ರಿಕೂಟದ ಸರಕಾರ ಬಂದರೆ ಅದು ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳಿಗೆ ಇರುವ ಮೀಸಲಾತಿಯನ್ನು ಅವರಿಂದ ಕಿತ್ತುಕೊಂಡು ಮುಸ್ಲಿಮರಿಗೆ ಕೊಡುತ್ತದೆ ಎಂಬ ಮೋದಿಯವರ ಮಾತನ್ನು ಮತದಾರರು ಶುದ್ಧ ಸುಳ್ಳು ಎಂದು ತಿರಸ್ಕರಿಸಿದ್ದಾರೆ.

ಈ ಸುಳ್ಳುಗಳನ್ನು ಮೋದಿಯವರು ಆರಂಭಿಸಿದ್ದು ಬಂಸ್ವಾರ ಕ್ಷೇತ್ರದಲ್ಲಿ; ಅಲ್ಲಿಯೇ ಬಿಜೆಪಿ ಅಭ್ಯರ್ಥಿ ಸೋಲುಂಡಿದ್ದಾರೆ, ಭಾರತೀಯ ಆದಿವಾಸಿ ಪಾರ್ಟಿಯ ಅಭ್ಯರ್ಥಿ ಗೆದ್ದಿದ್ದಾರೆ.

ಇದಲ್ಲದೆ, ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿರುವುದನ್ನು ಪ್ರತಿಪಕ್ಷಗಳನ್ನು ಟೀಕಿಸಲು ಒಂದು ಪ್ರಬಲ ಅಸ್ತ್ರವಾಗಿ ಬಳಸಿದರೂ, ಕೆಲವೆಡೆ ಅದರ ಪ್ರಯೋಜನಗಳನ್ನು ಪಡೆದಿರಬಹುದಾದರೂ, ಆ ಆಯೋಧ್ಯೆಯಿರುವ ಫೈಜಾಭಾದ್ ಕ್ಷೇತ್ರದಲ್ಲಿಯೇ ಈ ಬಾರಿ ಬಿಜೆಪಿ ಅಭ್ಯರ್ಥಿ ಸೋತಿದ್ದಾರೆ! ಸಮಾಜವಾದಿ ಪಕ್ಷದ ದಲಿತ ಅಭ್ಯರ್ಥಿ ಗೆದ್ದಿದ್ದಾರೆ.

ಲಖಿಂಪುರ ಖೇರಿಯಲ್ಲಿ ಪ್ರತಿಭಟಿಸುತ್ತಿದ್ದ ರೈತರ ಮೇಲೆ ಜೀಪು ಹರಿಸಿ ಕೊಂದ ಘಟನೆಯಲ್ಲಿ ಪಾತ್ರವಹಿಸಿದವರೆಂಬ ಆರೋಪಕ್ಕೆ ಗುರಿಯಾಗಿದ್ದ ಕೇಂದ್ರಮಂತ್ರಿ ಅಜಯ್ ಮಿಶ್ರ ಥೇಣಿಯವರನ್ನು ಸಂಪುಟದಿಂದ ಕೈಬಿಡಬೇಕು ಎಂಬ ರೈತರ ಆಗ್ರಹವನ್ನು ಮೋದಿ ನಿರ್ಲಕ್ಷಿಸುತ್ತಲೇ ಬಂದಿದ್ದರು, ಈ ಚುನಾವಣೆಗಳಲ್ಲಿ ಅವರಿಗೆ ಸೀಟನ್ನೂ ನೀಡಿದರು. ಆದರೆ ಈ ಚುನಾವಣೆಗಳಲ್ಲಿ ಅಲ್ಲಿನ ಮತದಾರರೇ ಅವರನ್ನು ಸೋಲಿಸಿ ಅವರಿಗೂ, ಮೋದಿಯವರಿಗೂ ಪಾಠ ಕಲಿಸಿದ್ದಾರೆ.

ಮತದಾರರು ಪಾಠ ಕಲಿಸಿದ್ದು ಇವರೊಬ್ಬ ಮಂತ್ರಿಗೆ ಮಾತ್ರವಲ್ಲ, ಇವರೂ, ಮತ್ತು ಮೋದಿಯ ಪರವಾಗಿ ಬಹಳ ಗದ್ದಲ ಮಾಡುತ್ತಿದ್ದ ಸ್ಮೃತಿ ಇರಾನಿ ಸೇರಿದಂತೆ ಮೋದಿ ಸಂಪುಟದ ಸುಮಾರು 20 ಮಂತ್ರಿಗಳು ಚುನಾವಣೆಗಳಲ್ಲಿ ಸೋತಿದ್ದಾರೆ.

ವಾಸ್ತವವಾಗಿ ಈ ಲೋಕಸಭಾ ಚುನಾವಣೆ ಅತ್ಯಂತ ಅಸಮಾನ ಪಾತಳಿಯಲ್ಲಿ ನಡೆದಿರುವ ಚುನಾವಣೆ. ಚುನಾವಣಾ ಆಯೋಗ ಎಲ್ಲ ರಾಜಕೀಯ ಪಕ್ಷಗಳಿಗೆ ಸಮಾನ ಅವಕಾಶ ಕಲ್ಪಿಸುವ ತನ್ನ ಕರ್ತವ್ಯವನ್ನು ಪಾಲಿಸಿದ್ದರೆ, ಮುಖ್ಯವಾಗಿ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿದ್ದರೆ, ಕೊನೆಗೂ ಸುಪ್ರಿಂಕೋರ್ಟ್ ರದ್ದು ಮಾಡಿದ ಚುನಾವಣಾ ಬಾಂಡುಗಳಿಂದ ಸಂಗ್ರಹಿಸಿದ ಸಾವಿರ ಕೋಟಿಗಟ್ಟಲೆ ಹಣಬಲವನ್ನು ಮತ್ತು ಇ.ಡಿ., ಸಿಬಿಐ ಮುಂತಾದ ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುವದನ್ನು ತಡೆಯುವ ವ್ಯವಸ್ಥೆಯಿದ್ದಿದ್ದರೆ ಸತತ ಮೂರನೇ ಬಾರಿ ಸರಕಾರ ನಡೆಸುವ 'ಚಾರಿತ್ರಿಕ ಅವಕಾಶ'ವೇ ಮೋದಿಯವರಿಗೆ ಸಿಗುತ್ತಿರಲಿಲ್ಲ ಎಂಬುದನ್ನು ಫಲಿತಾಂಶಗಳು ತೋರಿಸಿ ಕೊಟ್ಟಿವೆ.

ಮುಂದೇನು?

ಈ ಬಾರಿ ಈ 'ಚಾರಿತ್ರಿಕ' ಸರಕಾರವನ್ನು ರಚಿಸಲು ಮೋದಿ ಮತ್ತು ಬಿಜೆಪಿಯವರು ತೆಲುಗುದೇಶಂ ಮತ್ತು ಜೆಡಿ(ಯು)



ವ್ಯಂಗ್ಯಚಿತ್ರ:ಪಿ.ಮಹಮ್ಮದ್, ಫೇಸ್ ಬುಕ್


ಪಕ್ಷಗಳನ್ನು ಅವಲಂಬಿಸಲೇ ಬೇಕಾಗಿ ಬಂದಿದೆ. ಈ ಹಿನ್ನೆಲೆಯಲ್ಲಿ ಈ ಚುನಾವಣೆಗಳಲ್ಲಿ ಬಹುಮತ ಪಡೆಯದಿದ್ದರೂ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ ತನ್ನ ಸ್ವಂತ ಪಕ್ಷದ ಲೋಕಸಭಾ ಸದಸ್ಯರು ಮೋದಿಯವರನ್ನು ತಮ್ಮ ನಾಯಕ ಎಂದು ಔಪಚಾರಿಕವಾಗಿಯಾದರೂ ಆರಿಸುವ ಮುನ್ನವೇ ಎನ್‌ಡಿಎ ಅವರನ್ನು ನಾಯಕರನ್ನಾಗಿ ಆರಿಸಿದೆ ಎಂದು ತರಾತುರಿಯಲ್ಲಿ ಘೋಷಿಸಲಾಗಿದೆ.

ಆದರೆ ತಮ್ಮ ಪಕ್ಷದ ಮುಖಂಡರನ್ನೇ ಮೂಲೆಗೆ ತಳ್ಳಿರುವ, ಪ್ರಾದೇಶಿಕ ಪಕ್ಷಗಳನ್ನು ಒಡೆದಾಳುವ ತಂತ್ರವನ್ನು ಅನುಸರಿಸಿಕೊಂಡು ಬಂದಿರುವ ಮೋದಿ–ಷಾ ಜೋಡಿ ಈ ಹೊಸ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತದೆ ಎಂಬ ಸಂದೇಹವನ್ನು ಹಲವು ರಾಜಕೀಯ ವೀಕ್ಷಕರು ವ್ಯಕ್ತಪಡಿಸಿದ್ದಾರೆ.

ಅದೇನೇ ಇರಲಿ, ಮೋದಿ ಸರಕಾರದ ಸರ್ವಾಧಿಕಾರಶಾಹೀ ಆಳ್ವಿಕೆಗೆ ಈಗ ಭಾರತದ ಮತದಾರರು ಅಂಕುಶ ಹಾಕಿರುವುದಂತೂ ನಿಜ. ಇನ್ನು ಮುಂದೆ, ಮೋದಿ–ಷಾ ಹಿಂದಿನ ರೀತಿಯಲ್ಲಿ ಆಳ್ವಿಕೆ ನಡೆಸಲು ಸಾಧ್ಯವಾಗಲಿಕ್ಕಿಲ್ಲ. ಏಕೆಂದರೆ, ಹಾಗೆ ಮಾಡಿದರೆ ಬಿಜೆಪಿಯ ಗತಿಯೇ ತಮಗೂ ಬಂದೀತು ಎಂಬ ಎಚ್ಚರ ಎನ್‌ಡಿಎ ಮೈತ್ರಿಕೂಟದ ಬಿಜೆಪಿಯೇತರ ಮುಖಂಡರಲ್ಲೂ ಇರುತ್ತದೆ.

ಹೊಸ ಸರಕಾರವನ್ನು ರಚಿಸುವ ಮೊದಲೇ ಮೋದಿ ತನ್ನ ಮೂರನೇ ಅಧಿಕಾರವಧಿಯ ಸರಕಾರ ದೊಡ್ಡ ನಿರ್ಣಯಗಳನ್ನು ಕೈಗೊಳ್ಳಲಿದೆ ಎಂದಿದ್ದಾರೆ. ಲೋಕಸಭಾ ಚುನಾವಣೆಗಳ ಮತದಾನ ಅಂತ್ಯವಾಗುತ್ತಿದ್ದಂತೆಯೇ ರಸ್ತೆ ಟೋಲ್ ತೆರಿಗೆಯಲ್ಲಿ ಸಾರಾಸಗಟು 5ರೂ ಹೆಚ್ಚಳವನ್ನು ಘೋಷಿಸಲಾಗಿದೆ. ಅಮುಲ್ ಮತ್ತು ಮದರ್ ಡೈರಿಯ ಹಾಲಿನ ಬೆಲೆಯನ್ನು ಲೀಟರಿಗೆ 2 ರೂ.ಗಳಷ್ಟು ಏರಿಸಲಾಗಿದೆ. 400+ ಸೀಟುಗಳು ಬರುತ್ತವೆ ಎಂಬ ನಿರೀಕ್ಷೆಯಲ್ಲಿ ಈ ಏರಿಕೆಗಳನ್ನು ಮಾಡಲಾಗಿದೆಯೋ ಗೊತ್ತಿಲ್ಲ. ಒಂದು ವೇಳೆ ತೆಲುಗು ದೇಶಂ ಮತ್ತು ಜೆಡಿ(ಯು) ವನ್ನು ಅವಲಂಬಿಸಿರುವ ಹೊಸ ಎನ್‌ಡಿಎ ಸರಕಾರ ಮೋದಿ–ಷಾ ಜೋಡಿಯ ಶೈಲಿಯಲ್ಲೇ ತನ್ನ ಹಿಂದಿನ ಇಂತಹ ಧೋರಣೆಗಳನ್ನೆ ಮುಂದುವರೆಸಿದರೆ, ಅದರ ವಿರುದ್ಧ ವಿಭಿನ್ನ ಜನವಿಭಾಗಗಳ ಪ್ರತಿರೋಧ ಇನ್ನಷ್ಟು ತೀವ್ರಗೊಳ್ಳುತ್ತದೆ ಎಂದು ಸಹಜವಾಗಿಯೇ ನಿರೀಕ್ಷಿಸಬಹುದು. ●

ಎಕ್ಸಿಟ್ ಪೋಲ್ ಟೈಲರ್ಸ್–"ಬಹಳ ದೊಡ್ಡದಾಯಿತು!"



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸೌತ್ ಫಸ್ಟ್

ಕಾರ್ಪೊರೇಟ್ ಮಾಧ್ಯಮಗಳು, ಎಕ್ಸಿಟ್ ಪೋಲ್‌ಗಳು ಮತ್ತು ಶೇರು ಮಾರುಕಟ್ಟೆ

ಜೂನ್ 1ರ 'ಎಕ್ಸಿಟ್ ಪೋಲ್'ಗಳ ನಂತರ ಪ್ರಧಾನ ಮಂತ್ರಿಯಾದಿಯಾಗಿ ಬಿಜೆಪಿ ಮುಖಂಡರು ಬಹಳ ಸಂಭ್ರಮದಲ್ಲಿದ್ದರು, (ಅಥವ ಹಾಗೆಂದು ತೋರಿಸಿಕೊಳ್ಳುತ್ತಿದ್ದರೆ?) 4 ರಂದು ಮತಗಣನೆ ಆಂಭವಾಗುವ ಮೊದಲೇ ಹಲವರು ವಿಜಯೋತ್ಸವದ ಯೋಜನೆ ಮಾಡುತ್ತಿದ್ದರು. ಏಕೆಂದರೆ ಮತದಾನ ಮುಗಿಯುತ್ತಿದ್ದಂತೆ ಮತಗಟ್ಟೆ ಸಮೀಕ್ಷೆ(ಎಕ್ಸಿಟ್ ಪೋಲ್) ನಡೆಸಿದ ಎಲ್ಲ ಕಾರ್ಪೊರೇಟ್ ಮಾಧ್ಯಮಗಳು ಬಿಜೆಪಿ ನೇತೃತ್ವದ ಎನ್‌ಡಿಎ ಗೆ 350+ ಸೀಟುಗಳನ್ನು ಘೋಷಿದವು. ಎನ್‌ಡಿಎಯ ಸ್ಥಾನಗಳನ್ನು ಮೋದಿ–ಷಾ ಡಂಗುರದ 400+ ಹತ್ತಿರಕ್ಕೆ ತರುವ ಪ್ರಯತ್ನದಲ್ಲಿ ಅವು ಪರಸ್ಪರ ಸ್ಪರ್ಧೆಗಿಳಿದಂತೆ ಕಾಣುತ್ತಿತ್ತು.

ಈ ಸ್ಪರ್ಧೆಯಲ್ಲಿನ ಹಲವು ವಿರೋಧಾಭಾಸಗಳು ರಾಜಕೀಯ ವೀಕ್ಷಕರ ಗಮನ ಸೆಳೆದವು. ಉದಾಹರಣೆಗೆ, ಹರ್ಯಾಣದಲ್ಲಿ ಒಟ್ಟು ಸೀಟುಗಳ ಸಂಖ್ಯೆ 10, ಆದರೆ ಝೀ ನ್ಯೂಸ್ ಸಮೀಕ್ಷೆ 16–19 ಸೀಟುಗಳನ್ನು ಕೊಟ್ಟಿತು. ನಾಲ್ಕೇ ಸೀಟುಗಳಿರುವ ಹಿಮಾಚಲ ಪ್ರದೇಶದಲ್ಲೂ ಬಿಜೆಪಿಗೆ 6–8 ಸೀಟುಗಳನ್ನು ಕೊಡಲಾಗಿದೆ. ಬಿಹಾರದಲ್ಲಿ ಎಲ್‌ಜೆಪಿ ಸ್ಪರ್ಧಿಸಿರುವುದೇ 5 ಸ್ಥಾನಗಳಲ್ಲಾದರೂ, ಈ ಸಮೀಕ್ಷೆಗಳಲ್ಲಿ ಒಂದು ಅದಕ್ಕೆ 4–6 ಸ್ಥಾನಗಳನ್ನು ನೀಡಿತು. ಇನ್ನೊಂದೆಡೆಯಲ್ಲಿ ತಮಿಳುನಾಡಿನಲ್ಲಿ ಕೇವಲ 9 ಸ್ಥಾನಗಳಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ 13–15 ಸೀಟುಗಳನ್ನು ಗೆಲ್ಲುತ್ತದೆ ಎಂದು ಇನ್ನೊಂದು ಸಮೀಕ್ಷೆ ಹೇಳಿತು.

ಜೂನ್ 4 ರಂದು ಮತಪೆಟ್ಟಿಗೆಗಳನ್ನು ತೆರೆದು ಮತಗಣನೆ ಆರಂಭವಾಗುತ್ತಿದ್ದಂತೆ ಈ ಎಕ್ಸಿಟ್ ಪೋಲ್‌ಗಳೆಲ್ಲ ಧೂಳೀಪಟವಾದವು.

ಕಳೆದ 10 ವರ್ಷಗಳಲ್ಲಿ ಅಧಿಕಾರಸ್ಥರ ಬೋಪರಾಕು ಹೇಳಿ 'ಗೋದಿ ಮೀಡಿಯ' ಎಂದೇ ಕುಖ್ಯಾತಿ ಗಳಿಸಿರುವ ಕಾರ್ಪೊರೇಟ್ ಮಾಧ್ಯಮಗಳು ಈ ಬಾರಿ ಇನ್ನೂ ಪಾತಾಳಕ್ಕೆ ಇಳಿದವು. ಚುನಾವಣಾ ಪ್ರಚಾರದ ವೇಳೆಯಲ್ಲಿ 80ಕ್ಕೂ ಹೆಚ್ಚು 'ಮೋದಿ ಸಂದರ್ಶನ'ಗಳನ್ನು ಪ್ರಸಾರ ಮಾಡಿ, ಅವುಗಳಲ್ಲಿ ಮೋದಿ ಬಾಯಿಂದ ಉದುರಿದ ನುಡಿಮುತ್ತುಗಳನ್ನು ಭಕ್ತಿಯಿಂದ ಪ್ರಚಾರ ಮಾಡಿದವು. ಅವು ಎಷ್ಟು ಆಭಾಸಕಾರಿಯಾದರೂ, ಹಸಿಸುಳ್ಳುಗಳಾದರೂ ಅವನ್ನು ಪ್ರಶ್ನಿಸದೆ ಪ್ರಸಾರ ಮಾಡಿದವು. ಇದು ಅವುಗಳ ಎಕ್ಸಿಟ್ ಪೋಲ್‌ಗಳಲ್ಲಿ ತಾರಕ್ಕೇರಿ, ಈ ಮಾಧ್ಯಮಗಳು ಹಿಂದೆಂದೂ ಕಾಣದ ಅವಮಾನಕ್ಕೊಳಗಾಗಿವೆ.

ಈ ಎಕ್ಸಿಟ್ ಪೋಲ್‌ಗಳಿಗೆ ಇನ್ನೂ ಹೆಚ್ಚು ಗಂಭೀರವಾದ ಆಯಾಮವೂ ಇದ್ದಂತೆ ಕಾಣುತ್ತದೆ. ಕಳೆದ ಮೂರು ಲೋಕಸಭಾ ಚುನಾವಣೆಗಳ ಎಕ್ಸಿಟ್ ಪೋಲ್ 'ಫಲಿತಾಂಶ'ಗಳು ಪ್ರಕಟವಾಗುತ್ತಿದ್ದಂತೆ ಶೇರು ಮಾರುಕಟ್ಟೆ ಸರಾಸರಿ 3% ಏರಿಕೆಯನ್ನು ಕಂಡಿತ್ತು. ಈ ಬಾರಿ ಜೂನ್ 3ರಂದು ನಿಫ್ಟಿ 50 ಶೇರು ಸೂಚ್ಯಂಕ ಕಳೆದ ಮೂರು ವರ್ಷಗಳಲ್ಲೆ ಕಾಣದಷ್ಟು ಏರಿತು. ಹೂಡಿಕೆದಾರರು 14 ಲಕ್ಷ ಕೋಟಿ ರೂ. ಗಳಿಸಿದರು. ಆದರೆ ಮರುದಿನ ಈ ಸೂಚ್ಯಂಕ ಶೇ.6 ರಷ್ಟು ಕುಸಿದು ಹೂಡಿಕೆದಾರರು ಸುಮಾರು 30 ಲಕ್ಷ ಕೋಟಿ ರೂ. ಕಳಕೊಂಡರು. ಇದು ಎಲ್ಲಕಿಂತ ಹೆಚ್ಚಾಗಿ ತಟ್ಟಿದ್ದು ಅದಾನಿ ಶೇರುಗಳನ್ನು.

ಇನ್ನೂ ಹೆಚ್ಚು ಗಂಭೀರವಾದ ಸಂಗತಿಯೆಂದರೆ, ದೇಶದ ಪ್ರಧಾನ ಮಂತ್ರಿಗಳೂ, ಗೃಹಮಂತ್ರಿಗಳೂ ಇದರಲ್ಲಿ ಶಾಮೀಲಾದಂತೆ ಕಾಣುತ್ತಿರುವುದು. ಅಮಿತ್ ಷಾ "ಶೇರು ಮಾರುಕಟ್ಟೆ ಕುಸಿತಗಳಿಗೂ ಚುನಾವಣೆಗಳಿಗೂ ಸಂಬಂಧವಿರಬಾರದು. ಆದರೂ ಇಂತಹ ಊಹಾಪೋಹಗಳು ಹರಿದಾಡುತ್ತಿದ್ದರೆ, ಜೂನ್ 4ರ ಮೊದಲು ಖರೀದಿಸಿ, ಅದು ತೀವ್ರವಾಗಿ ಏರುತ್ತದೆ" ಎಂದು ಎನ್‌ಡಿಟಿವಿ ಪ್ರೋಫಿಟ್ ಗೆ ನೀಡಿದ ಸಂದರ್ಶನದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಪ್ರಧಾನ ಮಂತ್ರಿಗಳೂ ಇದರಲ್ಲಿ ಹಿಂದೆ ಬೀಳಲಿಲ್ಲ. "ನಮ್ಮ ಹೂಡಿಕೆದಾರರಿಗೆ ನಾವು ಅನುಷ್ಠಾನಕ್ಕೆ ತಂದ ಮಾರುಕಟ್ಟೆ–ಪರ ಸುಧಾರಣೆಗಳ ಬಗ್ಗೆ ಗೊತ್ತೇ ಇದೆ. ಇವು ಪ್ರತಿಯೊಬ್ಬ ಭಾರತೀಯರೂ ಶೇರು ಮಾರುಕಟ್ಟೆಯಲ್ಲಿ ಭಾಗವಹಿಸಬಹುದಾದ ಒಂದು ಗಟ್ಟಿಮುಟ್ಟಾದ, ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಿವೆ. ಜೂನ್4 ರಂದು, ಬಿಜೆಪಿ ದಾಖಲೆ ಅಂಕೆಗಳನ್ನು ಪಡೆಯುತ್ತಿದ್ದಂತೆ ಶೇರು ಮಾರುಕಟ್ಟೆ ಕೂಡ ಹೊಸ ದಾಖಲೆ ಮಟ್ಟಕ್ಕೆ ಏರಲಿವೆ ಎಂದು ನಾನು ವಿಶ್ವಾಸಪೂರ್ವಕವಾಗಿ ಹೇಳಬಲ್ಲೆ" ಎಂದಿದ್ದರು.

ಅಂದರೆ, ಮೋದಿ–ಷಾ ಜೋಡಿಯೂ ಈ ಎಕ್ಸಿಟ್ ಪೋಲ್‌ಗಳನ್ನು ನಂಬಿದ್ದರೇ? ಅಥವ ಕೆಲವರು ಹೇಳುವಂತೆ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಒಂದು ಗರಿಷ್ಟ ಪ್ರಯೋಜನ ಪಡೆಯಲಿ ಎಂದೇ ಎಂಬ ಪ್ರಶ್ನೆ ಈಗ ಎದ್ದಿದೆ.



ಸಂಪತ್ತು ತೆರಿಗೆಗೆ ವಿರೋಧ–ವರ್ಗ ಅಜೆಂಡಾವನ್ನು ಮರೆಮಾಚಲು ಧಾವಿಸಿದ ಬಿಜೆಪಿ

ಬಿಜೆಪಿಯ ಮಟ್ಟಿಗೆ ಸಂಪತ್ತು ಮತ್ತು ಪಿತ್ರಾರ್ಜಿತ ತೆರಿಗೆಯ ವಿರುದ್ಧದ ವಾಗ್ದಾಳಿಯು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಕೊಲ್ಲುತ್ತದೆ: ಇದು ಅಲ್ಪಸಂಖ್ಯಾತರ ವಿರುದ್ಧ ಮತ್ತಷ್ಟು ದ್ವೇಷವನ್ನು ಉತ್ತೇಜಿಸುತ್ತದೆ; ಒಂದು ವಿರೋಧಿ ರಾಜಕೀಯ ಪಕ್ಷವನ್ನು ಕೆಡವಿ ಹಾಕುತ್ತದೆ; ಮತ್ತು ಪಿತ್ರಾರ್ಜಿತ ತೆರಿಗೆಯ ಕಲ್ಪನೆಯನ್ನು ಕೊಲ್ಲುತ್ತದೆ ಮತ್ತು ಆ ಮೂಲಕ ತನ್ನ ಮುಖ್ಯ ಪೋಷಕರಾಗಿರುವ ಅತಿ ಶ್ರೀಮಂತರನ್ನು ರಕ್ಷಿಸುತ್ತದೆ. ಇವೆಲ್ಲವನ್ನೂ ಕೋಮುವಾದಿ–ಫ್ಯಾಸಿಸ್ಟ್ ಮಾದರಿ ಸಂಘಟನೆಗಳಿಗೆ ಅಭ್ಯಾಸವಾಗಿ ಬಿಟ್ಟಿರುವ ಹೊಲಸು ಸುಳ್ಳುಗಳ ಮೂಲಕ ಸಾಧಿಸುವ ಪ್ರಯತ್ನ ಮಾಡಿದೆ.

ಪ್ರೊ.ಪ್ರಭಾತ್ ಪಟ್ನಾಯಕ್



ವ್ಯಂಗ್ಯಚಿತ್ರ: ಸಜಿತ್‌ಕುಮಾರ್, ಡೆಕ್ಕನ್ ಹೆರಾಲ್ಡ್

ಪಿತ್ರಾರ್ಜಿತ ಆಸ್ತಿ ತೆರಿಗೆಯ ಬಗ್ಗೆ ಬಿಜೆಪಿಯ ಧೋರಣೆಯಿಂದ ಫ್ಯಾಸಿಸ್ಟ್ ಸಂಘಟನೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಒಂದು ಪಾಠ ಸಿಗುತ್ತದೆ. ನವ–ಉದಾರವಾದಿ ಯುಗದಲ್ಲಿ ದೇಶದಲ್ಲಿ ಆದಾಯ ಮತ್ತು ಸಂಪತ್ತಿನ ಅಸಮಾನತೆಯಲ್ಲಿ ಅಪಾರ ಹೆಚ್ಚಳವಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ನಿಜಕ್ಕೂ ಇದು ಭಾರತಕ್ಕೆ ಮಾತ್ರ ಸೀಮಿತವಾದ ವಿದ್ಯಮಾನವಲ್ಲ; ಇದು ಅಂತರರಾಷ್ಟ್ರೀಯ ವಿದ್ಯಮಾನವಾಗಿದೆ, ಈ ಬಗ್ಗೆ ಸ್ವಲ್ಪ ಸಮಯದಿಂದ ಉನ್ನತ–ಬೂರ್ಜ್ವಾ ವಲಯಗಳಲ್ಲಿಯೂ ಸಹ ಹೆಚ್ಚು ಚರ್ಚೆ ನಡೆಯುತ್ತಿದೆ. ಉದಾಹರಣೆಗೆ ವರ್ಲ್ಡ್ ಎಕನಾಮಿಕ್ ಫೋರಮ್‌ನಲ್ಲಿ ಅದಕ್ಕೆ ಪ್ರತಿಯಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವನ್ನು ಪದೇ ಪದೇ ಪ್ರಸ್ತಾಪಿಸಲಾಯಿತು.

ವಿಶ್ವದ ಶ್ರೀಮಂತರು ಸಹ ಸಂಪತ್ತು ಮತ್ತು ಆದಾಯದ ಅಸಮಾನತೆಯ ಅನಿಯಂತ್ರಿತ ಬೆಳವಣಿಗೆಯು ಬಂಡವಾಳಶಾಹಿಯ ಭವಿಷ್ಯಕ್ಕೆ ಅಪಾಯವನ್ನುಂಟುಮಾಡುತ್ತದೆ ಎಂದು ಗುರುತಿಸುತ್ತಾರೆ. ಈ ರೀತಿ ಗುರುತಿಸಿದ್ದರಿಂದಲೇ ಕೆಲವು ಸಮಯದ ಹಿಂದೆ ಹಲವಾರು ಅಮೇರಿಕನ್ ಬಿಲಿಯಾಧಿಪತಿಗಳು ತಮ್ಮ ಮೇಲೆ ಮತ್ತು ಇತರ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕೆಂದು ಸೂಚಿಸುವ ಹೇಳಿಕೆಯನ್ನು ನೀಡಲು ಮುಂದಾಗಿದ್ದಾರೆ.

ಆದರೆ ಭಾರತೀಯ ಶ್ರೀಮಂತ ವಿಭಾಗಕ್ಕೆ ಸಮಕಾಲೀನ ಯುಗದಲ್ಲಿ ಕೂಡ ಅಂತಹ ಯಾವುದೇ ದೂರದೃಷ್ಟಿ ಇಲ್ಲವೇ ಇಲ್ಲ. ಧಾರ್ಮಿಕ–ಕೋಮುವಾದಿ ವಿಧಾನಗಳ ಮೂಲಕ ಚುನಾವಣೆಗಳನ್ನು ಗೆಲ್ಲುವ ಫ್ಯಾಸಿಸ್ಟ್ ಮಾದರಿ ಸಂಘಟನೆಯನ್ನು ಬೆಂಬಲಿಸಿ, ಅದರ ಪ್ರಾಬಲ್ಯಕ್ಕೆ ಯಾವುದೇ ಸವಾಲನ್ನು ಹತ್ತಿಕ್ಕಲು ತೀವ್ರ ನಿರಂಕುಶ ಕ್ರಮಗಳನ್ನು ಬಳಸಿದರೆ, ಅದೇ ತಮ್ಮ ಸಂಪತ್ತು ಮತ್ತು ಆದಾಯದ ಪಾಲನ್ನು ಅನಂತವಾಗಿ ಹೆಚ್ಚಿಸಲು ಸಾಕಾಗುತ್ತದೆ ಎಂದು ಅದು ನಂಬಿದೆ. ಜಿ ಡಿ ಬಿರ್ಲಾ ಅವರಂತಹ ಭಾರತೀಯ ಬೂರ್ಜ್ವಾಗಳ ಪ್ರಮುಖ ವ್ಯಕ್ತಿಗಳು ದೇಶದ ಬಂಡವಾಳಶಾಹಿಗಳಿಗೆ ತಮ್ಮ ಸಂಪತ್ತಿನ ಪ್ರದರ್ಶನಕ್ಕೆ ಮುಂದಾಗಬೇಡಿ ಎಂದು ಸಲಹೆ ನೀಡುತ್ತಿದ್ದ ಸಮಯವೊಂದಿತ್ತು.; ಅದು ಜನತೆಯ ಪ್ರತಿಕ್ರಿಯೆ ತಿರುಗೇಟು ಕೊಡಬಹುದು ಎಂಬ ಭಯವು ಬೂರ್ಜ್ವಾಗಳನ್ನು ಕಾಡುತ್ತಿದ್ದ ಅವಧಿ. ಆದರೆ ಈಗ ಹಾಗಿಲ್ಲ. ಇಂದು ಬೂರ್ಜ್ವ ನಾಯಕರಿಗೆ ಅಂತ ಭಯವೇನೂ ಕಾಡುತ್ತಿಲ್ಲ; ಹಿಂದುತ್ವದ ಮಂದಿಯೊಂದಿಗೆ ತಮ್ಮ ಮೈತ್ರಿಯು ತಮ್ಮ ಅಗಾಧವಾದ ಸಂಪತ್ತಿನಿಂದಾಗಿ ಉದ್ಭವಿಸುವ ತಮ್ಮ ಪ್ರಾಬಲ್ಯಕ್ಕೆ ಯಾವುದೇ ಸವಾಲನ್ನು ತಡೆಯುತ್ತದೆ ಎಂಬ ವಿಶ್ವಾಸ ಅವರಲ್ಲಿದೆ. ಹಿಂದುತ್ವದ ಮಂದಿ ಉತ್ತರಾಧಿಕಾರ ತೆರಿಗೆ ಪ್ರಸ್ತಾವನೆಯನ್ನು ನಿಭಾಯಿಸಿದ ರೀತಿಯು ಅವರು ಏಕೆ ಅಷ್ಟು ವಿಶ್ವಾಸ ಹೊಂದಿದ್ದಾರೆ ಎಂಬುದರ ಸುಳಿವು ನೀಡುತ್ತದೆ.

ಸಂಪತ್ತು ತೆರಿಗೆ ಮತ್ತು ಉತ್ತರಾಧಿಕಾರ ತೆರಿಗೆ

ಸಂಪತ್ತಿನ ಅಸಮಾನತೆಯ ಮೇಲೆ ದಾಳಿಯನ್ನು ಪ್ರಾರಂಭಿಸುವ ಅತ್ಯಂತ ಸ್ಪಷ್ಟವಾದ ಮಾರ್ಗವೆಂದರೆ ಕೆಲವು ಆರ್ಥಿಕ ಹಕ್ಕುಗಳನ್ನು ಸ್ಥಾಪಿಸಿ ಬಡವರಿಗೆ ಪ್ರಯೋಜನಕಾರಿಯಾದ ವೆಚ್ಚಗಳಿಗೆ ಹಣಕಾಸು ಒದಗಿಸಲು ಸಂಪತ್ತಿನ ಮೇಲೆ ಹೆಚ್ಚುತ್ತ ಹೋಗುವ ತೆರಿಗೆಯನ್ನು ವಿಧಿಸುವುದು ಎಂಬುದು ಸ್ವಯಂವೇದ್ಯ. ಇಂತಹ ಐದು ಹಕ್ಕುಗಳಿಗೆ ಸಂಪನ್ಮೂಲವನ್ನು ಒದಗಿಸಲು ಭಾರತ ಅತ್ಯಂತ ಶ್ರೀಮಂತ 1% ವಿಭಾಗದ ಮೇಲೆ 2 ಶೇಕಡಾ ಸಂಪತ್ತು ತೆರಿಗೆ ಮತ್ತು ಮೂರನೇ ಒಂದು ಭಾಗದಷ್ಟು ಉತ್ತರಾಧಿಕಾರ ತೆರಿಗೆಯನ್ನು ವಿಧಿಸುವುದರಿಂದ ಸಂಗ್ರಹಿಸಬಹುದು ಎಂದು ನಾವು ಈಗಾಗಲೇ ಲೆಕ್ಕ ಹಾಕಿದ್ದೇವೆ. ಬೆಳೆಯುತ್ತಿರುವ ಅಸಮಾನತೆಯ ಅಪಾಯಗಳ ಕುರಿತು ಈ ಕೆಲವು ಸಮಯದಿಂದ ಬರೆಯುತ್ತಿರುವ ಥಾಮಸ್ ಪಿಕೆಟ್ಟಿ ಮತ್ತು ಅವರ ಸಹಚರರು ಕೂಡ ರೂ.10 ಕೋಟಿಗೂ ಮೀರಿದ ಭಾರತದ ಎಲ್ಲಾ ನಿವ್ವಳ ಸಂಪತ್ತಿನ ಮೇಲೆ ಶೇಕಡಾ 2 ರಷ್ಟು ಸಂಪತ್ತು ತೆರಿಗೆ ಮತ್ತು ಮೂರನೇ ಒಂದು ಭಾಗದ ಉತ್ತರಾಧಿಕಾರ ತೆರಿಗೆಯನ್ನು ಸೂಚಿಸಿದ್ದಾರೆ. ಅವರು ಸಂಪತ್ತು ತೆರಿಗೆಯೊಂದಿಗೆ ಉತ್ತರಾಧಿಕಾರ ತೆರಿಗೆಯನ್ನು ಸೇರಿಸಿರುವುದು ಒಂದು ಮಹತ್ವದ ಸಂಗತಿ: ಏಕೆಂದರೆ ಸಂಪತ್ತು ತೆರಿಗೆ ಅಸಮಾನತೆಯನ್ನು ಕಡಿಮೆ ಮಾಡುವುದರ ಮೇಲೆ ಯಾವುದೇ ಪರಿಣಾಮವನ್ನು ಬೀರಬೇಕಾದರೆ, ಸಂಪತ್ತು ತೆರಿಗೆಯಿಂದ ತಪ್ಪಿಸಿಕೊಳ್ಳುವುದನ್ನು ತಡೆಯಲು ಅದಕ್ಕೆ ಪೂರಕವಾಗಿ ಉತ್ತರಾಧಿಕಾರ ತೆರಿಗೆ ಅಗತ್ಯ.

ಇದನ್ನು ಬೂರ್ಜ್ವಾ ಸೈದ್ಧಾಂತಿಕ ಆಧಾರದ ಮೇಲೆ ಸಹ ಸಮರ್ಥಿಸಬಹುದು: ಏಕೆಂದರೆ ಸಂಪತ್ತು “ಗಳಿಕೆಯ” ಫಲವಾಗಿದೆ ಎಂದು ದನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ ಪಿತ್ರಾರ್ಜಿತ ಸಂಪತ್ತು "ಗಳಿಸಿದ" ಸಂಪತ್ತು ಎಂದು ಯಾವುದೇ ರೀತಿಯಲ್ಲಿ ಹೇಳಿಕೊಳ್ಳಲಾಗುವುದಿಲ್ಲ, ತಂದೆಯ ಸಂಪತ್ತನ್ನು ಆತ "ಗಳಿಸಿದ್ದು" ಎಂದು ಸಮರ್ಥಿಸಿಕೊಂಡರೆ, ಮಗ ಈ ಸಂಪತ್ತನ್ನು ಹೊಂದುವುದನ್ನು ಅದೇ ಆಧಾರದ ಮೇಲೆ ಸಮರ್ಥಿಸಲಾಗುವುದಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪಿತ್ರಾರ್ಜಿತ ಸಂಪತ್ತು ಒಬ್ಬ ವ್ಯಕ್ತಿಗೆ ಕೇವಲ ಅವನ ಜನ್ಮದ ಆಕಸ್ಮಿಕದಿಂದಾಗಿ ಸಿಗುವ ಮೊತ್ತವಾದ್ದರಿಂದ ಅದನ್ನು ಬೂರ್ಜ್ವಾ ಸಿದ್ಧಾಂತದ ದೃಷ್ಟಿಯಿಂದಲೂ ಸಮರ್ಥಿಸಲಾಗುವುದಿಲ್ಲ. ಈ ಕಾರಣದಿಂದಲೇ ಹೆಚ್ಚಿನ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು ಮರಣ ಸುಂಕದ ರೂಪದಲ್ಲಿ ಗಣನೀಯ ಪ್ರಮಾಣದಲ್ಲಿ ಉತ್ತರಾಧಿಕಾರ ತೆರಿಗೆಗಳನ್ನು ವಿಧಿಸಿವೆ ಉದಾಹರಣೆಗೆ ಜಪಾನಿನಲ್ಲಿ ಪಿತ್ರಾರ್ಜಿತ ತೆರಿಗೆ 55 ಶೇ.ದ ವರೆಗೂ ಹೋಗುತ್ತದೆ. ಆದರೆ ಆಘಾತಕಾರಿ ಅಂಶವೆಂದರೆ ಭಾರತದಲ್ಲಿ ಯಾವುದೇ ಪಿತ್ರಾರ್ಜಿತ ತೆರಿಗೆ ಇಲ್ಲ.

ಹುಸಿ, ಕೋಮುವಾದಿ–ಫ್ಯಾಸಿಸ್ಟ್ ಆಧಾರದ ಮೇಲೆ!

ಈ ಪರಿಸ್ಥಿತಿಯ ಅಸಂಬದ್ಧತೆಯನ್ನು ಯಾವುದೇ ರೀತಿಯಲ್ಲಿ ಎಡಪಂಥೀಯರು ಎನ್ನಲಾಗದ ಅಥವಾ ನವ ಉದಾರವಾದಿ ಕಾರ್ಯಸೂಚಿಯನ್ನು ವಿರೋಧಿಸದ ವ್ಯಕ್ತಿಗಳು ಸಹ ಅರಿತುಕೊಂಡಿದ್ದಾರೆ. ವಾಸ್ತವವಾಗಿ ಇತ್ತೀಚೆಗೆ ಪಿತ್ರಾರ್ಜಿತ ತೆರಿಗೆಯನ್ನು ಹೊಂದುವ ಕಲ್ಪನೆಯನ್ನು ಪ್ರಸ್ತಾಪಿಸಿದ್ದು ಒಬ್ಬ ಅನಿವಾಸಿ ತಂತ್ರಜ್ಞಾನ ಪ್ರೇಮಿ ಕಾಂಗ್ರೆಸ್ ವ್ಯಕ್ತಿ, ಸ್ಯಾಮ್ ಪಿತ್ರೋಡಾ; ಆಗ ಬಿಜೆಪಿ ನಾಯಕತ್ವವು ಅವರ ಮೇಲೆ ಒಂದು ಟನ್ ಇಟ್ಟಿಗೆಯಂತೆ ಎರಗಿತು. ಭಾರತೀಯ ಅತಿ ಶ್ರೀಮಂತರು ನಿಸ್ಸಂಶಯವಾಗಿ ಈ ಕಲ್ಪನೆಯಿಂದ ಭಯಭೀತರಾಗುತ್ತಾರೆ; ಮತ್ತು ಬಿಜೆಪಿ, ಅತಿ ಶ್ರೀಮಂತರ ರಕ್ಷಕನಾಗಿ, ಈ ಕಲ್ಪನೆಯ ಮೇಲೆ ಎರಗುವ ಮೂಲಕ ಅವರ ರಕ್ಷಣೆಗೆ ಧಾವಿಸಿದ್ದು ನಿರೀಕ್ಷಿತವೇ. ಆದರೆ ಅದನ್ನು, ಅಂತಹ ತೆರಿಗೆಯನ್ನು ಕಾರ್ಯಗತಗೊಳಿಸಲು ಕಷ್ಟವಾಗುತ್ತದೆ, ಅಥವಾ ಅದು ಬಂಡವಾಳಶಾಹಿಗಳ ಉತ್ಸಾಹವನ್ನು ನಾಶಪಡಿಸುತ್ತದೆ ಅಥವಾ ಜಾಗತಿಕ ಹಣಕಾಸು ಭಯಭೀತರಾಗುವ ಮತ್ತು ಬಂಡವಾಳ ಹೂಡಲು ಹಿಂಜರಿಯುವಂತಹ ವಾತಾವರಣವನ್ನು ಸೃಷ್ಟಿಸುತ್ತದೆ, ಇದು ಭಾರತದ, ಪಾವತಿ ಬಾಕಿ ಪರಿಸ್ಥಿತಿಯನ್ನು ಅನಿಶ್ಚಿತಗೊಳಿಸುತ್ತದೆ ಎಂಬಿತ್ಯಾದಿ ಹಲವಾರು ನಿರೀಕ್ಷಿತ ಆಧಾರಗಳ ಮೇಲೆ ಹಾಗೆ ಮಾಡಲಿಲ್ಲ, ಬದಲಿಗೆ, ಅದು ಹಾಗೆ ಮಾಡಿದ್ದು, ಈ ತೆರಿಗೆಯು ಹಿಂದೂಗಳಿಂದ ಹಣವನ್ನು ಕಸಿದುಕೊಂಡು ಮುಸ್ಲಿಮರಿಗೆ ಹಸ್ತಾಂತರಿಸುತ್ತದೆ ಎಂಬ ಸಂಪೂರ್ಣ ಹುಸಿ ಮತ್ತು ಕೋಮುವಾದಿ–ಫ್ಯಾಸಿಸ್ಟ್ ಆಧಾರದ ಮೇಲೆ! ಈ ಹೊಲಸು ವಿಚಾರಕ್ಕೆ ಭಾವುಕತೆಯನ್ನು ತುಂಬುವ ಸಲುವಾಗಿ, ಅಂತಹ ತೆರಿಗೆಯು “ನುಸುಳುಕೋರರ" ಪ್ರಯೋಜನಕ್ಕಾಗಿ ಹಿಂದೂ ಮಹಿಳೆಯರ ಮಂಗಳಸೂತ್ರಗಳನ್ನು ಕಸಿದುಕೊಳ್ಳುತ್ತದೆ ಎಂದೂ ಸೇರಿಸಿತು!

ಈ ಪ್ರಮಾಣದಲ್ಲಿ ತಪ್ಪು ಮಾಹಿತಿಯ ಈ ಪ್ರಚಾರವು ಸಾಕಷ್ಟು ಅಭೂತಪೂರ್ವವೇ ಸರಿ. ಉತ್ತರಾಧಿಕಾರ ತೆರಿಗೆಯನ್ನು ಖಂಡಿತಾ ಧರ್ಮದ ಆಧಾರದ ಮೇಲೆ ವಿಧಿಸಲಾಗುವುದಿಲ್ಲ. ಇದನ್ನು ಪಿತ್ರಾರ್ಜಿತವಾಗಿ ಬಂದ ಸಂಪತ್ತಿನ ಪ್ರಮಾಣದ ಮೇಲೆ ವಿಧಿಸಲಾಗುತ್ತದೆ. ಧಾರ್ಮಿಕ ಆಧಾರದ ಮೇಲೆ ವಿಧಿಸಲಾಗುವುದು ಎಂಬ ಬಿಜೆಪಿಯ ಮಾತು ಬೆರಗು ಹುಟ್ಟಿಸುವಂತಿದೆ. ಆದರೆ ಇದನ್ನು ತಪ್ಪು ಕಲ್ಪನೆಯಿಂದ ಬಿಜೆಪಿಯು ಹೇಳಿದೆ, ಅದ್ದರಿಂದ ನಂತರ ಅದರ ಬಗ್ಗೆ ಮೌನವಾಗಿರಲು ನಿರ್ಧರಿಸಿದೆ ಎಂಬ ಅನಿಸಿಕೆ ಬಂದರೆ, ಅಂತಹ ಯಾವುದೇ ಅನಿಸಿಕೆಗಳನ್ನು ಹೋಗಲಾಡಿಸಲು ಕೂಡ ಅದು ಕ್ರಮಗಳನ್ನು ತೆಗೆದುಕೊಂಡಿತು: ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್, ಇತ್ತೀಚೆಗೆ ಉತ್ತರಾಧಿಕಾರ ತೆರಿಗೆ ಔರಂಗಜೇಬ್ ವಿಧಿಸಿದ ಜಜಿಯಾ ತೆರಿಗೆಯನ್ನು ಹೋಲುತ್ತದೆ ಎಂದು ಟೀಕಿಸಿದರು. ಜಜಿಯಾ ಧಾರ್ಮಿಕ ಆಧಾರದ ಮೇಲೆ ವಿಧಿಸಲಾದ ತೆರಿಗೆಯಾಗಿತ್ತು.

ಉತ್ತರಾಧಿಕಾರ ತೆರಿಗೆ ಎಂದರೆ ಏನು ಎಂಬುದರ ಬಗ್ಗೆ ನರೇಂದ್ರ ಮೋದಿಯವರಿಗಾಗಲಿ ಅಥವಾ ಆದಿತ್ಯನಾಥರವರಿಗಾಗಲಿ ತಿಳಿದಿಲ್ಲ ಎಂದೇನೂ ಅಲ್ಲ. ಮುಸ್ಲಿಮರಿಗೆ ಅನುಕೂಲವಾಗುವಂತೆ ಹಿಂದೂ ಸಂಪತ್ತಿಗೆ ತೆರಿಗೆ ವಿಧಿಸಲಾಗುತ್ತಿದೆ ಎಂಬ ಈ ವಿಷಯಕ್ಕೆ ಅವರು ಅಂಟಿಕೊಂಡಿರುವುದು ಒಂದು ಉದ್ದೇಶಪೂರ್ವಕ ಸುಳ್ಳಿನ ಪ್ರಚಾರಕ್ಕಾಗಿ. ಒಂದು ಸುಳ್ಳು ಧಾರ್ಮಿಕ ಕಥನದ ಮೂಲಕ ಸೂಪರ್–ಶ್ರೀಮಂತರನ್ನು ಹೇಗೆ ರಕ್ಷಿಸಲಾಗುತ್ತಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುವುದರೊಂದಿಗೇ ಇದು ಒಂದು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ದ್ವೇಷವನ್ನು ಬಡಿದೆಬ್ಬಿಸಲಿಕ್ಕಾಗಿ ಮತ್ತು ಒಂದು ವಿರೋಧಿ ರಾಜಕೀಯ ಪಕ್ಷದ ವಿರುದ್ಧ ಅದು ಅಲ್ಪಸಂಖ್ಯಾತರ ತುಷ್ಟೀಕರಣಲ್ಲಿ ತೊಡಗಿದೆ ಎಂಬ ಅಪಪ್ರಚಾರಕಕಾಗಿ ಎಂಬುದನ್ನೂ ಕಾಣಬಹುದಾಗಿದೆ.

ಆದ್ದರಿಂದ ಬಿಜೆಪಿಯ ಮಟ್ಟಿಗೆ ಪಿತ್ರಾರ್ಜಿತ ತೆರಿಗೆಯ ವಿರುದ್ಧದ ವಾಗ್ದಾಳಿಯು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಕೊಲ್ಲುತ್ತದೆ: ಇದು ಈ ಅಲ್ಪಸಂಖ್ಯಾತರ ವಿರುದ್ಧ ಮತ್ತಷ್ಟು ದ್ವೇಷವನ್ನು ಉತ್ತೇಜಿಸುತ್ತದೆ; ಒಂದು ವಿರೋಧಿ ರಾಜಕೀಯ ಪಕ್ಷವನ್ನು ಕೆಡವಿ ಹಾಕುತ್ತದೆ; ಮತ್ತು ಪಿತ್ರಾರ್ಜಿತ ತೆರಿಗೆಯ ಕಲ್ಪನೆಯನ್ನು ಕೊಲ್ಲುತ್ತದೆ ಮತ್ತು ಆ ಮೂಲಕ ತನ್ನ ಮುಖ್ಯ ಪೋಷಕರಾಗಿರುವ ಅತಿ ಶ್ರೀಮಂತರನ್ನು ರಕ್ಷಿಸುತ್ತದೆ. ಇವೆಲ್ಲವನ್ನೂ ಕೋಮುವಾದಿ–ಫ್ಯಾಸಿಸ್ಟ್‌ಮಾದರಿ ಸಂಘಟನೆಗಳಿಗೆ ಅಭ್ಯಾಸವಾಗಿ ಬಿಟ್ಟಿರುವ ಹೊಲಸು ಸುಳ್ಳುಗಳ ಮೂಲಕ ಸಾಧಿಸುವ ಪ್ರಯತ್ನ ಮಾಡಿದೆ.

ವರ್ಗ ಹೋರಾಟಗಳ ಮುನ್ಸೂಚನೆ

ಆದಾಗ್ಯೂ ಇದು ಮತ್ತೊಂದು ಪ್ರಶ್ನೆಯನ್ನು ಎತ್ತುತ್ತದೆ. ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಆಧಾರವಾಗಿರುವ ಪ್ರಮೇಯವೆಂದರೆ ಜನರು ಸಾರ್ವಜನಿಕವಾಗಿ ಇರುವ ಎಲ್ಲಾ ಸಮಸ್ಯೆಗಳನ್ನು ಗ್ರಹಿಸಲು ಮತ್ತು ಅವುಗಳಲ್ಲಿ ಪ್ರತಿಯೊಂದರ ಬಗ್ಗೆ ತಿಳುವಳಿಕೆಯುಳ್ಳ ಮತ್ತು ಬುದ್ಧಿವಂತ ನಿಲುವುಗಳನ್ನುತೆಗೆದುಕೊಳ್ಳಲು ಸಮರ್ಥರಾಗಿದ್ದಾರೆ ಎಂಬುದು. ಆದರೆ ಪುಟ 14 ಕ್ಕೆ

ಹಿಂದಿ ರಾಜ್ಯಗಳಲ್ಲಿ ಬಿಜೆಪಿಗೆ ಭಾರೀ ಹಿನ್ನಡೆ......

ಪುಟ 9 ರಿಂದ

ಪ್ರಯೋಜನ ಪಡೆದು ಬಿಜೆಪಿ ರಾಜಕಿಐ ಅಸ್ಥಿರತೆ ತಂದಿದೆ. ಈ ಹಿನ್ನೆಲೆಯಲ್ಲಿ ಈ ಫಲಿತಾಂಶ ಬಂದಿದೆ. ಆದರೂ ಹಿಂದಿಗಿಂತ ಬಿಜೆಪಿ ಭಾರಿ ಪ್ರಮಾಣಧಲ್ಲಿ (ಶೇ.12.7%) ಮತಗಳಿಕೆ ಕಳೆದುಕೊಂಡಿದೆ ಎಂದು ಗಮನಿಸಬೇಕು. ಕಾಂಗ್ರೆಸ್ ಮತಗಳಿಕೆಯನ್ನು ಶೇ.14.2ರಷ್ಟು ಏರಿಸಿಕೊಂಡಿದೆ.

ಹಿಮಾಚಲ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	4	0	56.4	-12.7
ಇಂಡಿಯಾ	0	0	41.7	+14.2
ಇತರೆ	0	0	1.9	-1.5

ಉತ್ತರಾಖಂಡ

ಉತ್ತರಾಖಂಡದ ಚುನಾವಣೆಗಳಲ್ಲಿ ಹಿಂದಿನಂತೆ ಬಿಜೆಪಿ 'ಕ್ಲೀನ್ ಸ್ವೀಪ್' ಮಾಡಿದರೂ ಅದರ ಮತಗಳಿಕೆ ಬಾರೀ ಪ್ರಮಾಣದಲ್ಲಿ (12.7ರಷ್ಟು) ಕಡಿತವಾಗಿದೆ ಎಂಬುದನ್ನು ಗಮನಿಸಬೇಕು. ಉತ್ತರಾಖಂಡದಲ್ಲಿ ಬಿಜೆಪಿ ರಾಜ್ಯ ಸರಕಾರವಿದೆ. ಕಾಂಗ್ರೆಸ್ ಮತಗಳಿಕೆಯನ್ನು ಭಾರೀ ಪ್ರಮಾಣದಲ್ಲಿ (ಶೇ.14.4ರಷ್ಟು) ಏರಿಸಿಕೊಂಡಿದೆ.

ಉತ್ತರಾಖಂಡ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	5	0	56.4	-12.7
ಇಂಡಿಯಾ	0	0	41.7	+14.4
ಇತರೆ	0	0	1.9	-1.7

ಬಿಜೆಪಿ ಸೀಟು ಮತಗಳಿಕೆ ಎರಡೂ ಏರಿಸಿಕೊಂಡ 2 ರಾಜ್ಯಗಳು

ಛತ್ತಿಸಗಢ

ಛತ್ತಿಸಗಡ ದಲ್ಲಿ ಬಿಜೆಪಿ ಈ ಚುನಾವಣೆಯಲ್ಲಿ ಸೀಟುಗಳಿಕೆಯನ್ನೂ (9ರಿಂದ 10ಕ್ಕೆ) ಮತಗಳಿಕೆ ಪ್ರಮಾಣವನ್ನೂ (ಶೇ/1.6ರಷ್ಟು) ಏರಿಸಿಕೊಂಡಿದೆ. ಇತ್ತೀಚಿಗಿನ ವಿಧಾನಸಭೆಯ ಚುನಾವಣೆಯಲ್ಲೂ ಕಾಂಗ್ರೆಸ್ ಸೋತಿದ್ದು2 ಸೀಟುಗಳಿಂದ 1 ಸೀಟಿಗೆ ಇಳಿದಿದೆ. ಮೃದು ಹಿಂದುತ್ವ ಧೋರಣೆ ಅನುಸರಿಸಿದ್ದರಿಂದ ಬಿಜೆಪಿ ಗೆ ಸವಾಲು ಹಾಕಲು ಕಾಂಗ್ರೆಸ್ ಗೆ ಸಾಧ್ಯವಾಗಿಲ್ಲ.

ಛತ್ತಿಸಗಢ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	10	1	52.7	+1.6
ಇಂಡಿಯಾ	1	-1	41.3	+0.1
ಇತರೆ	0	0	6.0	-1.7

ಮಧ್ಯಪ್ರದೇಶ

ಮಧ್ಯಪ್ರದೇಶದಲ್ಲಿ ಸಹ ಬಿಜೆಪಿ ಈ ಚುನಾವಣೆಯಲ್ಲಿ ಸೀಟುಗಳಿಕೆಯನ್ನೂ (28ರಿಂದ 29ಕ್ಕೆ) ಮತಗಳಿಕೆ ಪ್ರಮಾಣವನ್ನೂ ಸ್ವಲ್ಪವಾದರೂ (ಶೇ.1.2ರಷ್ಟು) ಏರಿಸಿಕೊಂಡಿದೆ. ಇತ್ತೀಚಿಗಿನ ವಿಧಾನಸಭೆಯ ಚುನಾವಣೆಯಲ್ಲೂ ಕಾಂಗ್ರೆಸ್ ಸೋತಿದ್ದುಇದ್ದ (ಕಮಲನಾಥ್ ಅವರ ಚಿಂದವಾರ) 1 ಸೀಟನ್ನೂ ಕಳೆದುಕೊಂಡಿದೆ. ಮೃದು ಹಿಂದುತ್ವ ಧೋರಣೆ ಅನುಸರಿಸಿದ್ದರಿಂದ ಬಿಜೆಪಿ ಗೆ ಸವಾಲು ಹಾಕಲು ಕಾಂಗ್ರೆಸ್ ಗೆ ಸಾಧ್ಯವಾಗಿಲ್ಲ. ಕಮಲನಾಥ್ ಅವರ ದುರ್ಬಲ ನಾಯಕತ್ವ, ಬಣಸಂಘರ್ಷ ಹಾಗೂ ವಿಧಾನಸಭೆ ಸೋಲಿನಿಂದ ಕಾಂಗ್ರೆಸ್ ಇನ್ನೂ ಚೇತರಿಸಿಕೊಂಡಿಲ್ಲ. ಇತರರಲ್ಲಿ ಬಿ.ಎಸ್.ಪಿ ಮತ್ತಿತರ ಸಣ್ಣ ಪಕ್ಷಗಳು ಪಕ್ಷೇತರರು ಇದ್ದಾರೆ. ಅವರೂ ಮತಪ್ರಮಾಣ ಏರಿಸಿಕೊಂಡಿದ್ದು, ಕಾಂಗ್ರೆಸ್ ಶೇ.2.1 ಮತ ಕಳೆದುಕೊಂಡಿದೆ.

ಮಧ್ಯಪ್ರದೇಶ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ– ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	29	1	59.3	+1.2
ಇಂಡಿಯಾ	0	-1	32.9	-2.1
ಇತರೆ	0	0	7.7	+0.9

ಲೋಕಸಭೆಯಲ್ಲಿ ಮುಸ್ಲಿಂ ಪ್ರಾತಿನಿಧ್ಯ ಕುಸಿತ ಕಾಂಗ್ರೆಸ್‌ನಿಂದ ಗರಿಷ್ಠ ಏಳು ಜನರ ಗೆಲುವು ಬಿಜೆಪಿಯಿಂದ ಶೂನ್ಯ

ದೇಶದಾದ್ಯಂತ 18ನೇ ಲೋಕಸ3ಭೆಗೆ ಒಟ್ಟು 543 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 24 ಮುಸ್ಲಿಂ ಅಭ್ಯರ್ಥಿಗಳು ಮಾತ್ರ ಆಯ್ಕೆಯಾಗಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ದೇಶಾದ್ಯಂತ ವಿವಿಧ ಪಕ್ಷಗಳಿಂದ 78 ಅಭ್ಯರ್ಥಿಗಳು ಕಣಕ್ಕಿಳಿದಿದ್ದರು. 2019ರ ಲೋಕಸಭೆ ಚುನಾವಣೆಯಲ್ಲಿ 115 ಮುಸ್ಲಿಂ ಅಭ್ಯರ್ಥಿಗಳು ಸ್ಪರ್ಧಿಸಿ 27 ಮಂದಿ ಆಯ್ಕೆಯಾಗಿದ್ದರು. ಈ ಬಾರಿ ಬಿಜೆಪಿಯಿಂದ ಒಬ್ಬ ಅಭ್ಯರ್ಥಿಯೂ ಆಯ್ಕೆಯಾಗದಿರುವುದು ಗಮನಾರ್ಹ.

ಕಾಂಗ್ರೆಸ್‌ನಿಂದ ಹೆಚ್ಚು

ಕಾಂಗ್ರೆಸ್‌ನಿಂದ ಏಳು ಅಭ್ಯರ್ಥಿಗಳು ಗೆದ್ದಿದ್ದಾರೆ. ಯುಪಿಯಲ್ಲಿ ಪ್ರಮುಖ ವಿರೋಧ ಪಕ್ಷವಾದ ಸಮಾಜವಾದಿ ಪಕ್ಷದ (ಎಸ್‌ಪಿ) ನಾಲ್ವರು, ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ)ಯ ಐವರು ಸದಸ್ಯರು ಲೋಕಸಭೆಗೆ ಆಯ್ಕೆಯಾದರು. ಕಾಂಗ್ರೆಸ್ ಮಿತ್ರಪಕ್ಷಗಳಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (IUML) ನಿಂದ ಮೂರು ಮತ್ತು ನ್ಯಾಷನಲ್ ಕಾನ್ಫರೆನ್ಸ್ (NC) ನಿಂದ ಇಬ್ಬರು ಗೆದ್ದಿದ್ದಾರೆ. ಎಂಐಎಂನಿಂದ ಒಬ್ಬರು ಮತ್ತು ಇಬ್ಬರು ಸ್ವತಂತ್ರರು ಗೆದ್ದು 18ನೇ ಲೋಕಸಭೆಗೆ ಹೋಗಿದ್ದಾರೆ.

ಸಂಪತ್ತು ತೆರಿಗೆಗೆ ವಿರೋಧ.....

ಪುಟ 13 ರಿಂದ

ಜನರನ್ನು ಉದ್ದೇಶಪೂರ್ವಕವಾಗಿ ಅಜ್ಞಾನಿಯಾಗಿ ಇರಿಸಲಾಗುವ ಒಂದು ಶೋಷಣೆಯ ಸಮಾಜದಲ್ಲಿ ಇಂತಹ ಪ್ರಶ್ನೆಗಳನ್ನು ಸಾರ್ವಜನಿಕವಾಗಿ ಚರ್ಚಿಸುವುದು ಮತ್ತು ಅವರಿಗೆ ವಿವರಿಸುವುದು ಮುಖ್ಯವಾಗುತ್ತದೆ. ಇದರಲ್ಲಿ ಮಾರ್ಕ್ಸ್‌ವಾದಿ ಪರಂಪರೆಯ ಪ್ರಕಾರವಂತೂ ಒಂದು ಪ್ರಶ್ನೆಯನ್ನು ಸಿದ್ಧಾಂತೀಕರಿಸಿ ಅದನ್ನು ದುಡಿಯುವ ಜನರ ನಡುವೆ ಒಯ್ಯುವುದು ತಮ್ಮ ವರ್ಗನೆಲೆಯಿಂದ ಹೊರಬಂದಿರುವ ಬುದ್ಧಿಜೀವಿಗಳು ವಹಿಸಬೇಕಾದ ಪ್ರಮುಖ ಪಾತ್ರವಾಗಿದೆ. ಆದರೆ ಯಾವುದನ್ನೇ ಅಗಲಿ ವರ್ಗದೃಷ್ಟಿಯಿಂದ ನೋಡದ ಅನೇಕ ಬೂರ್ಜ್ವಾ ಬರಹಗಾರರು ಕೂಡ, ಶಿಕ್ಷಿತ ಮತ್ತು ಪ್ರಜ್ಞಾವಂತ ಬುದ್ಧಿಜೀವಿ ವಿಭಾಗ ಜನರ ಮುಂದೆ ಈ ಪ್ರಶ್ನೆಗಳನ್ನಿಟ್ಟು ಆ ಮೂಲಕ ಪ್ರಜಾಪ್ರಭುತ್ವ ಸರಿಯಾಗಿ ಕಾರ್ಯನಿರ್ವಹಿಸುವಂತೆ ವಿಭಾಗಮಾಡಬೇಕಾದ ಅಗತ್ಯವನ್ನು ಗುರುತಿಸುತ್ತಾರೆ. ಉದಾಹರಣೆಗೆ ಬೂರ್ಜ್ವಾ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ ಪ್ರಜಾಪ್ರಭುತ್ವದ ಕಾರ್ಯಚಟುವಟಿಕೆಗೆ "ವಿದ್ಯಾವಂತ ಬೂರ್ಜ್ವಾ" ವರ್ಗದ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದ್ದಾರೆ. ಕೇನ್ಸ್‌ನ ಪರಿಕಲ್ಪನೆಯ ಪ್ರಕಾರ, ಉತ್ತರಾಧಿಕಾರ ತೆರಿಗೆಯು ಧರ್ಮದ ಆಧಾರದ ಮೇಲೆ ವಿಧಿಸಲಾದ ತೆರಿಗೆಯಲ್ಲ ಎಂದು ಜನರಿಗೆ ನಿಖರವಾಗಿ ವಿವರಿಸುವುದು "ಶಿಕ್ಷಿತ ಬೂರ್ಜ್ವಾ" ವಿಭಾಗದ ಮುಂದಿರುವ ಕಾರ್ಯಭಾರ. ಆದ್ದರಿಂದ ರಾಜಕೀಯದಲ್ಲಿ ಫ್ಯಾಸಿಸ್ಟ್ ಮಾದರಿಯ ವ್ಯಕ್ತಿಗಳು ತಮ್ಮ ಉದ್ದೇಶಪೂರ್ವಕವಾದ ಸುಳ್ಳು ಕಥನಗಳೊಂದಿಗೆ ಮೇಲೆದ್ದು ಬಂದಿರುವುದು ಇಂತಹ "ಶಿಕ್ಷಿತ ಬೂರ್ಜ್ವಾ" ವಿಭಾಗ ಅಂಚಿಗೆ ತಳ್ಳಲ್ಪಟ್ಟಿರುವ ಅಥವ ಅದು ತನ್ನ ಜವಾಬ್ದಾರಿಯಿಂದ ನುಣಚಿಕೊಂಡಿರುವ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಕೇನ್ಸ್‌ನ ಪರಿಕಲ್ಪನೆಯ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿದ್ದರೂ, "ಶಿಕ್ಷಿತ ಬೂರ್ಜ್ವಾ" ವಿಭಾಗ ದುರ್ಬಲಗೊಂಡಿರುವುದು ಅಥವ ಕಾಣೆಯಾಗಿರುವುದು ವಾಸ್ತವದಲ್ಲಿ ಕಣ್ಣಿಗೆ ಕಾಣುವ ಒಂದು ವಿದ್ಯಮಾನ ಎಂಬುದನ್ನು ನಿರಾಕರಿಸಲಾಗದು. ಬಿಜೆಪಿಯ ಘಟಾನುಘಟಿಗಳು ಪಿತ್ರಾರ್ಜಿತ ತೆರಿಗೆಯನ್ನು ಧರ್ಮಾಧಾರಿತ ತೆರಿಗೆಯನ್ನಾಗಿ ಮಂಡಿಸಿದರೂ ಮಾಧ್ಯಮಗಳು ಇದರ ಬಗ್ಗೆ ಸದ್ದು ಮಾಡದೆ ಅವರು ಪಾರಾಗುವಂತಾಗಿರುವುದು ಈ ಕಣ್ಮರೆಯನ್ನು ಸೂಚಿಸುತ್ತದೆ; ವಾಸ್ತವವಾಗಿ "ಗೋದಿ" ಮಾಧ್ಯಮ ವೆಂಬುದು ಇಂತಹ ಕಣ್ಮರೆಯ ಸಂಕೇತವೇ ಆಗಿದೆ.

ಪ್ರಶ್ನೆಯೆಂದರೆ, ಇದು ಏಕೆ ಸಂಭವಿಸುತ್ತದೆ? "ಶಿಕ್ಷಿತ ಬೂರ್ಜ್ವಾ" ಎಂಬುದು ಬೂರ್ಜ್ವಾಗಳ ಒಂದು ವಿಭಾಗ ತಾನೇ? ಪ್ರಜಾಸತ್ತಾತ್ಮಕ ರಾಜಕೀಯವನ್ನು ಹೊಂದಿರುವ ಬೂರ್ಜ್ವಾ ಸಮಾಜವು ತೆಗೆದುಕೊಳ್ಳಬೇಕಾದ ದಿಕ್ಕಿನ ಬಗ್ಗೆ ತನ್ನದೇ ಮನಸ್ಸಿನಲ್ಲಿ ಸ್ಪಷ್ಟತೆ ಪಡೆದಿರುವಾಗ ಮಾತ್ರವೇ ಅದು ಕೇನ್ಸ್ ಪರಿಭಾವಿಸಿದ ಪಾತ್ರವನ್ನು ವಹಿಸಬಲ್ಲದು. ಅದು ಪ್ರಜಾಪ್ರಭುತ್ವದ ಒಂದು ಸ್ತಂಭವಾಗಿ ದುರ್ಬಲಗೊಳ್ಳುವುದು ಮತ್ತು ಅದರಿಂದಾಗಿ ಫ್ಯಾಸಿಸ್ಟ್ ಮಾದರಿ ಯೋಜನೆಯನ್ನು ಒಪ್ಪಿಕೊಂಡಿರುವುದು, ನವ–ಉದಾರವಾದಿ ಬಂಡವಾಳಶಾಹಿ ಮುಂದೆ ದಾರಿಯಿಲ್ಲದಂತ ಸ್ಥಿತಿಯನ್ನು ತಲುಪಿದೆ ಎಂಬುದನ್ನು ಸೂಚಿಸುತ್ತದೆ. ಈ ಸ್ಥಿತಿಯನ್ನು ಬಂಡವಾಳಶಾಹಿ ತಪ್ಪಿಸಬೇಕಾಗಿದೆ ಎಂದು ಕೇನ್ಸ್ ಬಯಸಿದ್ದರು. ಇದು ಪ್ರಮುಖ ವರ್ಗಹೋರಾಟಗಳು ಮುಂಬರಲಿದೆ ಎಂಬುದರ ಸೂಚನೆಯೂ ಆಗಿದೆ.

ಅನು: ಕೆ.ವಿ.

30 ಲಕ್ಷ ಕೋಟಿ ರೂ. ಕಳೆದುಕೊಂಡ.....

ಪುಟ 11 ರಿಂದ

ಮಟ್ಟ, ಆದಾಯದ ಅಸಮಾನತೆ ಇತ್ಯಾದಿಗಳು ಗಂಭೀರ ಸವಾಲುಗಳಾಗಿವೆ. ಪಿರಮಿಡ್‌ನ ತಳಭಾಗದ ಕಲ್ಯಾಣ ಅಗತ್ಯಗಳನ್ನು ತಿಳಿಸದೆ ಯಾವುದೇ ಸರ್ಕಾರವು ಮುಕ್ತ–ಮಾರುಕಟ್ಟೆಗಳು ಮತ್ತು ಅನಿಯಂತ್ರಿತ ಉದಾರೀಕರಣದ ಕುರಿತು ಉಪನ್ಯಾಸಗಳನ್ನು ನೀಡಲು ಸಾಧ್ಯವಿಲ್ಲ. ಇದು ನಿಜವಾಗಿಯೂ ಜವಾಬ್ದಾರಿಯುತ ಮತ್ತು ಸಹಾನುಭೂತಿಯ ಬಂಡವಾಳಶಾಹಿಯ ಯುಗವಾಗಿದೆ. ವಾಸ್ತವವಾಗಿ, ಇವರ ಬಲಪಂಥೀಯ ನೆಚ್ಚಿನ ಮೋದಿ ಅವರು ಮನರೇಗಾ (MNREGA), ಆಹಾರ ಭದ್ರತೆ (ಐದು ವರ್ಷಗಳವರೆಗೆ ಶೇ. 60 ಭಾರತೀಯರಿಗೆ ಐದು ಕೆಜಿ ಆಹಾರ ಧಾನ್ಯಗಳು) ಇತ್ಯಾದಿಗಳ ಯುಪಿಎ ಸರ್ಕಾರದ ಯೋಜನೆಗಳನ್ನು ಮೋದಿ ಸರ್ಕಾರ ಅನುಸರಿಸಿದೆ. ಹಾರ್ವರ್ಡ್ ಮತ್ತು ಸ್ಟ್ಯಾನ್ ಫೋರ್ಡ್‌ನಲ್ಲಿರುವಾಗ ಟ್ರಿಕಲ್–ಡೌನ್ ಅರ್ಥಶಾಸ್ತ್ರವು ಉತ್ತಮ ಬೌದ್ಧಿಕ ಸಿದ್ಧಾಂತವಾಗಿದೆ, ಆದರೆ ಇವರು ಭಾರತೀಯ ರೈತರು, ಗ್ರಾಮೀಣ ಮತ್ತು ನಗರ ಬಡವರು ಮತ್ತು ಭೂರಹಿತ ಕಾರ್ಮಿಕರನ್ನು ಕೇಳಿ ತಿಳಿಯಬೇಕಿದೆ.

ಲಕ್ಷಾಂತರ ಕೋಟಿ ಸಾಲ ಮನ್ನಾ...
ಕಾರ್ಪೊರೇಟ್ ತೆರಿಗೆ ಕಡಿತ...

ಕಳೆದ 10 ವರ್ಷಗಳಲ್ಲಿ ದೊಡ್ಡ ಸುಧಾರಣೆಗಳು ಯಾವುವು? ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಕಾರ್ಪೊರೇಟ್ ಕಂಪನಿಗಳು ಬೃಹತ್ ಪ್ರಮಾಣದ ಸಾಲ ಪಡೆಯುತ್ತಿವೆ. 16 ಲಕ್ಷ ಕೋಟಿಯ ವಸೂಲಾಗದ ಸಾಲ ಮನ್ನಾ(ಎನ್‌ಪಿಎ) ಮನ್ನಾ ಮಾಡಿರುವುದೇ? ಅಥವಾ ಕಾರ್ಪೊರೇಟ್‌ಗಳು ಮೋದಿ ಸರ್ಕಾರದಿಂದ ವಾರ್ಷಿಕವಾಗಿ 1,45,000 ಕೋಟಿ ರೂಪಾಯಿಗಳ ವಾರ್ಷಿಕ ಕಾರ್ಪೊರೇಟ್ ತೆರಿಗೆ ಕಡಿತವನ್ನು ಪಡೆದುಕೊಂಡಿರುವುದೇ? ಇದಕ್ಕಾಗಿ, ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸುವವರು ಮೋದಿ ಮತ್ತೆ ಅಧಿಕಾರಕ್ಕೆ ಬರುತ್ತಾರೆ ಎಂದು ರೋಮಾಂಚನಗೊಂಡಿದ್ದಾರೆಯೇ?

ಒಟ್ಟು ಸ್ಥಿರ ಬಂಡವಾಳ (ಗ್ರಾಸ್ ಫಿಕ್ಸೆಡ್ ಕ್ಯಾಪಿಟಲ್) ರಚನೆಯು ಜಿಡಿಪಿಯ ಶೇ. 30 ಕ್ಕಿಂತ ಕಡಿಮೆ ಏಕೆ? (ಯುಪಿಎ ಅವಧಿಯಲ್ಲಿ ಅದು ಶೇ.35 ಮುಟ್ಟಿತ್ತು). ಭಾರತದ GDP ಯಲ್ಲಿ ಉತ್ಪಾದನಾ ಪಾಲು GDP ಯ ಶೇ. 14ಕ್ಕೆ ಏಕೆ ಕುಸಿದಿದೆ? ಮೇಕ್ ಇನ್ ಇಂಡಿಯಾದಲ್ಲಿಇವರ ಪಾಲು ಕಡಿಮೆ.

ಜನರ ಹಣದಲ್ಲಿ ಜೂಜು

ಇವರು ಜನರ ಹಣದಲ್ಲಿ ವ್ಯವಹಾರ ಮಾಡಿ ಸಾವಿರಾರು ಕೋಟಿ ಗಳಿಸುವುದು, ಸಾಲ ಮಾಡಿ ಬ್ಯಾಂಕುಗಳನ್ನು ಮುಳುಗಿಸುವುದು, ಬ್ಯಾಂಕುಗಳನ್ನು ಉಳಿಸಲು ಸರ್ಕಾರ ಸಾರ್ವಜನಿಕ ಹಣವನ್ನು ಬ್ಯಾಂಕುಗಳಿಗೆ ಬಂಡವಾಳವಾಗಿ ಮತ್ತೆ ನೀಡುವುದು ಸಾಮಾನ್ಯವಾಗಿದೆ. ಕಾರ್ಪೊರೇಟ್ ಕಂಪನಿಗಳ ಬಾಕಿಯನ್ನು ಮನ್ನಾ ಮಾಡುತ್ತಿರುವುದೇಕೆ? ಅವರ ಸಾಲವನ್ನು ಏಕೆ ವಸೂಲಿ ಮಾಡಬಾರದು? ಬ್ಯಾಂಕುಗಳನ್ನು ಏಕೆ ಖಾಸಗೀಕರಣಗೊಳಿಸಲಾಗುತ್ತಿದೆ? ಜನರು ಪ್ರಜ್ಞಾಪೂರ್ವಕವಾಗಿ ಈ ಪ್ರಶ್ನೆಗಳನ್ನು ಕೇಳಿ, ಇದನ್ನು ನಿಲ್ಲಿಸುವಂತೆ ಸರ್ಕಾರಗಳ ಮೇಲೆ ಒತ್ತಡ ತರುವವರೆಗೆ, ಈ ವಂಚನೆಯು ವಿಪರೀತವಾಗಿ ನಡೆಯುತ್ತಲೇ ಇರುತ್ತದೆ!! ಪ್ರಜೆಗಳ ಹಣದಿಂದ ಕೆಲವೇ ಮಂದಿ 'ದೊಡ್ಡವರು' ಷೇರುಪೇಟೆಯಲ್ಲಿ ಜೂಜಾಡುತ್ತಲೇ ಇರುತ್ತಾರೆ!! ಷೇರುಪೇಟೆಯ ಅಬ್ಬರವನ್ನು ಕಂಡು ನಿಜವಾದ ಆರ್ಥಿಕತೆ ಬೆಳೆಯುತ್ತಿದೆ ಎಂಬ ಭ್ರಮೆಯಲ್ಲಿರುವವರು ಈ ಸತ್ಯಗಳನ್ನು ಅರಿತುಕೊಳ್ಳಬೇಕು.

ಬಿಜೆಪಿ ಮತ್ತು ಅದರ ನಾಯಕತ್ವದ ಎನ್.ಡಿ.ಎ ಕೂಟಕ್ಕೆ ಹಿಂದಿ ರಾಜ್ಯಗಳನ್ನು ಬಿಟ್ಟರೆ ಅತ್ಯಂತ ಹೆಚ್ಚು ನಷ್ಟವಾಗಿರುವುದು ಪಶ್ಚಿಮ ಪ್ರದೇಶದಲ್ಲಿ, ಬಿಜೆಪಿ/ಎನ್.ಡಿ.ಎ ಗೆ ಮಹಾರಾಷ್ಟ್ರದಲ್ಲಿ ಆದ ಭಾರೀ ನಷ್ಟವನ್ನು ಗುಜರಾತಿನ ಸ್ವೀಪ್ ಸಹ ಭರಿಸಲಾಗಲಿಲ್ಲ.

ಪಶ್ಚಿಮ ರಾಜ್ಯಗಳಲ್ಲೂ ಬಿಜೆಪಿಗೆ ಬಹಳ ನಷ್ಟ



ಪಶ್ಚಿಮ ಪ್ರದೇಶದಲ್ಲಿ, ಒಟ್ಟು 78 ಸೀಟುಗಳು ಇದ್ದು, ಅದರಲ್ಲಿ ಎನ್.ಡಿ.ಎ ಕೂಟ 2019ರಲ್ಲಿ ಗಳಿಸಿದ್ದ 29 ಸೀಟುಗಳನ್ನು ಕಳೆದುಕೊಂಡು 44 ಸೀಟುಗಳಿಗೆ ಕುಸಿದಿದೆ. ಅದರಲ್ಲಿ ಹೆಚ್ಚಿನ (28) ಸೀಟು ಕಳೆದುಕೊಂಡದ್ದು ಮಹಾರಾಷ್ಟ್ರದಲ್ಲಿ. ದೊಡ್ಡ ರಾಜ್ಯವಾದ ಉತ್ತರ ಪ್ರದೇಶದಷ್ಟೇ ಮಹಾರಾಷ್ಟ್ರದಲ್ಲಿ. ಸಹ ಕಳೆದಕೊಂಡಿದೆ ಎಂಬುದು ಗಮನಾರ್ಹ. ಇಂಡಿಯಾ ಕೂಟ 32 ಸೀಟುಗಳನ್ನು ಗಳಿಸಿದ್ದು 30 ಹೆಚ್ಚು ಸೀಟುಗಳನ್ನು ಗಳಿಸಿದೆ. ಎನ್.ಡಿ.ಎ ಕೂಟ ಈ ಪ್ರದೇಶದಲ್ಲಿ ಶೇ.14.4 ಮತ ಕಳೆದುಕೊಂಡು ಶೇ.50.4 ಮತ ಗಳಿಸಿದೆ. ಎಲ್ಲ ಪ್ರದೇಶಗಳಿಗಿಂತ ಹೆಚ್ಚು ಮತಪ್ರಮಾಣವನ್ನು ಎನ್.ಡಿ.ಎ ಮಹಾರಾಷ್ಟ್ರ ದಲ್ಲಿ ಕಳೆದುಕೊಂಡಿದೆ. ಇಂಡಿಯಾ ಕೂಟ ಶೇ.12.4 ರಷ್ಟು ಮತಗಳಿಕೆ ಹೆಚ್ಚಿಸಿಕೊಂಡು ಶೇ. 34.5 ಮತ ಗಳಿಸಿದೆ. ಇತರರು ಶೇ.1.9 ಹೆಚ್ಚು ಮತ ಗಳಿಸಿ ಶೇ,.15.1 ಮತ ಗಳಿಸಿದ್ದಾರೆ.

ಪಶ್ಚಿಮ ಪ್ರದೇಶದ ಸೀಟು–ಮತಪ್ರಮಾಣ ಗಳಿಕೆ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ–ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	44	-29	50.4	-14.4
ಇಂಡಿಯಾ	32	+30	34.5	+12.4
ಇತರೆ	2	-1	15.1	+1.9

ಮಹಾರಾಷ್ಟ್ರ

ಮಹಾರಾಷ್ಟ್ರದಲ್ಲಿ ಎನ್.ಡಿ.ಎ ಸೀಟುಗಳಲ್ಲೂ (45ರಿಂದ 17ಕ್ಕೆ) ಮತಪ್ರಮಾಣದಲ್ಲೂ ಹೆಚ್ಚಿನ ನಷ್ಟ (ಶೇ. 7.8) ಅನುಭವಿಸಿದೆ. ಇವೆಲ್ಲವೂ ಇಂಡಿಯಾ ಕೂಟಕ್ಕೆ ಲಾಭವಾಗಿದೆ. ಇತರರು 1 ಸೀಟು ಕಳೆದುಕೊಂಡು ಶೇ. 4.8 ರಷ್ಟು ಮತ ಕಳೆದುಕೊಂಡಿದ್ದಾರೆ. ಈ ಮತಗಳೂ ಮಹಾರಾಷ್ಟ್ರ ವಿಕಾಸ ಅಘಾಡಿ (ಎಂ.ವಿ.ಎ ಅಥವಾ ಇಂಡಿಯಾ) ಕೂಟಕ್ಕೆ ಹೋಗಿದ್ದು ತನ್ನ ಮತಪ್ರಮಾಣ ಶೇ.+11.6 ರಷ್ಟು ಹೆಚ್ಚಿಸಿಕೊಂಡಿದೆ. ಎನ್.ಡಿ.ಎ ಕೂಟದ ಬಿಜೆಪಿ 28ರಲ್ಲಿ ಸ್ಪರ್ಧಿಸಿ 9 ಸೀಟು, ಶಿವಸೇನಾ 15ರಲ್ಲಿ 7 ಸೀಟು, ಎನ್.ಸಿ.ಪಿ 4 ರಲ್ಲಿ 1 ಸೀಟು ಗಳಿಸಿವೆ. ಇಂಡಿಯಾ ಕೂಟದ ಕಾಂಗ್ರೆಸ್ 17 ಸ್ಪರ್ಧಿಸಿ 13 ಸೀಟು, ಶಿವಸೇನಾ (ಉದ್ಧವ) 21ರಲ್ಲಿ 9 ಸೀಟು ಎನ್.ಸಿ.ಪಿ (ಶರದ್ ಪವಾರ್) 10ರಲ್ಲಿ 8 ಸೀಟು ಗಳಿಸಿದೆ. ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ ಬಹುಜನ ಅಘಾಡಿ, ಎಐಎಂಐಎಂ ಮತ್ತು ಪಕ್ಷೇತರರು ಇರುವ ಇತರರಲ್ಲಿ ಒಬ್ಬ ಪಕ್ಷೇತರರು ಮಾತ್ರ ಗೆದ್ದಿದ್ದಾರೆ. ವಂಚಿತ ಬಹುಜನ ಅಘಾಡಿ 35 ಸೀಟುಗಳಲ್ಲಿ ಸ್ಪರ್ಧಿಸಿದ್ದು, 2019ರಲ್ಲಿ 11 ಸೀಟುಗಳಲ್ಲಿ ಇಂಡಿಯಾ ಕೂಟದ ಗೆಲುವಿಗೆ ತಡೆಯೊಡ್ಡಿದ್ದರೆ, ಈ ಬಾರಿ ಅದು 4 ಸೀಟುಗಳನ್ನು ಮಾತ್ರ ಎನ್.ಡಿ.ಎ ಗೆ ಹೆಚ್ಚಿಸುವುದರಲ್ಲಿ ಸಹಾಯಕವಾಗಿದೆ. ದೊಡ್ಡ ರಾಜ್ಯಗಳಲ್ಲಿ (ದಕ್ಷಿಣದ ರಾಜ್ಯಗಳನ್ನು ಹೊರತು ಪಡಿಸಿ) ಮಹಾರಾಷ್ಟ್ರದಲ್ಲಿ ಮಾತ್ರ ಇಂಡಿಯಾ ಕೂಟ ಎನ್.ಡಿ.ಎ ಕೂಟಕ್ಕಿಂತ ಹೆಚ್ಚು ಮತ ಗಳಿಸಿದೆ.

ಮಹಾರಾಷ್ಟ್ರದ ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ–ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	17	-28	43.6	-7.8
ಇಂಡಿಯಾ	30	+29	43.7	+11.6
ಇತರೆ	1	-1	12.7	-4.8

ಮಹಾರಾಷ್ಟ್ರದ ಬಿಜೆಪಿ/ಎನ್.ಡಿ.ಎ ಸೋಲು ನಿರ್ಣಾಯಕವಾಗಿತ್ತು. 20 ಹಾಲಿ ಸಂಸದರು, 3 ಕೇಂದ್ರ ಮಂತ್ರಿಗಳು ಪರಾಭವಗೊಂಡಿದ್ದಾರೆ.

ಅಕ್ಟೋಬರ್ ನಲ್ಲಿ ವಿಧಾನಸಭೆ ಚುನಾವಣೆಗಳು ನಡೆಯಲಿದ್ದು ಇಂಡಿಯಾ ಕೂಟದ ಐಕ್ಯತೆ ಮುಂದುವರೆದರೆ ಎನ್.ಡಿ.ಎ ಕೂಟ ಅಧಿಕಾರ ಕಳೆದುಕೊಳ್ಳುವುದು ಖಚಿತವಾಗಿದೆ. ಈ ಚುನಾವಣೆಗಳಲ್ಲೇ ವಿಧಾನಸಭಾ ಕ್ಷೇತ್ರವಾರು ಕೂಟಗಳ ಮುನ್ನಡೆ ಪರಿಶೀಲಿಸಿದರೆ ಇಂಡಿಯಾ ಕೂಟಕ್ಕೆ ಬಹುಮತ ಸಿಕ್ಕಿದೆ ಎಂಬ ವಿಶ್ಲೇಷಣೆಗಳು ಪ್ರಕಟವಾಗಿವೆ. ಇದಲ್ಲದೆ ಫಲಿತಾಂಶಗಳ ನಂತರ ಚುನಾವಣಾ ಕಮಿಶನ್ ಪ್ರಕಾರ "ಅಸಲಿ", ನಿಜವಾಗಿಯೂ "ನಕಲಿ" ಮುಖ್ಯಮಂತ್ರಿ ಶಿಂಧೆ ಯವರ ಶಿವಸೇನೆ ಬಣದ ಶಾಸಕರು ಆತಂಕಿತರಾಗಿ ಉದ್ಧವ ಠಾಕ್ರೆ ಕದ ತಟ್ಟುತ್ತಿದ್ದಾರೆ. ಅದೇ ರೀತಿ ಅಜಿತ್ ಪವಾರ್ ನಾಯಕತ್ವದ ಎನ್.ಸಿ,ಪಿ ಯ ಶಾಸಕರೂ ಶರದ ಪವಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ. ಇದು ನಿಜವಾದರೆ ಎನ್.ಡಿ.ಎ ಕೂಟವೇ ರಾಜ್ಯದಲ್ಲಿ ಕುಸಿದು ಬಿದ್ದಂತೆ. ಆದರೆ ಇಂಡಿಯಾ ಕೂಟದ ವಿಧಾನಸಭಾ ಚುನಾವಣಾ ಸೀಟು ಹೊಂದಾಣಿಕೆಗೆ ಇದು ಹೊಸ ಸಮಸ್ಯೆ ಸೃಷ್ಟಿಸಬಹುದು ಎಂಬುದು ಬೇರೆಯೇ ಚರ್ಚೆಯ ವಿಷಯ.

ಬಿಜೆಪಿ ವಿರುದ್ಧ ಮಹಾರಾಷ್ಟ್ರದ ಸುನಾಮಿಯ ಕಾರಣಗಳು ಹಲವು. ಶಿವಸೇನಾ ಮತ್ತು ಎನ್.ಸಿ.ಪಿ ಪಕ್ಷಗಳನ್ನು ಬಿಜೆಪಿ ಅತ್ಯಂತ ಹೇಯ ರೀತಿಯಲ್ಲಿ ವಿಭಜಿಸಿ ಮಹಾರಾಷ್ಟ್ರ ವಿಕಾಸ ಅಘಾಡಿಯ ಸರಕಾರ ಉರುಳಿಸಿದ್ದು, ಆರ್ಥಿಕ ಮತ್ತು ಗ್ರಾಮೀಣ ಸಂಕಟ, ಮರಾಠಾ ಮೀಸಲಾತಿ, ವಂಚಿತ ಬಹುಜನ ಅಘಾಡಿ ಎನ್.ಡಿ.ಎ ಮತಗಳನ್ನು ಒಡೆಯುವುದರಲ್ಲಿ ವಿಫಲವಾದದ್ದು, ಮಹಾರಾಷ್ಟ್ರದ ಪ್ರಾಜೆಕ್ಟುಗಳನ್ನು ಗುಜರಾತಿಗೆ ವರ್ಗಾಯಿಸದ್ದರ ವಿರುದ್ಧ ಆಕ್ರೋಶ, ಸಂವಿಧಾನ ರಕ್ಷಣೆ ಕೋಮುವಾದಿ ಫ್ಯಾಸಿಸಂ ಸೋಲಿಸಲು ಸ್ವತಂತ್ರ ಮಾಧ್ಯಮಗಳ ಮತ್ತು ನಾಗರಿಕ ಸಂಘಟನೆಗಳ ವ್ಯಾಪಕ ಕೆಲಸ, – ಇವು ಪ್ರಮುಖ ಕಾರಣಗಳು.

ಗುಜರಾತ್

ಗುಜರಾತಿನಲ್ಲಿ ಬಿಜೆಪಿ/ಎನ್.ಡಿ.ಎ 1 ಸೀಟು ಮಾತ್ರ ಕಳೆದುಕೊಂಡು ತನ್ನ ಎಂದಿನ ಸ್ವೀಪ್ ಮುಂದುವರೆಸಿದೆ. ಮತಪ್ರಮಾಣದಲ್ಲಿ ಸಹ ಸ್ವಲ್ಪ ನಷ್ಟ (0.5%ರಷ್ಟು) ಅನುಭವಿಸಿದೆ. ಸೂರತ್ ನಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರವನ್ನು ವಿವಾದಾಸ್ಪದ ರೀತಿಯಲ್ಲಿ ತಿರಸ್ಕರಿಸಿ, ಉಳಿದ ಎಲ್ಲಾ ಅಭ್ಯರ್ಥಿಗಳು ನಾಮಪತ್ರ ವಾಪಸು ಪಡೆಯುವಂತೆ ಒತ್ತಡ ಹೇರಿದ್ದು ಮುಂತಾದ ನಗ್ನ ಅನೈತಿಕ ಕಾನೂನು ಬಾಹಿರ ಕೃತ್ಯಗಳು ಬಿಜೆಪಿ ವಿಜಯಕ್ಕೆ ಕಪ್ಪು ಚುಕ್ಕೆಯಾಗಿದೆ. ನಾಮಪತ್ರ ವಾಪಸು ಪಡೆಯಲು ಬೆದರಿಕೆ, ಆಮಿಷ, ಒತ್ತಡ ಹೇರುವ ಇಂತಹ ಹಲವು ಅನೈತಿಕ ಕಾನೂನು ಬಾಹಿರ ಕೃತ್ಯಗಳು ಇತರ ಕ್ಷೇತ್ರಗಳಲ್ಲೂ ಆಗಿವೆ ಎಂದು ವರದಿಯಾಗಿದೆ. ಕನಿಷ್ಠ 5 ಕ್ಷೇತ್ರಗಳಲ್ಲಿ ಬಿಜೆಪಿ ಕೆಲವು ಹಂತಗಳಲ್ಲಿ ಹಿಂದಿತ್ತು ಮತ್ತು ಬಿರುಸಿನ ಸ್ಪರ್ಧೆಯಿತ್ತು.

ಈ ಬಾರಿ ಗುಜರಾತಿನಲ್ಲಿ ಇಂಡಿಯಾ ಕೂಟದ ಭಾಗವಾಗಿ ಎಎಪಿ ಮತ್ತು ಕಾಂಗ್ರೆಸ್ ಸೀಟು ಹೊಂದಾಣಿಕೆ ಮಾಡಿಕೊಂಡಿದ್ದು, ಕಾಂಗ್ರೆಸ್ 24 ಸೀಟುಗಳಲ್ಲಿ, ಎಎಪಿ 2 ಸೀಟುಗಳಲ್ಲಿ ಸ್ಪರ್ಧಿಸಿತ್ತು. ಇಂಡಿಯಾ ಕೂಟದ ಮತಪ್ರಮಾಣ ಸ್ವಲ್ಪ (1.9%) ಏರಿಕೆ ಕಂಡಿದೆ. ಕಾಂಗ್ರೆಸ್ ಬನಾಸ್ಕಾಂಟಾ ಕ್ಷೇತ್ರವನ್ನು ಗೆದ್ದುಕೊಂಡಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಶೂನ್ಯ ಸಂಪಾದನೆ ಮಾಡಿದ್ದ ಕಾಂಗ್ರೆಸ್ ಈ ಬಾರಿ ಖಾತೆ ತೆರೆದಿದೆ.

ಗುಜರಾತ್–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ–ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎನ್.ಡಿ.ಎ.	25	–1	61.8	–05
ಇಂಡಿಯಾ	1	+1	34.0	+1.9
ಇತರೆ	0	0	4.2	–1.4

ಗುಜರಾತಿನಲ್ಲಿ ಬಿಜೆಪಿಯ ಪ್ರಾಬಲ್ಯಕ್ಕೆ ಕಾರಣ ರಾಜ್ಯದ ಜನತೆಯ ದೊಡ್ಡ ವಿಭಾಗವನ್ನು ಕೋಮುವಾದಿಕರಣ ಮಾಡಿದ್ದು, ಎಲ್ಲ ರಾಜಕೀಯ ಮತ್ತಿತರ ವಿರೋಧವನ್ನು ದಮನ ಮಾಡಿದ್ದು ಮತ್ತು ಅದರ ಸಂಘಟನಾ ಶಕ್ತಿ ಮಾತ್ರವಲ್ಲ. ಕಾಂಗ್ರೆಸ್ ಕೋಮುವಾದ, ಪ್ರಜಾಸತ್ತೆಯ ದಮನಕ್ಕೆ ಸವಾಲೊಡ್ಡಿ ದೃಢವಾಗಿ ನಿಲ್ಲುವ ರಾಜಕೀಯ ಇಚ್ಛಾಶಕ್ತಿಯಾಗಲಿ, ಸಂಘಟನೆಯನ್ನಾಗಲಿ ಹೊಂದಿರದಿರುವುದು ಅಷ್ಟೇ ಕಾರಣ. ಕಾಂಗ್ರೆಸ್ ನ ಮೃದು ಹಿಂದುತ್ವ ಮತ್ತು ಅಹ್ಮದ್ ಪಟೇಲ್ ನಿಧನಾ ನಂತರ ಚುನಾವಣಾ ರಾಜಕೀಯವನ್ನಾದರೂ ನಡೆಸಬಲ್ಲ ನಾಯಕರ ಅಭಾವ ಅದನ್ನು ಕಾಡುತ್ತಿದೆ. ಈಗ ಎಎಪಿ ಸಕ್ರಿಯವಾಗಿದೆ. ಆದರೂ ಬಿಜೆಪಿ ಗೆ ಪರಿಣಾಮಕಾರಿ ಸವಾಲೊಡ್ಡಲು ಸಾಧ್ಯವಾಗಿಲ್ಲ.

ಈ ಪ್ರದೇಶದ ಇತರ ರಾಜ್ಯವಾದ ಗೋವಾದಲ್ಲಿ ಎನ್.ಡಿ.ಎ ಮತ್ತು ಕಾಂಗ್ರೆಸ್ ಕೂಟ ತಲಾ ಒಂದು ಸೀಟು ಉಳಿಸಿಕೊಂಡಿದೆ. ಕ್ರಾಂತಿಕಾರಿ ಗೋವಾ ಪಕ್ಷ ಎಂಬ ಹೊಸ ಪ್ರಾದೇಶಿಕ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಎರಡೂ ಕೂಟಗಳ ಸ್ವಲ್ಪ ಮತಪ್ರಮಾಣ ಕಿತ್ತುಕೊಂಡು ಶೇ.7ರಷ್ಟು ಮತ ಗಳಿಸಿದೆ.

ಕೇಂದ್ರಾಡಳಿತ ಪ್ರದೇಶವಾದ ದಾದ್ರಾ ನಗರ ಹವೇಲಿಯಲ್ಲಿ ಬಿಜೆಪಿ ಗೆದ್ದು, ಕಾಂಗ್ರೆಸ್ ಎರಡನೆಯ ಸ್ಥಾನದಲ್ಲಿದ್ದು ಭಾರತೀಯ ಆದಿವಾಸಿ ಪಕ್ಷದ ಅಭ್ಯರ್ಥಿ 1 ಲಕ್ಷಕ್ಕೂ ಹೆಚ್ಚು ಮತ ಪಡೆದು ಮೂರನೇ ಸ್ಥಾನದಲ್ಲಿದ್ದಾರೆ. ದಮನ್ ದೀವ್ ನಲ್ಲಿ ಒಬ್ಬ ಪಕ್ಷೇತರ ಅಭ್ಯರ್ಥಿ ಬಿಜೆಪಿ, ಕಾಂಗ್ರೆಸ್ ಎರಡೂ ಅಭ್ಯರ್ಥಿಗಳನ್ನು ಸೋಲಿಸಿ ಆಯ್ಕೆಯಾಗಿದ್ದಾರೆ. ಬಿಜೆಪಿ ಕಾಂಗ್ರೆಸೇತರ ಪಕ್ಷ ಮತ್ತು ಪಕ್ಷೇತರರ ಪ್ರಾಬಲ್ಯವಿದ್ದ ಈ ಎರಡು ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್ ಗಳು ತಮ್ಮ ಮತಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿವೆ.

ಕಾರ್ಮಿಕ ವರ್ಗ....... ಪುಟ 6 ರಿಂದ

ಮುಂದಕ್ಕೆ ದಾರಿ

ಇಂದಿನ ರಾಜಕೀಯ ಸನ್ನಿವೇಶದಲ್ಲಿ, ಭಾರತೀಯ ಕಾರ್ಮಿಕ ವರ್ಗವು ಪ್ರಸ್ತುತ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳಲು ಮತ್ತು ಸಾಮಾಜಿಕ ಬದಲಾವಣೆಯನ್ನು ಸಾಧಿಸಲು–ಕಾರ್ಮಿಕರಲ್ಲಿ ದೊಡ್ಡ ಪ್ರಮಾಣದಲ್ಲಿ ಒಮ್ಮತವನ್ನು ಮೂಡಿಸಲು ಏನು ಮಾಡಬೇಕು? ಇದಕ್ಕೆ ಒಂದೇ ಸಾಲಿನಲ್ಲಿ ಉತ್ತರಿಸಲಾಗುವುದಿಲ್ಲ. ಆದರೆ 1905 ರಲ್ಲಿ, ರಾಜಕೀಯ ಬಿರುಗಾಳಿಯು ಅದರ ಕೇಂದ್ರದಲ್ಲಿದ್ದಾಗ, ರಷ್ಯಾದ ಕಾರ್ಮಿಕ ವರ್ಗವು ಉಬ್ಬರವಿಳಿತದ ಲಾಭವನ್ನು ಪಡೆದುಕೊಂಡಿತು ಮತ್ತು ನಿರ್ಣಾಯಕ ಕ್ರಮದ ಹಾದಿಯಲ್ಲಿ ಮುನ್ನಡೆಯಿತು ಎಂದು ನಾವು ನೆನಪಿಸಿಕೊಳ್ಳೋಣ.

ಸಾರ್ವತ್ರಿಕ ಮುಷ್ಕರದ ಅಸ್ತ್ರದ ಮೂಲಕ

ವಿಶ್ವ ಕ್ರಾಂತಿಕಾರಿ ಕಾರ್ಮಿಕ ವರ್ಗ ಚಳುವಳಿಯ ಅನುಭವದಿಂದ ಮೂರು ಪ್ರಮುಖ ಪಾಠಗಳು ಹೊರಹೊಮ್ಮಿದವು. ಮೊದಲನೆಯದಾಗಿ, ಹೋರಾಟದ ನಿರ್ಣಾಯಕ ಹಂತದಲ್ಲಿ ಕಾರ್ಖಾನೆಯ ಕಾರ್ಮಿಕರ ನೇರ ಪ್ರಜಾಪ್ರಭುತ್ವದ ಅಭ್ಯಾಸವು ನಿಜವಾಗಿಯೂ ಭರವಸೆ ನೀಡಿತು. ಇದು ರಷ್ಯಾದ ಕಾರ್ಮಿಕ ಜನಸಂಖ್ಯೆಯ ಇತರ ವಿಭಾಗಗಳಲ್ಲಿ, ರೈತರು ಮತ್ತು ಸೈನಿಕರಲ್ಲಿ ಕ್ರಾಂತಿಯ ಬೆಂಕಿಯನ್ನು ತ್ವರಿತವಾಗಿ ಹರಡಿತು. ಎರಡನೆಯದಾಗಿ, ಇದು ಹೋರಾಟವನ್ನು ಆರ್ಥಿಕ ಬೇಡಿಕೆಗಳಿಂದ ರಾಜಕೀಯ ಗುರಿಗಳಿಗೆ ತೆಗೆದುಕೊಂಡಿತು. ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದು; ಎಲ್ಲಾ ಕಾರ್ಮಿಕ ವರ್ಗಗಳನ್ನು ಒಳಗೊಂಡ ಸಾರ್ವತ್ರಿಕ ಮುಷ್ಕರದ ಅಸ್ತ್ರದ ಬಳಕೆಯು ಶ್ರಮಜೀವಿಗಳನ್ನು ಎಲ್ಲಾ ದುಡಿಯುವ ಜನರ ನಾಯಕನನ್ನಾಗಿ ಸ್ಥಾಪಿಸಿತು. ಅಸ್ತಿತ್ವದಲ್ಲಿರುವ ರಾಜ್ಯ ಉಪಕರಣದ ಗಂಭೀರ ಬಿಕ್ಕಟ್ಟು ಅಪಕ್ವವಾಗಿರುವಾಗಲೂ ಶ್ರಮಜೀವಿಗಳ ನಾಯಕತ್ವದಲ್ಲಿ ಪರ್ಯಾಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಚಿಸುವುದು ಮೂರನೆಯ ಮತ್ತು ಪ್ರಮುಖವಾಗಿದೆ.

ಭಾರತೀಯ ಸಮಾಜದಲ್ಲಿನ ಈಗಿನ ಸ್ಥಬ್ದತೆಯನ್ನು ಅಲುಗಾಡಿಸಲು, ಕಾರ್ಮಿಕ ವರ್ಗವು ಸ್ಪಷ್ಟ ದೃಷ್ಟಿಯೊಂದಿಗೆ ಕ್ರಾಂತಿಕಾರಿ ಚಿಂತನೆಯನ್ನು ಮುನ್ನಡೆಸಬೇಕು. ಯಾವುದೇ ಕ್ರಾಂತಿಕಾರಿ ಬದಲಾವಣೆಯ ವಸ್ತುನಿಷ್ಠ ಪರಿಸ್ಥಿತಿಯು(Objective situation) ವರ್ಗದ ವ್ಯಕ್ತಿನಿಷ್ಠ ಉತ್ಪಾದನೆ(Subjective production of class)ಯನ್ನು ಅವಲಂಬಿಸಿರುತ್ತದೆ. ಗಮನಿಸಬೇಕಾದ ಅಂಶವೆಂದರೆ 1916 ರಲ್ಲಿ ಸಹ ರಷ್ಯಾಕ್ಕೆ 1917 ರ ಕ್ರಾಂತಿಯ ಬಗ್ಗೆ ಯಾವುದೇ ಸುಳಿವು ಇರಲಿಲ್ಲ.

ಅಂತಹ ಐತಿಹಾಸಿಕ ಪಾಠಗಳೊಂದಿಗೆ, ಸಿಐಟಿಯುನ 55 ನೇ ಸಂಸ್ಥಾಪನಾ ದಿನದಂದು, ಶ್ರಮಜೀವಿಗಳ ನಾಯಕತ್ವವನ್ನು ಹತ್ತಿಕ್ಕಲು ಪ್ರಯತ್ನಿಸುವ ಎಲ್ಲಾ ಪ್ರತಿಗಾಮಿ ಸಿದ್ಧಾಂತಗಳು ಮತ್ತು ಆಚರಣೆಗಳ ವಿರುದ್ಧ ಸೈದ್ಧಾಂತಿಕ–ರಾಜಕೀಯ ಹೋರಾಟವನ್ನು ಅನಾವರಣಗೊಳಿಸಲು ಪ್ರತಿಜ್ಞೆ ಮಾಡೋಣ. ಕಾರ್ಮಿಕ ವರ್ಗವು ಸಾಮಾಜಿಕ ಬದಲಾವಣೆಯ ಸಿದ್ಧಾಂತದಿಂದ ಮಾರ್ಗದರ್ಶಿಸಲ್ಪಟ್ಟರೆ, ಯಶಸ್ಸು ಖಂಡಿತವಾಗಿಯೂ ಸಂಭವಿಸುತ್ತದೆ. ಮುಂದಿನ ದಿನಗಳಲ್ಲಿ ಜಗತ್ತನ್ನು ಉತ್ತಮ ಭವಿಷ್ಯದತ್ತ ಕೊಂಡೊಯ್ಯುವ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿರುವ ಕಾರ್ಮಿಕ ವರ್ಗದ ಸಿದ್ಧಾಂತದ ಬಲವಾದ ಪ್ರಭಾವವನ್ನು ಚೇತರಿಸಿಕೊಳ್ಳುವುದು ನಮ್ಮ ಕಾರ್ಯವಾಗಿದೆ.

–ಸಿಚಿ

(ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಸುದೀಪ್ ದತ್ತಾ, ಸಿಐಟಿಯು ದೆಹಲಿ ರಾಜ್ಯ ಕಾರ್ಯದರ್ಶಿ ಸುನಂದ್ ಅವರ ಲೇಖನದಿಂದ)

NEW No. MAG(3)/NPP/205/2021-2022
JANASHAKTHI KANNADA VARA PATRIKE June 10-16, 2024 Price: Rs. 10/- Date of Publication: 07 June 2024 RNI No. KARKAN /2006/17926 Posted on 12-06-2024
Posted at BG PSO, BG - 560026 **Posted at Periodical Rate -** Rs. 2





‘ಬಂಡವಾಳ’ ಮಾರ್ಕ್ಸ್‌ವಾದಿ ಸಿದ್ಧಾಂತದ ಬ್ರಹ್ಮಾಸ್ತ್ರ

ಜೂನ್ 2ರಂದು ‘ಬಂಡವಾಳ ಸಂಪುಟ-2’ ಬಿಡುಗಡೆ, ಏಂಗೆಲ್ಸ್-200 ಮಾಲಿಕೆ ಸಮಾರೋಪ ಮತ್ತು “ಇಂದಿನ ಬಂಡವಾಳಶಾಹಿಯನ್ನು ಅರ್ಥೈಸಲು ‘ಬಂಡವಾಳ’ದ ಓದು” ಕುರಿತು ವಿಚಾರ ಸಂಕಿರಣ ಬೆಂಗಳೂರಿನಲ್ಲಿ ನಡೆಯಿತು. ಆ ಸಮಾರಂಭದ ವರದಿ.

ಹೀಗೆಂದವರು ಪ್ರಸಿದ್ಧ ಚಿಂತಕರಾದ ಡಾ.ಜಿ.ರಾಮಕೃಷ್ಣ. ಅವರು “ಬಂಡವಾಳ ಸಂಪುಟ-2’ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಮಾರ್ಕ್ಸ್‌ವಾದದ ಸಾರ ಕಟ್ಟಿಕೊಡುವ ‘ಮಾನವನ ಐಹಿಕಾಭ್ಯುದಯ’ (Mans Worldly Goods) ದಂತಹ ಹಲವು ಪುಸ್ತಕಗಳಿವೆ. ಆದರೆ ಹಲವು ವಿಷಯಗಳ ಕುರಿತು ಮಾರ್ಕ್ಸ್ ನ ಮೂಲಗ್ರಂಥಗಳಿಗೆ ಹೋಗಬೇಕಾಗುತ್ತದೆ. ‘ಬಂಡವಾಳ’ ಗ್ರಂಥ ಮಾರ್ಕ್ಸ್ ವಾದಿ ಸಿದ್ಧಾಂತದ ಬ್ರಹ್ಮಾಸ್ತ್ರವಿದ್ದಂತೆ. ಅದು ಕನ್ನಡಕ್ಕೆ ಅನುವಾದವಾಗಿ ಲಭ್ಯವಾಗುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಹೇಳಿದರು. ಸಿದ್ಧಾಂತ ನಮಗೆ ಯಾವುದೇ ಮಾದರಿಯಲ್ಲಿ ದಕ್ಕಿದ್ದರೂ, ಸಿದ್ಧಾಂತದ ಹಿಂದೆ ಇರುವ ಗ್ರಹಿಕೆಯನ್ನು ಆಯಾ ಕಾಲಕ್ಕೆ ಅನ್ವಯ ಮಾಡಿ ಪ್ರಜ್ಞಾಪೂರ್ವಕವಾಗಿ, ಸಾಮುದಾಯಿಕವಾಗಿ ಇವತ್ತಿನ ಪರಿಸ್ಥಿತಿಯನ್ನು ಅರ್ಥೈಸಿಕೊಂಡು, ಆ ಸನ್ನಿವೇಶದಲ್ಲಿ ಮಧ್ಯಪ್ರವೇಶ ಮಾಡಿದಾಗ ಅರ್ಥಪೂರ್ಣವಾಗುತ್ತದೆ. ‘ಬಂಡವಾಳ’ ಗ್ರಂಥದ ಓದು ಹೀಗೆ ಅರ್ಥಪೂರ್ಣವಾಗಲಿ ಎಂದು ಹಾರೈಸಿದರು. ಈ ಪುಸ್ತಕದ ಅನುವಾದಕರು ಪಿ.ಎ. ಕುಮಾರ್ ಮತ್ತು ವಿ.ಎನ್.ಲಕ್ಷ್ಮೀನಾರಾಯಣ.

‘ಆರ್ಥಿಕ ಬೆಳವಣಿಗೆಯಲ್ಲಿ ಸಮಾಜದಲ್ಲಿ ದುಡಿಮೆಯ ಮಹತ್ವವನ್ನು ಈ ಪುಸ್ತಕಗಳು ತಿಳಿಸಿಕೊಡುತ್ತದೆ’ ಎಂದು ನಾಡಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ.ಟಿ.ಆರ್.ಚಂದ್ರಶೇಖರ್ ಇದೇ ಸಂದರ್ಭದಲ್ಲಿ “ಬಂಡವಾಳ ಸಂಪುಟ-1 ಪ್ರವೇಶಿಕೆ ಮತ್ತು ಗೈಡ್ ಪುಸ್ತಕದ ಬಗ್ಗೆ ಮಾತನಾಡುತ್ತಾ ಹೇಳಿದರು. ಬಂಡವಾಳ ಸಂಪುಟ-1ರ ಹಿನ್ನೆಲೆ, ಪ್ರಸ್ತುತತೆ, ಸಾರಾಂಶವನ್ನು ಸರಳ ಭಾಷೆಯಲ್ಲಿ ಕೊಡುವ ‘ಪ್ರವೇಶಿಕೆ’ ಮತ್ತು ಅಧ್ಯಾಯವಾರು ಸಾರಾಂಶ ಬಂಡವಾಳಶಾಹಿ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಅದನ್ನು ಓದಲು ಪ್ರೇರೇಪಿಸುತ್ತದೆ ಎಂದರು. ಈ ಪುಸ್ತಕದ ಲೇಖಕರು ವಸಂತರಾಜ ಎನ್.ಕೆ., ವೇದರಾಜ ಎನ್.ಕೆ ಮತ್ತು ವಿ.ಎನ್.ಲಕ್ಷ್ಮೀನಾರಾಯಣ.

ಆ ಸಂದರ್ಭದಲ್ಲಿ ನಡೆದ “ಇಂದಿನ ಬಂಡವಾಳಶಾಹಿಯನ್ನು ಅರ್ಥೈಸಲು ‘ಬಂಡವಾಳ’ದ ಓದು” ಎಂಬ ವಿಚಾರಸಂಕಿರಣದಲ್ಲಿ ‘ದಿಕ್ಸೂಚಿ ಭಾಷಣ’ ಮಾಡಬೇಕಿದ್ದ ದೇಶದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ.ವೆಂಕಟೇಶ ಆತ್ರೇಯ ತಾನು ಅದರ ಬದಲು “ಸಂಭ್ರಮಿಸುವ ಭಾಷಣ’ ಮಾಡುತ್ತೇನೆಂದರು. ಬಂಡವಾಳ ಗ್ರಂಥದ ಸಂಪುಟ-2 ರ ಕನ್ನಡ ಅನುವಾದವನ್ನು ಇಂದಿನ ಸನ್ನಿವೇಶಧಲ್ಲಿ ಪ್ರಕಟಿಸುತ್ತಿರುವುದು ಸಂಭ್ರಮದ ವಿಷಯವೆಂದರು. ನಮ್ಮ ದೇಶದಲ್ಲೂ ಜಾಗತಿಕವಾಗಿಯೂ ಮಾರ್ಕ್ಸ್‌ವಾದ ಮತ್ತು ಅದರ ಆಧಾರಿತ ಚಳುವಳಿಗಳ “ಕೊಲೆಗೆ ನಿರಂತರವಾಗಿ ಹಲವು ಪ್ರಯತ್ನಗಳು” ನಡೆದಿವೆ. ಆದರೆ ಅದು ಯಶಸ್ವಿಯಾಗಿಲ್ಲವೆಂಬುದಕ್ಕೆ ಈ ಸಮಾರಂಭವೇ ಸಾಕ್ಷಿಯೆಂದರು. ಐಐಟಿ ಮದ್ರಾಸ್ ನಲ್ಲಿ ಕೆಮಿಕಲ್ ಇಂಜಿನೀಯರಿಂಗ್ ನಂತರ ಅರ್ಥಶಾಸ್ತ್ರದ ಸ್ನಾತಕೋತ್ತರ ಮತ್ತು ಪಿ.ಎಚ್.ಡಿ. ಗೆ ಅಮೆರಿಕಕ್ಕೆ ಹೋದಾಗ ತಾವು ಮಾರ್ಕ್ಸ್‌ವಾದಕ್ಕೆ ತೆರೆದುಕೊಂಡ ಬಗೆಯನ್ನು ಬಣ್ಣಿಸಿದರು. ವಿಯೇಟ್ನಾಂ ಯುದ್ಧ-ವಿರೋಧಿ ಚಳುವಳಿ ಮತ್ತು ವಿವಿ ಪಠ್ಯದ ಹೊರಗೆ ನಡೆದ ‘ಬಂಡವಾಳ ಓದು’ ಗುಂಪಿನಲ್ಲಿ ಅಕಾಸ್ಮಾತ್ತಾಗಿ ಭಾಗವಹಿಸುವ ಮೂಲಕ ಮಾರ್ಕ್ಸ್‌ವಾದಕ್ಕೆ ಪ್ರವೇಶ ಪಡೆದೆಯೆಂದರು. ತಥಾಕಥಿತ ಮುಖ್ಯಧಾರೆಯ ಅರ್ಥಶಾಸ್ತ್ರ ಬಂಡವಾಳಶಾಹಿ ಪದೇ ಪದೇ ಬರುವ ಬಿಕ್ಕಟ್ಟು ಯಾಕೆ ಬರುತ್ತದೆ ಎಂದು ವಿವರಿಸಲು ವಿಫಲವಾಗಿದೆ. ಆದರೆ ಇದನ್ನು ವಿವರಿಸಬಲ್ಲ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರವನ್ನು ಮರೆಮಾಚಲು ಪ್ರಯತ್ನಿಸುತ್ತಿದೆ. ನಾನಂತೂ ಇಂದಿನ ಅರ್ಥವಾಗದ ಬಂಡವಾಳಶಾಹಿ ವಿದ್ಯಮಾನ ಜರುಗಿದಾಗ ಬಂಡವಾಳದ ಮೂರು ಸಂಪುಟಗಳಿಗೆ ಹಿಂತಿರುಗುತ್ತೇನೆ. ಇಂದು ಬಂಡವಾಳ ಓದುವಾಗ ಅದು ಇಂದಿನ ಜಾಗತೀಕರಣ ಹೊಂದಿದ ಬಂಡವಾಳಶಾಹಿಗೆ ಹೆಚ್ಚು ಅನ್ವಯಿಸುತ್ತದೆ ಎಂದರು.

ಮಾರ್ಕ್ಸ್ ನಿರೂಪಿಸುವ ಬಂಡವಾಳಶಾಹಿ ಸಮಾಜದ ಪರಿಚಯ ನನಗೆ ಸಾಮಾಜಿಕ ಚಿತ್ರಣ ಇರುವ ಸಾಹಿತ್ಯದ ಮೂಲಕ ಆಯಿತು. ಚಾರ್ಲ್ಸ್ ಡಿಕನ್ಸ್ ಅವರ ‘ಹಾರ್ಡ್ ಟೈಮ್ಸ್’ ಬಂಡವಾಳಶಾಹಿ ಕೈಗಾರಿಕೀಕರಣ ಯಾವ ರೀತಿ ಒಂದು ಮನುಷ್ಯ ಸಮುದಾಯವನ್ನು ಅಮಾನವೀಯಗೊಳಿಸುತ್ತದೆ ಎಂದು ಖ್ಯಾತ ಚಿಂತಕ ಪ್ರೊ. ರಾಜೇಂದ್ರ ಚೆನ್ನಿ ಇದೇ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಹೇಳಿದರು. ಕರಾಳ ವಾಸ್ತವ ಮುಂದಿಡುತ್ತಲೇ ಇಂತಹ ವ್ಯವಸ್ಥೆ ಬರಬೇಕಾದರೆ ಹಿಂದೆ ಇದಕ್ಕೆ ಸಮ್ಮತಿ ಹೇಗೆ ದೊರಕಿರಬೇಕು, ಏನೇನು ಸೈದ್ಧಾಂತಿಕ ತಯಾರಿ ನಡೆದಿರಬೇಕು. ಬಂಡವಾಳಶಾಹಿ ವ್ಯವಸ್ಥೆ ಎಷ್ಟು ಅಸಂಗತವಾಗಿದೆ ಎಂದು ಚಾರ್ಲ್ಸ್ ಡಿಕನ್ಸ್ ಅವರ ಕಾದಂಬರಿಗಳು ತೋರಿಸುತ್ತವೆ ಎಂದರು. ಬಂಡವಾಳಶಾಹಿಯ ಮೂಲ ತರ್ಕವೇ ಸತತವಾಗಿ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ. ಅದರ ಪರಿಹಾರದ ಹೆಸರಲ್ಲಿ ಕೈಗೊಳ್ಳುವ ಕ್ರಮ ಇನ್ನೊಂದು ಬಿಕ್ಕಟ್ಟು ಸೃಷ್ಟಿಸುತ್ತದೆ. ಇದನ್ನು ನಾವು ಯು.ಕೆ.ಯ 1970ರ ಬಿಕ್ಕಟ್ಟನ್ನು ಥ್ಯಾಚರ್ ಹಾಗೂ ಇತ್ತೀಚಿನ 2008 ಮಹಾ ಬಿಕ್ಕಟ್ಟು ಮತ್ತು ಕೊರೊನಾ ಬಿಕ್ಕಟ್ಟುಗಳನ್ನು ನಿರ್ವಹಿಸಿದ ರೀತಿಯ ಸಮಾನತೆ ಕಾಣಬಹುದು. ಪ್ರತಿ ಬಿಕ್ಕಟ್ಟಿನಲ್ಲಿ ದುಡಿಯುವ ಜನರ ಮೇಲೆ ಪ್ರಭುತ್ವ ‘ಮಿತವ್ಯಯ’ದ ಹೆಸರಲ್ಲಿ ಹೊರಿಸುವ ‘ಅರ್ಧ ರೊಟ್ಟಿ ಬದಲು ಕಾಲು ರೊಟ್ಟಿ’ ತರ್ಕ, ಸಾಮಾಜಿಕ ಕಲ್ಯಾಣ ಪ್ರಭುತ್ವ ಕಿತ್ತು ಹಾಕುವುದು, ಬಿಕ್ಕಟ್ಟು ಪರಿಹರಿಸಲು ಆಳುವ ವರ್ಗದ ಪರ ಕ್ರಮಕೈಗೊಳ್ಳುವುದು ಇವನ್ನು ಈ ಎಲ್ಲದರಲ್ಲೂ ಕಾಣಬಹುದು. ಇಂದಿನ ಬಂಡವಾಳಶಾಹಿ ಎಲ್ಲೆಲ್ಲೂ ಪ್ರಗತಿ, ಸೆಕ್ಯುಲರಿಸಂ ಮುಖವಾಡಗಳನ್ನು ಕಳಚಿ, ಎಲ್ಲ ಆದಿಮ ಪ್ರತಿಗಾಮಿ, ಬರ್ಬರತನ, ಅತಾರ್ಕಿಕಕತೆಗಳಿಗೆ ತೆರೆದುಕೊಂಡು ಬೆತ್ತಲಾಗಿದೆ. ಇದಕ್ಕೆ ಕಾರ್ಮಿಕರ ಆರ್ಥಿಕ ಹೋರಾಟಗಳ ಜತೆ ಮಹಿಳಾವಾದಿ, ಆದಿವಾಸಿ ಮುಂತಾದ ಹಲವು ಚಳುವಳಿಗಳ ಒಟ್ಟು ಬಹು-ಪ್ರತಿರೋಧದೊಂದಿಗೆ ಎದುರಿಸಬೇಕು ಎಂದು ಪ್ರೊ. ಚೆನ್ನಿ ಹೇಳಿದರು.

ಕೈಗಾರಿಕಾ ಕಾರ್ಮಿಕರಿಗೆ ‘ಬಂಡವಾಳ’ದ ಪರಿಕಲ್ಪನೆಗಳು, ಪ್ರಕ್ರಿಯೆಗಳು ಬೇರೆಯವರಿಗಿಂತ ಸುಲಭವಾಗಿ ಅರ್ಥವಾಗುತ್ತದೆ ಎಂದು ಹೇಳಿದ ಕಾರ್ಮಿಕ ನಾಯಕ ಕೆ.ಎನ್.ಉಮೇಶ್ ಅದನ್ನು ಹಲವು ಉದಾಹರಣೆಗಳೊಂದಿಗೆ ವಿವರಿಸಿದರು. ಬಂಡವಾಳ ದಲ್ಲಿ ನಿರೂಪಿಸಲಾಗುವ ‘ಪರಮ ಮಿಗುತಾಯ ಮೌಲ್ಯ’ ಕ್ಕೂ ಇತ್ತೀಚೆಗೆ ಕರ್ನಾಟಕ ಸರಕಾರ ಕೆಲಸದ ಸಮಯದ ಮಿತಿಯನ್ನು 12 ಗಂಟೆಗೆ ಏರಿಸುವುದಕ್ಕೂ ಇರುವ ಸಂಬಂಧ ಇಂತಹ ಉದಾಹರಣೆ ಎಂದರು. ಅದೇ ರೀತಿ ಕೈಗಾರಿಕಾ ತಂತ್ರಜ್ಞಾನ 4.0 ಅನ್ವಯದ ಮೂಲಕ 2 ನಿಮಿಷಗಳಲ್ಲಿ ಒಂದು ಕಾರು ತಯಾರಿಸುವ ಮೂಲಕ ಸಾಪೇಕ್ಷ ಮಿಗುತಾಯ ಮೌಲ್ಯವನ್ನು ಹೇಗೆ ಗರಿಷ್ಠಗೊಳಿಸಲಾಗುತ್ತದೆಯೆಂದು ವಿವರಿಸಿದರು. ಅಟೊಮೊಬೈಲ್ ಉದ್ಯಮದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಟೊಯೊಟಾ ತನ್ನ ಉತ್ಪಾದನಾ ವ್ಯವಸ್ಥೆಯಲ್ಲಿ ಬಳಸುತ್ತಿರುವ ‘ಜಸ್ಟ್ ಇನ್ ಟೈಮ್’ ವ್ಯವಸ್ಥೆಯ ಉದಾಹರಣೆಯ ಮೂಲಕ ‘ಬಂಡವಾಳ ಸಂಪುಟ 1 ಮತ್ತು 2 ರಲ್ಲಿ ನಿರೂಪಿಸಲಾಗುವ ಉತ್ಪಾದನಾ ಮತ್ತು ಚಲಾವಣಾ ಸಮಯ ಕೂಡಿಸಿ ಬರುವ ಟರ್ನೋವರ್ ಸಮಯ ಕನಿಷ್ಠಗೊಳಿಸುವ ಪ್ರಯತ್ನವನ್ನು ಕೆ.ಎನ್. ಉಮೇಶ್ ಅವರು ಮನಮುಟ್ಟುವಂತೆ ವಿವರಿಸಿದರು.

ಡಾ. ರತಿ ರಾವ್ ಬಂಡವಾಳಶಾಹಿ-ವಿರೋಧಿ ಹೋರಾಟದಲ್ಲಿ ಮಹಿಳಾ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟದ ಮಹತ್ವದ ಕುರಿತು ಮಾತನಾಡಿದರು.

ಈ ಮೂರು ಪುಸ್ತಕಗಳನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದ್ದು, ನವಕರ್ನಾಟಕ ಪ್ರಕಾಶನದೊಂದಿಗೆ ಜಂಟಿಯಾಗಿ ನಿರ್ವಹಿಸಿದ ಏಂಗೆಲ್ಸ್-200’ ಮಾಲಿಕೆಯ ಕೊನೆಯ ಪುಸ್ತಕವಾಗಿತ್ತು. ಹಾಗಾಗಿ ಇದರ ಜತೆ ಏಂಗೆಲ್ಸ್-200’ ಮಾಲಿಕೆಯ ಸಮಾರೋಪ ಸಹ ನಡೆದು ಮಾಲಿಕೆಯ ಎಲ್ಲ ಲೇಖಕರನ್ನು ಸನ್ಮಾನಿಸಲಾಯಿತು. ಎಲ್ಲ ಲೇಖಕರ ಪರವಾಗಿ ಪಿ.ಎ.ಕುಮಾರ್ ಮತ್ತು ವಿ.ಎನ್.ಲಕ್ಷ್ಮೀನಾರಾಯಣ ಅನುವಾದದ ಅನುಭವ ಮತ್ತು ‘ಬಂಡವಾಳ’ ದ ಮಹತ್ವ ಕುರಿತು ಮಾತನಾಡಿದರು.

ವಸಂತರಾಜ್ ಎನ್.ಕೆ. ಮೊದಲಿಗೆ ಪ್ರಸ್ತಾವಿಕವಾಗಿ ಮಾತನಾಡಿದರು. ಕೆ.ಎಸ್. ವಿಮಲಾ ಉಪಸ್ಥಿತರಿದ್ದರು. ಜಿ.ಚಂದ್ರಶೇಖರ್ ಧನ್ಯವಾದ ಸಮರ್ಪಿಸಿದರು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**